Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–37 | ಸೆಪ್ಟೆಂಬರ್ 9–15, 2024 | ಪುಟ 16 | ರೂ.10/–
Volume-18 | Issue-37 | September 9-15, 2024 | Pages:16 | Price: 10/-

ಅನಿಯಂತ್ರಿತ ದೌರ್ಜನ್ಯಗಳು..





ಬದಲಾಗದ ಧೋರಣೆಗಳು:
ಬದಲಿಸಬೇಕು ಮನೋಭಾವ

ಮತಾಂತರಗೊಂಡ ದಲಿತರಿಗೆ ಎಸ್.ಸಿ.ಸ್ಥಾನಮಾನ ಸಿಗುವುದೇ?



ಏಕೀಕೃತ ಪಿಂಚಣಿ ಯೋಜನೆ:
ಹಳೆಯ ಪಿಂಚಣಿ ಯೋಜನೆಯೇ ಉತ್ತಮ

ಫ್ರಾನ್ಸ್: ಫ್ಯಾಸಿಸ್ಟ್-ಅನುಮೋದಿತ ಪ್ರಧಾನಿ ನೇಮಕದ ವಿರುದ್ಧ ಆಕ್ರೋಶ

ಆರ್ಯನ್ ಮಿಶ್ರಾ ಹತ್ಯೆ: ಗಂಭೀರ ಪ್ರಶ್ನೆಗಳು

ತಾಯಿ-ಮಕ್ಕಳ ಆರೋಗ್ಯ ಸಂಬಂಧಿ ಜಾಹಿರಾತುಗಳು ಸುಳ್ಳು ಪ್ರಚಾರಗಳು ಮತ್ತು ವೈಜ್ಞಾನಿಕ ಸತ್ಯಗಳು



ಡಾ.ಎ.ಸಾವಿತ್ರಿಯವರ ಸಂದರ್ಶನ
ಸಂದರ್ಶಕರು-ಆರ್. ರಾಮಕೃಷ್ಣ

ಮಕ್ಕಳು ಬಹಳ ಇಷ್ಟ ಪಟ್ಟು ತಿನ್ನುವ 'ಕಿಂಡರ್ ಜಾಯ್' ಎಂಬ ಚಾಕಲೇಟ್ ನಲ್ಲಿ ಮಕ್ಕಳ ಬೆಳವಣಿಗೆಗೆ ಅಗತ್ಯವಾದ 'ವಿಟಮಿನ್ 12' ಸೇರಿದಂತೆ ನಾನಾ ಬಗೆಯ ಪೋಷಕಾಂಶಗಳು ದೊರೆಯುತ್ತವೆ ಎಂದು ಇಟಲಿ ಮೂಲದ ಆ ಕಂಪನಿಯ ಜಾಹಿರಾತುಗಳು ಸಾರುತ್ತವೆ. ಆದರೆ ವಿಶ್ವ ಆರೋಗ್ಯ ಸಂಸ್ಥೆ ಈ ಕಿಂಡರ್ ಜಾಯ್ ಚಾಕಲೇಟ್ ತಿನ್ನುವುದರಿಂದ 10 ವರ್ಷದ ಮಕ್ಕಳಲ್ಲಿ ಸಾಲ್ಮೊನೆಲ್ಲಾ ಎಂಬ (ಬ್ಯಾಕ್ಟೀರಿಯಾ) ಸೋಂಕು (salmonella poisoning) ಉಂಟಾಗಲಿದೆ ಎಂದು ಎಚ್ಚರಿಕೆ ನೀಡಿದೆ. ಮಕ್ಕಳು ಹಾಗೂ ಗರ್ಭಿಣಿ-ಬಾಣಂತಿಯರು, ತಾಯಂದಿರ ಆರೋಗ್ಯ ರಕ್ಷಣೆಗೆ ಸಂಬಂಧಿಸಿದಂತೆ ಪತ್ರಿಕೆ-ಟಿವಿ ಮುಂತಾದವುಗಳಲ್ಲಿ ನಾವು ಹತ್ತಾರು ಜಾಹಿರಾತುಗಳನ್ನು ನೋಡುತ್ತೇವೆ. ಅವು ಮಕ್ಕಳ ಆರೋಗ್ಯಕರ ಬೆಳವಣಿಗೆ ಮತ್ತು ಜನರ ಆರೋಗ್ಯ ರಕ್ಷಣೆಗೆ ಸಂಬಂಧಿಸಿದಂತೆಯೂ ನಾನಾ ಪ್ರಚಾರಗಳನ್ನು ಮಾಡುತ್ತವೆ. ಈ ಪ್ರಚಾರಗಳಲ್ಲಿ ಸತ್ಯಾಂಶವೆಷ್ಟು? ಸುಳ್ಳುಗಳೆಷ್ಟು? ಎಂಬ ಬಗೆಗೆ ನಾವು ಖಾತರಿ ಪಡಿಸಿಕೊಳ್ಳಬೇಕಿದೆ. ಈ ದೃಷ್ಟಿಯಿಂದ ಖ್ಯಾತ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರು, ತಜ್ಞ ವೈದ್ಯರೂ ಆದ ಡಾ.ಎ.ಸಾವಿತ್ರಿಯವರೊಡನೆ ಒಂದು ಸಂದರ್ಶನ.

ಪ್ರಶ್ನೆ: 'ಜ್ಯೂನಿಯರ್ ಹಾರ್ಲಿಕ್ಸ್', 'ಸೆರಿಲ್ಯಾಕ್ಸ್' ಮುಂತಾದ ಶಿಶು ಆಹಾರಗಳು ಶಿಶುಗಳ ಬೆಳವಣಿಗೆಗೆ, ಶಿಶುವಿನ ಮೆದುಳಿನ ಬೆಳವಣಿಗೆಗೆ ಅವಶ್ಯಕ ಎಂಬಂತಹ ಜಾಹಿರಾತುಗಳನ್ನು ಟಿವಿಗಳಲ್ಲಿ, ಪತ್ರಿಕೆಗಳಲ್ಲಿ ನೋಡುತ್ತೇವೆ. ಇವು ಅವಶ್ಯಕವೇ?

ಡಾ. ಎ.ಸಾವಿತ್ರಿ: ದುರ್ಲಾಭದ ದೃಷ್ಟಿಯಿಂದ ಟಿವಿಗಳಲ್ಲಿ ತೋರಿಸಲಾಗುವ-ಪತ್ರಿಕೆಗಳಲ್ಲಿ ಪ್ರಕಟವಾಗುವ ಜಾಹಿರಾತುಗಳಿಗೆ ನಾವು ಮರುಳಾಗಬಾರದು. ಆರೋಗ್ಯವಂತ ಮಗು ಬೇಕಾದರೆ ಮತ್ತು ಹುಟ್ಟಿದ ಮಗು ಆರೋಗ್ಯವಾಗಿ ಬೆಳೆಯಬೇಕಾದರೆ ಹೆಣ್ಣು ತಾನು ತಾಯಿಯಾಗಬೇಕು ಎಂದಾಗಲೇ ಅದಕ್ಕೆ ಆಕೆ ಮತ್ತು ಆಕೆಯ ಕುಟುಂಬ ಅಗತ್ಯವಾದ ತಯಾರಿ ಮಾಡಿಕೊಳ್ಳಬೇಕು. ಆರೋಗ್ಯವಂತ ತಾಯಿಯಿಂದ ಮಾತ್ರ ಆರೋಗ್ಯವಂತ ಮಗು ಹುಟ್ಟಲು ಸಾಧ್ಯ. ವೈದ್ಯರ ಬಳಿ ಹೋಗಬೇಕು. ಅಗತ್ಯ ವೈದ್ಯಕೀಯ ತಪಾಸಣೆಗಳನ್ನು ಮಾಡಿಸಿಕೊಂಡು ಅಗತ್ಯ ಪ್ರಮಾಣದಲ್ಲಿ ಸೊಪ್ಪು, ತರಕಾರಿ, ಬೇಳೆಕಾಳು, ಹಣ್ಣುಗಳು, ಮಾಂಸಾಹಾರಿಗಳಾದವರು ಮೊಟ್ಟೆ, ಮಾಂಸ ಮುಂತಾದ ಪೌಷ್ಟಿಕ ಆಹಾರವನ್ನು ತೆಗೆದುಕೊಳ್ಳಬೇಕು. ಮತ್ತು ಹೆರಿಗೆಯ ಸಮಯದಲ್ಲಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಇದು ಮೊದಲ ಭಾಗ. ಇನ್ನು ಮಗುವು ತಾಯಿಯ ಹೊಟ್ಟೆಯಿಂದ ಹೊರಬಂದ ನಂತರ ಆರು ತಿಂಗಳ ಕಾಲ ತಾಯಿಯ ಎದೆಹಾಲನ್ನು ಮಾತ್ರ ಕೊಡಬೇಕು. ಆನಂತರ ಮಗುವಿಗೆ ತಾಯಿ ಹಾಲಿನ ಜೊತೆಗೆ ಪೂರಕ ಆಹಾರವನ್ನು ಕೊಡಬೇಕು.

ಪ್ರಶ್ನೆ: ಪೂರಕ ಆಹಾರ ಎಂದರೇನು? ಸ್ವಲ್ಪ ವಿವರಿಸಿ.

ಡಾ. ಎ.ಸಾವಿತ್ರಿ: ಪೂರಕ ಆಹಾರ ಎನ್ನುವುದು ಮಗುವಿನ ವಯಸ್ಸನ್ನು ಅವಲಂಭಿಸಿರುತ್ತದೆ. ಮಗುವಿಗೆ ಆರು ತಿಂಗಳ ನಂತರ ರಾಗಿಯನ್ನು ನೆನೆಸಿ, ಒಣಗಿಸಿ ಪುಡಿಮಾಡಿ ಅಂಬಲಿ ಮಾಡಿ ತಿನ್ನಿಸಬಹುದು. ಅದಕ್ಕೆ ಸ್ವಲ್ಪ ಉಪ್ಪು ಅಥವಾ ಸಕ್ಕರೆ ಹಾಕಿಕೊಡಬಹುದು. ಹಲ್ಲು ಬರುವವರೆಗೆ ಹಣ್ಣಿನ ರಸವನ್ನು ಕುಡಿಸಬಹುದು. ಬೇಯಿಸಿದ ತರಕಾರಿಯ ರಸ(ಸೂಪ್) ಕುಡಿಸಬಹುದು. ಸೊಪ್ಪು, ಬೇಳೆಕಾಳುಗಳನ್ನು ಅಕ್ಕಿಯ ಜೊತೆ ಬೇಯಿಸಿ ನಾದಿ ತಿನ್ನಿಸಬಹುದು. ಮಗುವಿಗೆ ಒಂದು ವರ್ಷ ಆಗುವವರೆಗೆ ದಿನಕ್ಕೆ ಮೂರು ಬಾರಿ ಈ ರೀತಿಯ ಮುಖ್ಯ ಆಹಾರ, ಎರಡು ಬಾರಿ ದ್ರವಾಹಾರ ಕೊಡಬೇಕು. ಆನಂತರ ಇನ್ನು ಹೆಚ್ಚು ಬಾರಿ ಕೊಡಬೇಕಾಗುತ್ತದೆ.

ಮಗುವು 4 ತಿಂಗಳಿಗೆ ತಾನೇ ಹೊರಳಿಕೊಳ್ಳಬೇಕು. 7 ತಿಂಗಳಿಗೆ ಹಲ್ಲುಗಳು ಹುಟ್ಟಬೇಕು. 1 ವರ್ಷಕ್ಕೆ ತಾನೇ ನಡೆಯಬೇಕು. ಇವೆಲ್ಲಾ ಮಕ್ಕಳ ಬೆಳವಣಿಗೆಯಲ್ಲಿ ಮುಖ್ಯ ಮೈಲಿಗಲ್ಲುಗಳು. ವಯಸ್ಸಿಗೆ ತಕ್ಕಂತೆ ತೂಕವೂ ಇರಬೇಕು. ಇವುಗಳನ್ನೆಲ್ಲಾ ಗಮನಿಸಬೇಕು. ಹುಟ್ಟಿದಾಗ ಮಗು ಸರಾಸರಿ 3 ಕೆಜಿ ಇರುತ್ತದೆ. 5 ತಿಂಗಳಲ್ಲಿ ಈ ತೂಕ ಎರಡು ಪಟ್ಟು ಹೆಚ್ಚಾಗುತ್ತದೆ. ಅಂದರೆ ತೂಕವು 6 ಕೆಜಿಗೆ ಹೆಚ್ಚಾಗುತ್ತದೆ. 1 ವರ್ಷಕ್ಕೆ ಮಗುವಿನ ತೂಕ ಮೂರು ಪಟ್ಟು ಹೆಚ್ಚಾಗುತ್ತದೆ. ಅಂದರೆ 9 ಕೆಜಿ ಆಗುತ್ತದೆ.

ಮಗುವಿಗೆ 6 ತಿಂಗಳವರೆಗೆ ತಾಯಿಯ ಎದೆ ಹಾಲೇ ಸಾಕು. ತಾಯಿಯ ಹಾಲು ಅವಶ್ಯಕ ಪೋಷಕಾಂಶಗಳೊಂದಿಗೆ ಅಗತ್ಯ ಶಾಖದಲ್ಲಿ ಮಗುವಿಗೆ ಸಿಗುತ್ತದೆ. ತಾಯಿಯ ಹಾಲಿನಲ್ಲಿ ಕಾರ್ಬೋಹೈಡ್ರೇಟ್, ಪ್ರೋಟೀನುಗಳು ಕೊಬ್ಬು ಮುಂತಾದ ಸ್ಥೂಲ ಪೋಷಕಾಂಶಗಳು(ಮ್ಯಾಕ್ರೊ ನ್ಯೂಟ್ರೆನ್ಸ್), ಖನಿಜಗಳು ಮತ್ತು ವಿಟಮಿನ್‌ಗಳು ಮುಂತಾದ ಸೂಕ್ಷ್ಮ ಪೋಷಕಾಂಶಗಳು (ಮೈಕ್ರೊ ನ್ಯೂಟ್ರೆನ್ಸ್) ಎರಡೂ ಅವಶ್ಯಕ ಪ್ರಮಾಣದಲ್ಲಿರುತ್ತವೆ.

6 ತಿಂಗಳವರೆಗೆ ಮಗುವಿನ ದೇಹದಲ್ಲಿ ರೋಗನಿರೋಧಕ ಶಕ್ತಿ ಉತ್ಪಾದನೆಯಾಗುವುದಿಲ್ಲ. ಅಲ್ಲಿಯವರೆಗೆ ಮಗುವಿಗೆ ಅವಶ್ಯಕವಾದ ರೋಗ ನಿರೋಧಕ ಶಕ್ತಿ ತಾಯಿಯ ಎದೆಹಾಲಿನಿಂದಲೇ ಬರಬೇಕು. ಮಗುವು ತಾಯಿಯ ಹಾಲನ್ನು ಕುಡಿದರೆ ಖಾಯಿಲೆಗಳು ಬರುವುದಿಲ್ಲ.

ಮಗುವಿನ ಮಿದುಳಿನ ಗರಿಷ್ಟ ಬೆಳವಣಿಗೆ ಒಂದು ವರ್ಷದೊಳಗೆ ಆಗುತ್ತದೆ. ಆನಂತರ 2-3 ವರ್ಷದವರೆಗೂ ಒಂದಷ್ಟು ಬೆಳವಣಿಗೆ ಆಗುತ್ತದೆ. ಮಗುವಿನ ಮೆದುಳಿನ ಬೆಳವಣಿಗೆ ದೃಷ್ಟಿಯಿಂದಲೂ ಮೇಲೆ ಹೇಳಿದ ಆಹಾರವೇ ಸಾಕು.

'ಜ್ಯೂನಿಯರ್ ಹಾರ್ಲಿಕ್ಸ್'ನ ಪ್ರಚಾರ ವ್ಯಾಪಾರಿ ತಂತ್ರವಷ್ಟೆ. ಅದರಲ್ಲಿ ನಾವು ಮನೆಯಲ್ಲಿ ಕೊಡಲಾಗದ ವಿಶೇಷವಾದದ್ದೇನು ಇರುವುದಿಲ್ಲ. ಗೋಧಿ, ಬಾರ್ಲಿ, ಅಕ್ಕಿ ಇರುತ್ತದೆ. ವಿಟಮಿನ್‌ಗಳನ್ನು ಸೇರಿಸಿರುತ್ತಾರೆ. ಆದರೆ ಈ ಸಿದ್ಧ ಆಹಾರ ತಾಜಾ ಇರುವುದಿಲ್ಲ. ಅಲ್ಲದೇ ಈ ಸಿದ್ಧ ಆಹಾರವನ್ನು ಕೆಡದಂತೆ ಉಳಿಸುವ ಸಲುವಾಗಿ ಸಂರಕ್ಷಕ ರಾಸಾಯನಿಕ (Preservative Chemicals)ಗಳನ್ನು ಸೇರಿಸಿರುತ್ತಾರೆ. ಲಾಭಕ್ಕಾಗಿ ಜಾಹಿರಾತುಗಳನ್ನು ಮಾಡುತ್ತಾರೆ. ಕಂಪನಿಗಳ ಲಾಭ, ಉತ್ಪನ್ನಗಳ ಸಾಗಣೆ ಇತ್ಯಾದಿ ಎಲ್ಲ ಸೇರಿ 10 ರೂಪಾಯಿ ಮೌಲ್ಯದ ಪದಾರ್ಥಗಳಿಗೆ 100 ರೂ. ಅಥವಾ 200 ರೂ. ನಿಗದಿ ಮಾಡಿರುತ್ತಾರೆ. "ಜ್ಯೂನಿಯರ್ ಹಾರ್ಲಿಕ್ಸ್ ಕುಡಿದ ಮಕ್ಕಳಿಗೆ ಮೆದುಳು ಚೆನ್ನಾಗಿ ಬೆಳೆಯುತ್ತದೆ, ಮಕ್ಕಳು ಬುದ್ಧಿವಂತರಾಗುತ್ತಾರೆ" ಎಂಬುದೆಲ್ಲಾ ಸುಳ್ಳು. ಹಾಗಿದ್ದರೆ ಶ್ರೀಮಂತರ ಮಕ್ಕಳೆಲ್ಲರೂ ಬುದ್ಧಿವಂತರಾಗಿರಬೇಕಿತ್ತು. ಹಾಗೇನೂ ಇಲ್ಲ.

ತಾಯಿಯ ಹಾಲಿಗೆ ಬದಲಿ ಯಾವುದೂ ಇಲ್ಲ. ತಾಯಿಯ ಹಾಲು ಕೊಡುವುದರಲ್ಲಿ ತೊಂದರೆ ಇದ್ದರೆ, ತಾಯಿ ಮರಣ ಹೊಂದಿದ್ದರೆ, ಮಗುವನ್ನು ಬೇರೆಯವರು ದತ್ತು ತೆಗೆದುಕೊಂಡಿದ್ದರೆ ಮಗುವಿಗೆ ಬದಲಿ ಆಹಾರದ ಅಗತ್ಯ ಬರುತ್ತದೆ. ಅಥವಾ ತಾಯಿಗೆ ಹೆಪಟೈಟಿಸ್(ಜಾಂಡಿಸ್) ಖಾಯಿಲೆ ಇದ್ದರೆ ಅಥವಾ ಹೆಚ್‌ಐವಿ ಸೋಂಕು, ಟಿಬಿ ಖಾಯಿಲೆ ಇದ್ದರೆ, ಕೆಲವು ಬಗೆಯ ಕ್ಯಾನ್ಸರ್ ಇದ್ದರೆ ತಾಯಿಯು ಮಗುವಿಗೆ ಎದೆಹಾಲನ್ನು ಕೊಡಬಾರದು ಎಂದು ವೈದ್ಯರು ಶಿಫಾರಸ್ಸು ಮಾಡುತ್ತಾರೆ. ಆಗ ಮಗುವಿಗೆ ಪೌಡರ್ ಹಾಲು ಕೊಡಬೇಕಾಗಿ ಬರುತ್ತದೆ. ಆದರೆ ಇಂತಹ ಹಾಲಿನ ಪುಡಿಯ ಉತ್ಪನ್ನಗಳ ಮೇಲೆ ಸಹ ಉತ್ಪಾದಕರು 'ಮಗುವಿಗೆ ತಾಯಿಯ ಹಾಲೇ ಸರ್ವೋತ್ತಮ' ಎಂದು ನಮೂದಿಸಬೇಕಾಗುತ್ತದೆ. ಇಂತಹ ಕಾನೂನು ಜಾರಿಯಲ್ಲಿದೆ. ಎಫ್‌ಡಿಎ(ಫುಡ್ ಅಂಡ್ ಡ್ರಗ್ಸ್ ಅಥಾರಿಟಿ) ಎಂಬ ಸಂಸ್ಥೆಯು ಉತ್ಪಾದಕ ಕಂಪನಿಗಳಿಗೆ ಲೈಸನ್ಸ್ ಕೊಡುವಾಗಲೇ ಇಂತಹ ಷರತ್ತುಗಳನ್ನು ವಿಧಿಸುತ್ತದೆ. ತಾಯಿಯ ಹಾಲಿನ ಮಹತ್ವವನ್ನು ಕಡೆಗಣಿಸುವಂತೆಯೇ ಇಲ್ಲ.


ತಾಯಿಯ ಹಾಲಿನಲ್ಲಿ ಜೀವಂತ ಕೋಶಗಳು(Live Cells) ಇರುತ್ತವೆ. ಕೃತಕವಾಗಿ ಇಲ್ಲಿಯವರೆಗೆ ಇವುಗಳನ್ನು ತಯಾರಿಸಲು ಸಾಧ್ಯವಾಗಿಲ್ಲ. ತಾಯಿಯ ಹಾಲಿನಲ್ಲಿ ಕಿಣ್ವಗಳು (Enzymes) ಇರುತ್ತವೆ. ಇದರಿಂದ ಜೀರ್ಣಕ್ರಿಯೆಗೆ ಅನುಕೂಲವಾಗುತ್ತದೆ. ಈ ಕಿಣ್ವಗಳನ್ನು ಸಹ ಕೃತಕವಾಗಿ ತಯಾರಿಸಲು ಸಾಧ್ಯವಾಗಿಲ್ಲ. ತಾಯಿಯು ಮಗುವಿಗೆ ಹಾಲು ಕುಡಿಸುವಾಗ ಹೊಟ್ಟೆ ತುಂಬಿದ ಮೇಲೆ ಮಗು ಹಾಲನ್ನು ಕುಡಿಯುವುದಿಲ್ಲ. ಏಕೆಂದರೆ 'ಲೆಪ್ಟಿನ್'(Leptin) ಎಂಬ 'ತೃಪ್ತಿ ಹಾರ್ಮೋನ್' ಬಿಡುಗಡೆಯಾಗುದರಿಂದ ಹೊಟ್ಟೆ ತುಂಬಿದ ಮೇಲೆ ಮಗು ಹಾಲು ಕುಡಿಯಲು ನಿರಾಕರಿಸುತ್ತದೆ. ಇದರಿಂದ ಮಗುವು ಅತಿ ತೂಕ ಇರುವುದಿಲ್ಲ. ಆರೋಗ್ಯಕರವಾಗಿರುತ್ತದೆ. ಆದರೆ ಈ ಅನುಕೂಲ ಕೃತಕ ಆಹಾರದಲ್ಲಿ ಇರುವುದಿಲ್ಲ. ಕೃತಕ ಆಹಾರ ನೀಡಿದ ಮಗು ದಷ್ಟಪುಷ್ಟವಾಗಿ ಕಂಡರೂ ಅದು ಆರೋಗ್ಯಕರ ಅಲ್ಲ. ಮಗುವಿನಲ್ಲಿ ಬೊಜ್ಜು ಬೆಳವಣಿಗೆಯಾಗಿರುತ್ತದೆ.

ಹಸುವಿನ ಹಾಲಿನಲ್ಲಿರುವ ಪ್ರೋಟೀನ್ ಬೇರೆ. ತಾಯಿ ಹಾಲಿನಲ್ಲಿರುವ ಪ್ರೋಟೀನ್ ಬೇರೆ. ಹಸುವಿನ ಹಾಲಿನಲ್ಲಿ 'ಕೇಸಿನ್'(Casein) ಎಂಬ ಪ್ರೋಟೀನ್ ಇರುತ್ತದೆ. ತಾಯಿಯ ಹಾಲಿನಲ್ಲಿ 'ಲಾಕ್ಟೋಸ್'(Lactose) ಎಂಬ ಪ್ರೋಟೀನ್ ಇರುತ್ತದೆ. ಹಸುವಿನ ಹಾಲಿನಲ್ಲಿ ಮಗುವಿಗೆ ಬೇಕಾದ ಕಿಣ್ವ ಇರುವುದಿಲ್ಲ. ಆದ್ದರಿಂದ ಮಗುವಿನ ಮೂತ್ರಪಿಂಡ(ಕಿಡ್ನಿ)ದ ಮೇಲೆ ಒತ್ತಡ ಬೀಳುತ್ತದೆ. ಹೊಟ್ಟೆ ಉಬ್ಬರ, ಅಜೀರ್ಣ ಉಂಟಾಗುತ್ತದೆ. ತಾಯಿಯ ಹಾಲು ಕುಡಿದ ಮಗುವಿಗೆ ಮಲವಿಸರ್ಜನೆ ಸರಾಗವಾಗಿ ಆಗುತ್ತದೆ. ಆದರೆ ಕೃತಕ ಆಹಾರ ಸೇವಿಸಿದ ಮಗುವಿಗೆ ಮಲವಿಸರ್ಜನೆ ಕಷ್ಟವಾಗುತ್ತದೆ.

ಮಗುವನ್ನು ಬೆಳೆಸುವುದು ಒಂದು ಕಲೆ. ಅದಕ್ಕೆ ಮಾನಸಿಕ ಸಿದ್ಧತೆ ಬೇಕು. ಈಗ ಎಲ್ಲವೂ ರೆಡಿಮೇಡ್ ಬೇಕು. ಒತ್ತಡದ ಜೀವನ. ತಾಳ್ಮೆ, ಕಾಳಜಿ, ಸಮಯ ಇಲ್ಲ. ಮಗುವನ್ನು ಆರೋಗ್ಯಕರವಾಗಿ ಬೆಳೆಸಲು ತಾಳ್ಮೆ, ಕಾಳಜಿ ಬೇಕು. ಅಗತ್ಯ ಸಮಯ ಕೊಡಬೇಕು.

ತಾಯಿಯ ದೇಹದಲ್ಲಿ ಚೆನ್ನಾಗಿ ಹಾಲು ಉತ್ಪಾದನೆಯಾಗಿ ಮಗುವಿಗೆ ಹಾಲು ಸರಿಯಾಗಿ ಸಿಗುವಂತಾಗಬೇಕಾದರೆ ತಾಯಿಯು ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಾಗಿ ಇರುವಂತೆ ನೋಡಿಕೊಳ್ಳಬೇಕಾದದ್ದು ಮುಖ್ಯ. ತಾಯಿಯು ಮಗುವಿಗೆ ಹಾಲು ಕುಡಿಸುವ ಅವಧಿಯಲ್ಲಿ ಆಕೆಗೆ ಹೆಚ್ಚು ಪೌಷ್ಟಿಕವಾದ ಆಹಾರ ಬೇಕಾಗುತ್ತದೆ. ಅದನ್ನು ಒದಗಿಸಬೇಕು. ತಾಯಿ ಪೌಷ್ಟಿಕ ಆಹಾರ ಸೇವಿಸಬೇಕು. ಮತ್ತು ತಾಯಿಯು ಖುಷಿಯಿಂದ, ಸಂತೋಷದಿಂದ ಇರುವಂತೆ ನೋಡಿಕೊಳ್ಳಬೇಕು. ತಾಯಿಯ ದೇಹದಲ್ಲಿ ಹಾಲು ಉತ್ಪಾದನೆಗೆ 'ಪ್ರೊಲಕ್ಟಿನ್'(Prolactin) ಎಂಬ ಹಾರ್ಮೋನ್ ಕಾರಣವಾಗುತ್ತದೆ. ತಾಯಿಯ ದೇಹದಿಂದ ಹಾಲು ಹೊರಬರುವುದಕ್ಕೆ 'ಒಕ್ಸಿಟೋಸಿನ್'(Oxytocin) ಎಂಬ ಹಾರ್ಮೋನ್ ಕಾರಣವಾಗುತ್ತದೆ. ತಾಯಿಯು ಸಂತೋಷವಾಗಿಲ್ಲದೇ ಖಿನ್ನತೆಗೆ ಒಳಗಾಗಿದ್ದರೆ ಈ ಹಾರ್ಮೋನ್‌ಗಳ ಉತ್ಪಾದನೆ

ಪುಟ 6 ಕ್ಕೆ





ಚಿತ್ರರಂಗದಲ್ಲಿ ಮಹಿಳೆಯರ ಪರಿಸ್ಥಿತಿ: ಅಧ್ಯಯನ ಸಮಿತಿ ರಚನೆಯಾಗಲಿ, ಶೋಷಣೆ ನಿಲ್ಲಲಿ

ಸಂಪಾದಕೀಯ

ಕೇರಳ ಚಿತ್ರರಂಗದಲ್ಲಿ ಮಹಿಳೆಯರ ಪರಿಸ್ಥಿತಿ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯ, ಲೈಂಗಿಕ ಶೋಷಣೆಗಳ ಕುರಿತು ನಿವೃತ್ತ ನ್ಯಾಯಮೂರ್ತಿ ಕೆ. ಹೇಮಾ ನೇತೃತ್ವದ ಸಮಿತಿ ನೀಡಿರುವ 235 ಪುಟಗಳ ವರದಿ ದೇಶಾದ್ಯಂತ ಹಲವು ಬಗೆಯ ಕಂಪನಗಳನ್ನು ಸೃಷ್ಟಿಸಿದೆ. ಕರ್ನಾಟಕದಲ್ಲಿಯೂ ಇಂತಹದ್ದೊಂದು ಸಮಿತಿ ರಚನೆಯಾಗಬೇಕು ಎಂಬ ಗಟ್ಟಿ ದನಿಯು ಕೇಳಿ ಬಂದಿರುವುದು ಮತ್ತು ಮುಖ್ಯಮಂತ್ರಿಗಳಿಗೆ ಆ ರಂಗದ ಹಲವರು ಮನವಿ ಸಲ್ಲಿಸಿರುವುದು ಸ್ವಾಗತಾರ್ಹ.

ನ್ಯಾ.ಹೇಮಾ ಈ ವರದಿಯು ಚಲನಚಿತ್ರ ರಂಗದಲ್ಲಿ ಮಹಿಳೆಯರು ಅವಕಾಶ ಪಡೆದುಕೊಳ್ಳಲು ಲೈಂಗಿಕ ಶೋಷಣೆಗೆ ಗುರಿಯಾಗಬೇಕಾದ ಒತ್ತಡಗಳು, ಚಿತ್ರೀಕರಣ ಮತ್ತು ಕೆಲಸದ ಜಾಗದಲ್ಲಿ ಶೌಚಾಲಯ, ಉಡುಪು ಬದಲಾವಣೆಗಾಗಿ ಖಾಸಗಿ ಕೋಣೆಯಂತಹ ಕನಿಷ್ಟ ಮೂಲಭೂತ ಸೌಕರ್ಯಗಳ ಕೊರತೆ, ವೇತನ ಅಥವಾ ಸಂಭಾವನೆಗಳಲ್ಲಿ ತಾರತಮ್ಯ, ಮಾದಕ ವಸ್ತು ಹಾಗೂ ಅಲ್ಕೋಹಾಲ್ ಸೇವನೆಯ ಒತ್ತಡ ಮುಂತಾದ ಹಲವು ಬಗೆಯ ಅಘಾತಕಾರಿಯಾದ ಅಂಶಗಳತ್ತ ಗಮನ ಸೆಳೆದಿದೆ.

2017 ರಲ್ಲಿ ಚಿತ್ರ ಕಲಾವಿದೆಯರ ದೂರು ಆಧರಿಸಿ ಹೇಮಾ ಸಮಿತಿಯನ್ನು ನೇಮಿಸಿದ್ದ ಕೇರಳ ಸರಕಾರವು ವರದಿ ಆಧರಿಸಿ ಈಗಾಗಲೇ ವಿಶೇಷ ತನಿಖಾ ತಂಡ(ಎಸ್.ಐ.ಟಿ.) ರಚಿಸಿದೆ. ವಿಚಾರಣೆ ಪ್ರಗತಿಯಲ್ಲಿದೆ. ಕೇರಳ ಹೈಕೋರ್ಟ್ ಈ ಸಂಬಂಧದ ಪ್ರಕರಣಗಳ ವಿಚಾರಣೆಗಾಗಿ ಮಹಿಳಾ ನ್ಯಾಯಾಧೀಶೆಯೂ ಒಳಗೊಂಡ ವಿಶೇಷ ಪೀಠವನ್ನು ರಚಿಸಿದೆ.

'ಹಕ್ಕುಗಳು ಮತ್ತು ಸಮಾನತೆಗಾಗಿ ಸಿನಿಮಾ ಉದ್ಯಮ'(ಫೈರ್) ಎಂಬ ವೇದಿಕೆಯ ಪರವಾಗಿ ಚಿಂತಕಿ, ಸಿನಿಮಾ ಪತ್ರಕರ್ತೆ ಡಾ. ವಿಜಯಮ್ಮ, ನಟಿ ಶೃತಿ ಹರಿಹರನ್, ನಟ ಚೇತನ್ ಮುಂತಾದವರನ್ನು ಒಳಗೊಂಡ ತಂಡವು ಇತ್ತೀಚೆಗೆ ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ಭೇಟಿ ಮಾಡಿ ಕೇರಳ ಮಾದರಿಯಲ್ಲಿ ಕರ್ನಾಟಕದಲ್ಲಿಯೂ ಚಲನಚಿತ್ರ ರಂಗದಲ್ಲಿನ ಮಹಿಳೆಯರ ಸ್ಥಿತಿಗತಿಗಳ ಅಧ್ಯಯನಕ್ಕೆ ಸಮಿತಿಯೊಂದನ್ನು ರಚಿಸಬೇಕೆಂದು ಮನವಿ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಈ ವಿಷಯದ ಕುರಿತ ಚರ್ಚೆ ಕರ್ನಾಟಕದಲ್ಲಿಯೂ ಬಿರುಸು ಪಡೆದಿದೆ. ಅನೇಕರು ಭಿನ್ನ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದಾರೆ. ನಟರಾದ ಸುದೀಪ್, ದಿಗಂತ್, ಸಂಯುಕ್ತ ಹೆಗಡೆ ಮುಂತಾದ ಚಲನಚಿತ್ರ ಕಲಾವಿದರೂ ಅಧ್ಯಯನ ಸಮಿತಿಯ ರಚನೆ ಪರವಾಗಿ ಮಾತನಾಡಿದ್ದಾರೆ. ಚಿತ್ರನಟಿ ತಾರಾ "ಕನ್ನಡ ಚಿತ್ರರಂಗದಲ್ಲಿ ಒಂದು ಕುಟುಂಬದಂತಹ ವಾತಾವರಣ ಇದೆ. ಯಾರಿಗಾದರೂ ನಿರ್ದಿಷ್ಟ ದೂರುಗಳಿದ್ದಲ್ಲಿ ದೂರು ನೀಡಬಹುದು. ಆದರೆ ಅಧ್ಯಯನ ಸಮಿತಿಯ ಅಗತ್ಯವಿಲ್ಲ" ಎಂಬ ಅರ್ಥದಲ್ಲಿ ಮಾತನಾಡಿದ್ದಾರೆ.

ಕಳೆದ ಕೆಲ ವರ್ಷಗಳ ಲೈಂಗಿಕ ಕಿರುಕುಳದ ವಿರುದ್ಧ ನಡೆದ 'ಮೀ ಟು' ಆಂದೋಲನವು ವ್ಯಾಪಕವಾಗಿ ಜನಮನ ಸೆಳೆದಿತ್ತು. ಅದೇ ಅವಧಿಯಲ್ಲಿ ನಟಿ ಶೃತಿ ಹರಿಹರನ್, ಅರ್ಜುನ್ ಸರ್ಜಾ ಅವರ ವಿರುದ್ಧ ಲೈಂಗಿಕ ಕಿರುಕುಳದ ಆರೋಪಿಸಿ ದೂರು ನೀಡಿದ್ದರು. 'ಸಾಕ್ಷ್ಯಾಧಾರಗಳ ಕೊರತೆ'ಯಿಂದ ಈ ಪ್ರಕರಣವು ಬಿದ್ದು ಹೋಗಿರುವುದನ್ನು ಗಮನಿಸಬಹುದು.

ನಮ್ಮ ಸಾಮಾಜಿಕ ವ್ಯವಸ್ಥೆ ಪುರುಷ ಪ್ರಧಾನವಾದದ್ದು. ಲಿಂಗ ತಾರತಮ್ಯದಿಂದ ಕೂಡಿದೆ. ಅಸಮಾನತೆಯನ್ನು ಆಧರಿಸಿರುವ ನಮ್ಮ ಸಮಾಜದಲ್ಲಿ ಎಲ್ಲೆಲ್ಲೂ ಪುರುಷಾಹಂಕಾರದ ಮೌಲ್ಯಗಳು ತುಂಬಿ ತುಳುಕುತ್ತಿವೆ. ವ್ಯವಸ್ಥೆಯ ಮೇಲೆ ಪುರುಷ ಹಿಡಿತ ಬಲವಾಗಿದೆ. ಕಲೆ, ವ್ಯಾಪಾರ, ಉದ್ದಿಮೆ, ಶಿಕ್ಷಣ, ವಿಜ್ಞಾನ, ರಾಜಕೀಯ–ಕ್ಷೇತ್ರ ಯಾವುದೇ ಇರಲಿ, ಅಲ್ಲಿನ ಮಹಿಳೆಯರು ಸುರಕ್ಷಿತ ಎನ್ನುವ ಪರಿಸ್ಥಿತಿ ಇಂದು ಇಲ್ಲ. ಜೀವನೋಪಾಯದ ಆಧಾರವನ್ನು ಕಂಡುಕೊಳ್ಳುವ, ಜೀವನದಲ್ಲಿ ಉತ್ತಮ ಸಾಧನೆ ಮಾಡುವ ಮಹತ್ವಾಕಾಂಕ್ಷೆಯ ಮಹಿಳೆಯರನ್ನು ಆ ಕ್ಷೇತ್ರದ ಪುರುಷರು ದುರುಪಯೋಗ ಪಡಿಸಿಕೊಳ್ಳುವುದು, ಅಸಹಾಯಕತೆಯನ್ನು ಬಳಸಿ ಕಿರುಕುಳ ನೀಡುವುದು, ದೌರ್ಜನ್ಯ ನಡೆಸುವುದು ನಿರಂತರ ಎಂಬಂತೆ ನಡೆಯುತ್ತಿದೆ.

ಸಿನಿಮಾರಂಗ ಎನ್ನುವುದು ಅಪಾರ ಜನಪ್ರಿಯತೆ, ಅಪಾರ ಹಣ ಮತ್ತು ಬಾರಿ ವರ್ಚಸ್ಸು ಗಳಿಸಿಕೊಳ್ಳಲು ಅವಕಾಶ ಇರುವ ಒಂದು ಗ್ಲಾಮರಸ್ ಕ್ಷೇತ್ರ. ಕಲಾ ಸಾಧನೆ, ಜೀವನೋಪಾಯ, ಸಾಮಾಜಿಕ ಕಳಕಳಿ, ಹಣ ಸಂಪಾದನೆ, ಜನಪ್ರಿಯತೆ ಮುಂತಾದ ಯಾವುದೇ ಉದ್ದೇಶಗಳಿಂದ ಸಿನಿಮಾ ಕ್ಷೇತ್ರಕ್ಕೆ ಬಂದಿದ್ದರೂ ಸಿನಿಮಾ ಕ್ಷೇತ್ರದಲ್ಲಿ ಮಹಿಳೆಯರನ್ನು ದುರುಪಯೋಗ ಪಡಿಸಿಕೊಳ್ಳುವ ದುಷ್ಟ ಮನೋಭಾವ ವ್ಯಾಪಕವಾಗಿರುವುದನ್ನು ಕಾಣಬಹುದು. ಹೀಗಾಗಿ ಸಿನಿಮಾ ಕ್ಷೇತ್ರದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ, ದೌರ್ಜನ್ಯಗಳು ಬೇರೆ ಕ್ಷೇತ್ರಗಳಿಗಿಂತಲೂ ಹೆಚ್ಚು ವ್ಯಾಪಕ ಎನ್ನಲಾಗುತ್ತಿದೆ. ಇದರರ್ಥ ಇಂತಹ ದೌರ್ಜನ್ಯ, ಕಿರುಕುಳ, ಹಿಂಸೆಗಳು ಕೇವಲ ಇಲ್ಲಿ ಮಾತ್ರವೇ ನಡೆಯುತ್ತವೆ ಎಂದರ್ಥವಲ್ಲ. ಕ್ರೀಡಾ, ವೈದ್ಯಕೀಯ, ಸಂಶೋದನೆ ಮುಂತಾದ ಹಲವು ಬಹು ಮುಖ್ಯ ಕ್ಷೇತ್ರಗಳಲ್ಲಿ ಇಂತಹ ಪ್ರವೃತ್ತಿಯನ್ನು ಕಾಣಬಹುದು. ಬಹುತೇಕ ಘಟನೆಗಳು ಭಯದಿಂದಲೋ, ಒತ್ತಡ, ಇತ್ಯಾದಿಗಳ ಕಾರಣದಿಂದ ಹೊರ ಬರುವುದಿಲ್ಲ. ಹಲವಾರು ಘೋರ ಪ್ರಕರಣಗಳ ಹೊರತಾಗಿ, ನಿರ್ದೇಶನಗಳಿದ್ದರೂ ದುಡಿಯುವ ಕ್ಷೇತ್ರಗಳಲ್ಲಿ ಮಹಿಳೆಯರ ಸುರಕ್ಷಿತತೆ, ದೌರ್ಜನ್ಯಗಳ ತಡೆ ಮತ್ತು ವಿಚಾರಣೆ, ಕ್ರಮಗಳು ನಿರೀಕ್ಷಿತ ಮಟ್ಟದಲ್ಲಿ ಇನ್ನೂ ಜಾರಿಯಾಗುತ್ತಿಲ್ಲ.

ಕನ್ನಡ ಚಿತ್ರ ರಂಗದ ಪ್ರತಿನಿಧಿಗಳ ಮನವಿಯನ್ನು ಸರಕಾರ ಗಂಭೀರವಾಗಿ ತೆಗೆದುಕೊಳ್ಳಬೇಕು. ಕರ್ನಾಟಕದ ಚಲನಚಿತ್ರ ರಂಗದಲ್ಲಿ ಮಹಿಳೆಯರ ಸ್ಥಿತಿಗತಿ ಹಾಗು ಲೈಂಗಿಕ ಶೋಷಣೆಯ ವಿರುದ್ಧ ಕೇರಳದ ಮಾದರಿಯಲ್ಲಿ ರಾಜ್ಯ ಸರಕಾರವು ಅಧ್ಯಯನ ಸಮಿತಿಯನ್ನು ನೇಮಿಸಬೇಕು. ಕರ್ನಾಟಕ ಮಾತ್ರವಲ್ಲ, ಬಾಲಿವುಡ್ ಸೇರಿದಂತೆ ದೇಶದ ಎಲ್ಲ ಚಿತ್ರರಂಗಗಳ ಸಂಬಂಧವೂ ಇಂತಹ ಸಮಿತಿಗಳು ರಚನೆಯಾಗುವುದು ಇಂದಿನ ಅಗತ್ಯ. ಸಿನಿಮಾ ಮಾತ್ರವಲ್ಲ, ಖಾಸಗಿ–ಸರಕಾರಿ ದೂರದರ್ಶನ ವಾಹಿನಿಗಳನ್ನೂ ಸಮಿತಿಯ ಅಧ್ಯಯನದ ವ್ಯಾಪ್ತಿಗೆ ತರಬೇಕು. ಸಮರ್ಥ ವ್ಯಕ್ತಿಗಳನ್ನು ಈ ಸಮಿತಿಯಲ್ಲಿ ನೇಮಿಸಿ, ಸಂತ್ರಸ್ತ ವ್ಯಕ್ತಿಗಳ ಆತಂಕ–ಭಯಗಳನ್ನು ಪರಿಹರಿಸಿ ಸಮಿತಿಯು ಕಾಲಮಿತಿಯಲ್ಲಿ ವರದಿಯನ್ನು ನೀಡುವಂತಾಗಬೇಕು. ವರದಿಯ ಆಧಾರದಲ್ಲಿ ಅಪರಾಧಿಗಳಿಗೆ ಕಠಿಣ ಶಿಕ್ಷೆ ದೊರಕುವಂತಾಗಬೇಕು. ಲಿಂಗ ತಾರತಮ್ಯಗಳು ನಿವಾರಣೆ ಆಗಿ, ಸಿನಿಮಾ ರಂಗದ ಪರಿಸ್ಥಿತಿ ಸ್ತ್ರೀ ಸ್ನೇಹಿ ಆಗಬೇಕು. ಕೇರಳದಲ್ಲಿ ಹೇಮಾ ಸಮಿತಿ ವರದಿ ಬಿಡುಗಡೆ ವಿಳಂಬವಾಗಲು ಸಂತ್ರಸ್ತ ವ್ಯಕ್ತಿಗಳ ಆತಂಕ, ಭಯ, ಕೆಲವು ಕಾನೂನು ಪ್ರಕ್ರಿಯೆಗಳು ಕಾರಣವಾಗಿದ್ದವು ಎಂಬುದನ್ನು ಸಹ ಇಲ್ಲಿ ಗಮನಿಸಬೇಕು. ಕರ್ನಾಟಕದಲ್ಲಿ ಇಂತಹ ವಿಳಂಬ ಆಗದಂತೆ ಎಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಬೇಕು. ಮನವಿಗೆ ಸಕಾರಾತ್ಮವಾಗಿ ಸ್ಪಂದಿಸಿ ಕ್ರಮ ವಹಿಸುವುದಾಗಿ ಭರವಸೆ ನೀಡಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ತಕ್ಷಣ ಕಾರ್ಯಪ್ರವೃತ್ತರಾಗಲಿ. ಯಾವುದೇ ಒತ್ತಡಗಳಿಗೆ ಮಣಿಯದಿರಲಿ. ●



ಗಂಗಾವತಿ–ವಿಠಲಾಪುರ: ವಿಷವುಣಿಸಿ ದಲಿತ ಯುವತಿಯ ಕೊಲೆ

ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ವಿಠಲಾಪೂರ ಗ್ರಾಮದ ನಿವಾಸಿ, ಪರಿಶಿಷ್ಟ ಜಾತಿ 'ಮಾದಿಗ' ಸಮುದಾಯಕ್ಕೆ ಸೇರಿದ 21 ವರ್ಷದ ಯುವತಿ ಮರಿಯಮ್ಮಳನ್ನು ಜಾತಿ ನಿಂದನೆ ಮಾಡಿ, ಹೊಡೆದು ಬಡಿದು, ದಿನನಿತ್ಯ ಕಿರುಕುಳ ನೀಡಿ ಕೊನೆಗೆ ಊಟದಲ್ಲಿ ವಿಷ ಬೆರೆಸಿ ಉಣಿಸಿ ಕೊಲೆಗೈದಿರುವ ಒಂದು ಭೀಕರ ಘಟನೆ ಬೆಳಕಿಗೆ ಬಂದಿದೆ. ಈ ಸಂಬಂಧ ಸ್ಥಳೀಯ ವಿಶ್ವಾಸಾರ್ಹ ಮೂಲಗಳಿಂದ ದೊರಕಿರುವ ಮಾಹಿತಿಗಳು ನಿಜಕ್ಕೂ ಅಘಾತಕಾರಿಯಾಗಿವೆ.

ಯುವತಿ ಮರಿಯಮ್ಮಳನ್ನು ಅದೇ ಗ್ರಾಮದ ಪರಿಶಿಷ್ಟ ಪಂಗಡ (ವಾಲ್ಮೀಕಿ) ಸಮುದಾಯಕ್ಕೆ ಸೇರಿದ ಕಾಳಿಂಗಪ್ಪನ ಮಗ ಹನುಮಯ್ಯ ಎರಡು ವರ್ಷಗಳಿಂದ ಸತತವಾಗಿ ಪ್ರೀತಿ ಮಾಡುತ್ತಿದ್ದೇನೆಂದು ಕಾಡಿಸಿ ಪಿಡಿಸುತ್ತಿದ್ದನು. ಕೊನೆಗೆ ಒಂದು ಹಂತದಲ್ಲಿ, ಮದುವೆ ಮಾಡಿಕೊಂಡು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಮಾತು ಕೊಟ್ಟು ಮದುವೆಯನ್ನು ಮಾಡಿಕೊಂಡಿದ್ದಾನೆ. ಆದರೆ ಮದುವೆಯಾದ ನಂತರ ಹನುಮಯ್ಯ ಸೇರಿದಂತೆ ಮನೆಯವರೆಲ್ಲರೂ ಕೊಟ್ಟ ಭರವಸೆಯನ್ನು ಮರೆತು ಗಲಾಟೆಗಳನ್ನು ಮಾಡಿ ಕಿರುಕುಳ ಕೊಡಲು ಶುರು ಮಾಡಿದ್ದಾರೆ. ಹನುಮಯ್ಯ ಮತ್ತು ಮನೆಯವರು ಮದುವೆಯಾದ ದಿನದಿಂದಲೂ ಮರಿಯಮ್ಮಳನ್ನು ಮನೆಗೆ ಸೇರಿಸಿಕೊಳ್ಳದೇ, 'ಇವಳು ಮಾದಿಗ ಜಾತಿಯವಳು' ಎಂದು ನಿಂದಿಸಿ, ಪ್ರತ್ಯೇಕವಾಗಿ ಗುಡಿಸಲನ್ನು ನಿರ್ಮಿಸಿ ಈಕೆಗೆ ಅಲ್ಲಿಯೇ ಊಟ, ನೀರು, ಪ್ರತಿಯೊಂದನ್ನು ನೀಡುತ್ತಾ ಬಂದಿದ್ದಾರೆ. ಮರಿಯಮ್ಮಳ ಅತ್ತೆ–ಮಾವ ಹಾಗೂ ಕುಟುಂಬಸ್ಥರು ದಿನ ನಿತ್ಯ ಕಿರುಕುಳ ನೀಡುತ್ತಾ ವರದಕ್ಷಿಣೆ ವಿಚಾರವಾಗಿಯೂ ಸಾಕಷ್ಟು ಬಾರಿ ಹೊಡೆದು ಬಡಿದು ಮಾಡಿ ಸಾಯಿಸಲು ಪ್ರಯತ್ನಿಸಿರುತ್ತಾರೆ. ಆದರೂ ಕೂಡ ಈ ಯುವತಿಯು ಅಪಮಾನ–ನೋವುಗಳನ್ನು ನುಂಗಿಕೊಂಡು ತವರು ಮನೆಯಿಂದ ಒಂದಷ್ಟು ವರದಕ್ಷಿಣೆಯನ್ನು ತೆಗೆದುಕೊಂಡು ಬಂದು ತನ್ನ ಗಂಡನ ಕುಟುಂಬಕ್ಕೆ ನೀಡಿರುತ್ತಾಳೆ.

ಇಷ್ಟಾದರೂ ಮರಿಯಮ್ಮಳನ್ನು ಹನುಮಯ್ಯ ಸರಿಯಾಗಿ ನೋಡಿಕೊಳ್ಳದೇ ತಿರಸ್ಕರಿಸಿದ್ದಾನೆ. ನಂತರದಲ್ಲಿ ಹನುಮಯ್ಯನು ಬೇರೆ ಹೆಣ್ಣಿನ ಜೊತೆಯಲ್ಲಿ ಸಂಬಂಧವನ್ನು ಇಟ್ಟುಕೊಂಡಿರುವುದರ ಬಗೆಗೆ ಗಂಭೀರವಾದ ದೂರುಗಳಿವೆ. ಕೊನೆಗೆ 'ಕೀಳು ಜಾತಿ'ಯ ಹುಡುಗಿಯ ಜೊತೆಗೆ ಯಾವ ಸಂಬಂಧವನ್ನೂ ಇರಿಸಿಕೊಳ್ಳಬಾರದು ಎಂಬ ದುಷ್ಟ ಮನೋಭಾವನೆಯಿಂದ ಮರಿಯಮ್ಮಳ ಗಂಡ ಮತ್ತು ಕುಟುಂಬಸ್ಥರು ಸೇರಿಕೊಂಡು ಮರಿಯಮ್ಮಳಿಗೆ ವಿಷ ಕುಡಿಸಿ ಆಕೆಯನ್ನು ಕೊಲೆಗೈದಿರುತ್ತಾರೆ.

ಮರಿಯಮ್ಮಳನ್ನು ಕೊಲೆಗೈದ ಕುಟುಂಬಸ್ಥರು ಈ ಹಿಂದೆ ಇದೇ ಮಾದಿಗ ಸಮುದಾಯಕ್ಕೆ ಸೇರಿದ ಮಹಿಳೆಯೊಬ್ಬರ ಬಗೆಗೆ ಸಾಕಷ್ಟು ಸುಳ್ಳು ಆರೋಪಗಳನ್ನು ಮಾಡಿ ಊರಿನಲ್ಲಿ ಅಪಪ್ರಚಾರವನ್ನು ನಡೆಸಿ ಆ ಮಹಿಳೆ ನೇಣಿಗೆ ಶರಣಾಗುವಂತೆ ಮಾಡಿರುತ್ತಾರೆ. ಹೀಗೆ ಸುಮಾರು ವರ್ಷಗಳಿಂದ ಆ ಭಾಗದಲ್ಲಿ ಈ ಕುಟುಂಬವು ಶೋಷಿತ ಸಣ್ಣ ಸಮುದಾಯಗಳ ಮೇಲೆ ದೌರ್ಜನ್ಯ, ದಬ್ಬಾಳಿಕೆ, ಗುಂಡಾಗಿರಿ ಮಾಡಿಕೊಂಡು ರೌಡಿಗಳಂತೆ ವರ್ತಿಸುತ್ತಿದೆ ಎಂದು ಸ್ಥಳೀಯರು ದೂರುತ್ತಾರೆ. ಹನುಮಯ್ಯ ಕುಟುಂಬದವರು ಯಾವುದೇ ಕಾನೂನಿನ ಭಯವಿಲ್ಲದೇ ಪಾಳೇಗಾರರಂತೆ ಅಮಾಯಕರನ್ನು ಬೀದಿ ಪಾಲು ಮಾಡಿ ಪ್ರಾಣಗಳನ್ನು ಬಲಿ ತೆಗೆದುಕೊಳ್ಳುತ್ತಿದ್ದಾರೆ. ಇಲ್ಲಿ ಸಣ್ಣ ಪುಟ್ಟ ಸಮುದಾಯಗಳು ಭಯದ ವಾತಾವರಣದಲ್ಲಿ ಜೀವನವನ್ನು ನಡೆಸುತ್ತಿದ್ದಾರೆ. ಪೊಲೀಸ್ ಇಲಾಖೆಯಲ್ಲಿ ಇವರ ವಿರುದ್ಧ ಸಾಕಷ್ಟು ಪ್ರಕರಣಗಳು ದಾಖಲಾಗಿರುತ್ತವೆ ಎಂಬ ಮಾಹಿತಿಯನ್ನು ಇಲ್ಲಿನ ಸಾರ್ವಜನಿಕರು ನಮಗೆ ತಿಳಿಸಿರುತ್ತಾರೆ.

ಮರಿಯಮ್ಮಳ ಕೊಲೆ ಸಂಬಂಧ ಪೊಲೀಸರು 7 ಜನ ಆರೋಪಿಗಳನ್ನು ಬಂಧಿಸಿರುತ್ತಾರೆ. ಈ ಕೊಲೆಯಲ್ಲಿ ಭಾಗಿಯಾದ ಇನ್ನೂ 6 ಜನ ಆರೋಪಿಗಳನ್ನು ಬಂಧಿಸಿರುವುದಿಲ್ಲ. ಈ

ಪುಟ 14 ಕ್ಕೆ

ಲೈಫ್ ಇನ್ಶುರೆನ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ (LIC) ವಿಶ್ವದ ಒಂದು ವಿಶಿಷ್ಟವಾದ ವಿಮಾ ಸಂಸ್ಥೆಯಾಗಿದೆ. ಎಲ್ಐಸಿಯನ್ನು ಸ್ಥಾಪಿಸುವಾಗ ನೀತಿ ನಿರೂಪಕರು ''ಅಪಾಯದ ವಿರುದ್ಧ ಸುರಕ್ಷಿತ ವಿಮೆಯನ್ನು ಒದಗಿಸಿ ಮತ್ತು ಅದೇ ಸಮಯದಲ್ಲಿ, ಜನಸ್ನೇಹಿ ಉಳಿತಾಯ ಸಾಧನವನ್ನು ಒದಗಿಸಿ'' ಎಂಬ ಎರಡು ಉದ್ದೇಶಗಳನ್ನು ಹೊಂದಿದ್ದರು. ಆದರೆ, ಇಂದಿನ ಪ್ರಭುತ್ವ ವಿಮಾ ವಲಯದಲ್ಲಿ ಸ್ವದೇಶಿ ಮತ್ತು ವಿದೇಶಿ ಖಾಸಗಿ ಸಂಸ್ಥೆಗಳಿಗೆ ಅವಕಾಶ ಮಾಡಿಕೊಡುವ ಮೂಲಕ ನೀತಿ ನಿರೂಪಕರ ಆಶಯಗಳಿಗೆ ವಿರುದ್ದವಾಗಿ ನಡೆದುಕೊಳ್ಳುತ್ತಿದೆ. ಸಾಲದೆಂಬಂತೆ ಎಲ್ಐಸಿ ಯ ಷೇರು ಮತ್ತು ಅದರ ಆಸ್ತಿಗಳ ಮಾರಾಟದ ಮೂಲಕ ಸಾರ್ವಜನಿಕ ವಿಮಾ ಸಂಸ್ಥೆಯನ್ನೂ ಖಾಸಗಿಯವರ ತೆಕ್ಕೆಗೆ ಹಾಕಲು ಮುಂದಾಗಿದೆ.

ಎಲ್ಐಸಿ: ಜನರ ಉಳಿತಾಯದ ಮೇಲೆ ಸರ್ಕಾರವೇ ನಿಯಂತ್ರಣವನ್ನು ಹೊಂದಿರಬೇಕು ಎಂಬುದೇ ಇದರ ಸ್ಥಾಪನೆಯ ಗುರಿ

ಸಿ.ಸಿದ್ದಯ್ಯ

ಜೀವ ವಿಮೆಯು ದೀರ್ಘಾವಧಿಯ ಹೂಡಿಕೆಯಾಗಿರುವುದರಿಂದ, ವಿಮಾ ವ್ಯವಹಾರವು ಕೇವಲ ನಂಬಿಕೆಯನ್ನು ಆಧರಿಸಿದೆ. ಆದ್ದರಿಂದ ವಿಮಾ ಕ್ಷೇತ್ರ ಸರ್ಕಾರದ ಹಿಡಿತದಲ್ಲಿಯೇ ಉಳಿಯಬೇಕು ಎಂದು ಡಾ.ಬಿ.ಆರ್.ಅಂಬೇಡ್ಕರ್ ತಮ್ಮ 'ರಾಜ್ಯಗಳು ಮತ್ತು ಅಲ್ಪಸಂಖ್ಯಾತರು' ಪುಸ್ತಕದಲ್ಲಿ ತಿಳಿಸಿದ್ದಾರೆ.

ವಿಮೆಯ ರಾಷ್ಟ್ರೀಕರಣದ ಕಲ್ಪನೆಯು ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿ ಹೊರಹೊಮ್ಮಿದ ರಾಷ್ಟ್ರೀಯ ಪ್ರಜ್ಞೆಯ ಅವಿಭಾಜ್ಯ ಅಂಗವಾಗಿತ್ತು. ಜೊತೆಗೆ ಇದು ವಸಾಹತುಶಾಹಿ ಆಡಳಿತದಿಂದ ವಿಮೋಚನೆಯ ಗುರಿಯನ್ನು ಹೊಂದಿತ್ತು. ಶೋಷಣೆಯನ್ನು ಕೊನೆಗೊಳಿಸುವ ಸಲುವಾಗಿ, 1931ರಲ್ಲಿ ಕರಾಚಿಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಸಮ್ಮೇಳನವು, ರಾಜಕೀಯ ಸ್ವಾತಂತ್ರ್ಯದ ಹೊರತಾಗಿ ಹಸಿವಿನಿಂದ ಬಳಲುತ್ತಿರುವ ಲಕ್ಷಾಂತರ ಜನರಿಗೆ ನಿಜವಾದ ಆರ್ಥಿಕ ಸ್ವಾತಂತ್ರ್ಯವನ್ನು ಸಾಧಿಸಬೇಕು ಎಂದು ಘೋಷಿಸಿತು. 1934ರಲ್ಲಿ ಕಾಂಗ್ರೆಸ್ ಸೋಷಿಯಲಿಸ್ಟ್ ಗುಂಪಿನ ಸಭೆಯಲ್ಲಿ ಅಂಗೀಕರಿಸಿದ ಸ್ವಾತಂತ್ರ್ಯದ ಚಾರ್ಟರ್ ನಲ್ಲಿ, 'ಜನರ ಸಣ್ಣ ಉಳಿತಾಯವನ್ನು ರಾಷ್ಟ್ರೀಕರಣಗೊಳಿಸುವ ಅಗತ್ಯವನ್ನು ಕಾಂಗ್ರೆಸ್ ಬಲವಾಗಿ ನಂಬುತ್ತದೆ ಮತ್ತು ಸರ್ಕಾರವು ದೇಶದ ಆರ್ಥಿಕತೆಯಲ್ಲಿ ಕಾರ್ಯತಂತ್ರದ ಸ್ಥಾನವನ್ನು ಹೊಂದಿರಬೇಕು' ಎಂದು ಬರೆಯಲಾಗಿದೆ. ಜನರ ಉಳಿತಾಯದ ಮೇಲೆ ಸರ್ಕಾರವೇ ನಿಯಂತ್ರಣವನ್ನು ಹೊಂದಿರಬೇಕು ಮತ್ತು ಅವುಗಳನ್ನು ರಾಷ್ಟ್ರೀಯ ಅಭಿವೃದ್ಧಿಗೆ ಮಾತ್ರ ಬಳಸಬೇಕು ಮತ್ತು ಖಾಸಗಿ ಉದ್ಯಮಗಳಿಗೆ ಬಳಸಬಾರದು ಎಂದು ಸ್ವಾತಂತ್ರ್ಯ ಚಳವಳಿಯು ಬಯಸಿತ್ತು.

ಜೀವ ವಿಮಾ ವ್ಯವಹಾರ ರಾಷ್ಟ್ರೀಕರಣ

ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ವಿಮಾ ವಲಯದಲ್ಲಿ ವಿಷಮ ಪರಿಸ್ಥಿತಿಗಳಿದ್ದವು. ಜೀವವಿಮಾ ಕ್ಷೇತ್ರದಲ್ಲಿ ನಾಗರಿಕರ ಹಣದ ಭದ್ರತೆ ಖಾಸಗಿಯವರ ಕೈಯಲ್ಲಿತ್ತು. ವಿದೇಶಿ ಕಂಪನಿಗಳು ದೇಶೀಯ ಉಳಿತಾಯವನ್ನು ದೋಚುತ್ತಿದ್ದರು. ಖಾಸಗಿ ವಿಮಾ ಕಂಪನಿಗಳು ತಾವು ಸಾರ್ವಜನಿಕರಿಂದ ಸಂಗ್ರಹಿಸಿದ ಪ್ರೀಮಿಯಂಗಳನ್ನು ತಮ್ಮ ಸ್ವಂತ ಉದ್ದೇಶಗಳಿಗಾಗಿ ಬಳಸಿಕೊಂಡು ಪಾಲಿಸಿದಾರರನ್ನು ವಂಚಿಸುತ್ತಿದ್ದವು. ನಾಗರಿಕರ ಹಣ ಸಂಪೂರ್ಣ ರಕ್ಷಣೆಯಾಗಬೇಕಾದರೆ ರಾಷ್ಟ್ರೀಕರಣವೊಂದೇ ಪರಿಹಾರವಾಗಿತ್ತು. 1956 ಜನವರಿ 19ರಂದು, ಎಲ್ಲಾ 245 ಖಾಸಗಿ ವಿಮಾ ಕಂಪನಿಗಳನ್ನು ಒಟ್ಟುಗೂಡಿಸಿ ಭಾರತೀಯ ಜೀವ ವಿಮಾ ವ್ಯವಹಾರವನ್ನು ರಾಷ್ಟ್ರೀಕರಣಗೊಳಿಸುವ ಸುಗ್ರೀವಾಜ್ಞೆಯನ್ನು ಹೊರಡಿಸಲಾಯಿತು. ಭಾರತೀಯ ಜೀವ ವಿಮಾ ವ್ಯವಹಾರವನ್ನು ರಾಷ್ಟ್ರೀಕರಣಗೊಳಿಸಿ "ಜೀವ ವಿಮೆ" ಎಂದು ರೂಪುಗೊಂಡ ಗುರಿಗಳನ್ನು ಸಾಧಿಸುವಲ್ಲಿ ಎಲ್ಐಸಿ ಯಶಸ್ವಿಯಾಗಿದೆ.

ವಿಮೆಯ ರಾಷ್ಟ್ರೀಕರಣವು ನಮ್ಮ ಸಂವಿಧಾನದ 38 ಮತ್ತು 39 ನೇ ವಿಧಿಯಲ್ಲಿ ಪ್ರತಿಪಾದಿಸಲ್ಪಟ್ಟಿರುವ ಜನರ ಆಶೋತ್ತರಗಳನ್ನು ಪೂರೈಸುವ ಒಂದು ಸಾಧನವನ್ನಾಗಿ ನೋಡಬಹುದು. ಸ್ವಾತಂತ್ರ್ಯದ ಕ್ರಮಗಳಲ್ಲಿ ಒಂದಾದ ಜೀವ ವಿಮಾ ವಲಯದ ರಾಷ್ಟ್ರೀಕರಣವು ಆಧುನಿಕ ಸಮಾಜವಾದಿ ರಾಷ್ಟ್ರವನ್ನು ನಿರ್ಮಿಸುವ ದೃಷ್ಟಿಯ ಪ್ರಮುಖ ಭಾಗವಾಗಿತ್ತು.

ಭಾರತೀಯ ಜೀವ ವಿಮಾ ನಿಗಮವು ರಾಷ್ಟ್ರೀಕರಣದ ಉದ್ದೇಶಗಳ ಅನ್ವೇಷಣೆಯ ಮೂಲಕ ಕಳೆದ 68 ವರ್ಷಗಳಿಂದ ದೇಶೀಯ ಹಣಕಾಸು ವಲಯದ ಬೆನ್ನೆಲುಬಾಗಿದೆ. ಮಾರ್ಚ್ 31, 2023 ರೊಳಗೆ ದೇಶದ ಆರ್ಥಿಕ ಅಭಿವೃದ್ಧಿ ಮತ್ತು ಜನರ ಕಲ್ಯಾಣಕ್ಕಾಗಿ ರೂ. 43,97,204 ಕೋಟಿ ನಿಧಿಗಳು ಹೂಡಿಕೆಯಾಗಿವೆ.

1956ರಲ್ಲಿ ಕೇವಲ 5 ಕೋಟಿ ರೂ.ಗಳ ಹೂಡಿಕೆಯೊಂದಿಗೆ ಆರಂಭವಾಗಿ, ಇಂದು ದೇಶಾದ್ಯಂತ 40 ಕೋಟಿಗೂ ಹೆಚ್ಚು ವೈಯಕ್ತಿಕ ಮತ್ತು ಗುಂಪು ವಿಮಾ ಪಾಲಿಸಿದಾರರನ್ನು ಹೊಂದಿದೆ. 95ರಷ್ಟು ಹೆಚ್ಚುವರಿ ಮೊತ್ತವನ್ನು ಪಾಲಿಸಿದಾರರಿಗೆ ಬೋನಸ್ ಎಂದು ಘೋಷಿಸಿ ಉಳಿದ ಶೇ.5ನ್ನು ಸರಕಾರಕ್ಕೆ ಡಿವಿಡೆಂಡ್ ಆಗಿ ನೀಡಿ, ಪರಸ್ಪರ ಸಹಕಾರದ ಮನೋಭಾವನೆಯಲ್ಲಿ 6 ದಶಕಗಳಿಗೂ ಹೆಚ್ಚು ಕಾಲ ಜನತೆಗೆ ಭರವಸೆ ಮೂಡಿಸಿದೆ. ಎಲ್ಐಸಿ 45,50,571.73 ಕೋಟಿ ಮೌಲ್ಯದ ಆಸ್ತಿಯನ್ನು ಹೊಂದಿದೆ ಮತ್ತು 40,81,326.41 ಕೋಟಿ ರೂಪಾಯಿಗಳ ಜೀವ ನಿಧಿಯನ್ನು ಹೊಂದಿದೆ. ಇದು ಹಲವು ದೇಶಗಳ ಆರ್ಥಿಕತೆಗಳ ಜಿಡಿಪಿಗಿಂತ ಹೆಚ್ಚು.

ಭಾರತೀಯ ವಿಮಾ ವಲಯದಲ್ಲಿ ಖಾಸಗಿ ಮತ್ತು ವಿದೇಶಿ ಕಂಪನಿಗಳಿಗೆ ಅವಕಾಶ ನೀಡಿ 2 ದಶಕಗಳ ನಂತರವೂ, ಸಾರ್ವಜನಿಕ ವಲಯದ ಎಲ್ಐಸಿಯು 24 ಖಾಸಗಿ ವಿಮಾ ಕಂಪನಿಗಳೊಂದಿಗೆ ಪೈಪೋಟಿಯಲ್ಲಿ ಮೊದಲ ಸ್ಥಾನದಲ್ಲಿದೆ. 24ರ ಆರ್ಥಿಕ ವರ್ಷದಲ್ಲಿ ಮೊದಲ ಪ್ರೀಮಿಯಂ ಆದಾಯದಲ್ಲಿ 58.8 ಶೇಕಡಾ ಮಾರುಕಟ್ಟೆ ಪಾಲನ್ನು ಹೊಂದಿರುವ ಎಲ್ಐಸಿ ಭಾರತೀಯ ವಿಮಾ ವಲಯದಲ್ಲಿ ತನ್ನ ಭದ್ರಕೋಟೆಯನ್ನು ಉಳಿಸಿಕೊಂಡಿದೆ. 2023–24ರ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯು ನಿವ್ವಳ ಲಾಭದಲ್ಲಿ ವರ್ಷದಿಂದ ವರ್ಷಕ್ಕೆ ಶೇ.2.5 ರಷ್ಟು ಏರಿಕೆಯಾಗಿ 13,762 ಕೋಟಿ ರೂಪಾಯಿಗಳಾಗಿದೆ. ಇದು ಹಿಂದಿನ ವರ್ಷದ ಅವಧಿಯಲ್ಲಿ ರೂ.13,421 ಕೋಟಿ. ಎಲ್ಐಸಿಯ ನಿಜವಾದ ಆಸ್ತಿ ಮೌಲ್ಯವು ಪ್ರಸ್ತುತ ಮೌಲ್ಯಮಾಪನಕ್ಕಿಂತ ಐದು ಪಟ್ಟು ಹೆಚ್ಚಿರಬಹುದು ಎಂದು ಎಲ್ಐಸಿ ಕಾರ್ಯನಿರ್ವಾಹಕರೊಬ್ಬರ ಹೇಳಿಕೆಯನ್ನು ಉಲ್ಲೇಖಿಸಿ 'ಮನಿಕಂಟ್ರೋಲ್' ವರದಿ ಮಾಡಿದೆ.

ಆಸ್ತಿಗಳ ಮಾರಾಟಕ್ಕೆ ಯೋಜನೆ?

ಎಲ್ಐಸಿ ತನ್ನ ಪ್ಲಾಟ್ ಗಳು ಮತ್ತು ವಾಣಿಜ್ಯ ಕಟ್ಟಡಗಳನ್ನು ಮಾರಾಟ ಮಾಡುವ ಮೂಲಕ 6–7 ಬಿಲಿಯನ್ ಡಾಲರ್ ಸಂಗ್ರಹಿಸಲು ಯೋಜಿಸುತ್ತಿದೆ ಎಂದು ಲೈವ್‌ಮಿಂಟ್ ವರದಿ ಮಾಡಿದೆ. ಮುಂಬೈನಿಂದ ಪ್ರಾರಂಭವಾಗುವ ದೇಶಾದ್ಯಂತ ತನ್ನ ರಿಯಲ್ ಪುಟ 14 ಕ್ಕೆ

ಎಲ್ಐಸಿ ಮಹಿಳಾ ಪ್ರತಿನಿಧಿಗಳ ರಾಜ್ಯ ಸಮಾವೇಶ

ಅಖಿಲ ಭಾರತ ಜೀವ ವಿಮಾ ಪ್ರತಿನಿದಿಗಳ ಸಂಘಟನೆಯ–ಲಿಕಾಯಿ (LICAOI-LIC Agents Organisation of India)ದ ಕರ್ನಾಟಕ ರಾಜ್ಯ ಮಹಿಳಾ ಪ್ರತಿನಿಧಿಗಳ ಮೂರನೇ ರಾಜ್ಯ ಸಮಾವೇಶ ಸೆಪ್ಟೆಂಬರ್ ಒಂದರಂದು ಬೆಂಗಳೂರಿನ ಸೌಹಾರ್ದ ಭವನದಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಲಿಕಾಯಿ ಕೇಂದ್ರ ಸಮಿತಿ ಕಾರ್ಯಾಧ್ಯಕ್ಷರು ಹಾಗೂ ಸಿಐಟಿಯು ರಾಜ್ಯ ಕಾರ್ಯದರ್ಶಿ ಎಲ್.ಮಂಜುನಾಥ್ ಅವರು ಮಾತನಾಡಿ, ಪ್ರತಿನಿಧಿಗಳ ಅಸ್ತಿತ್ವ ಮತ್ತು ಸಂಸ್ಥೆಯ ಉಳಿವು ಕೇಂದ್ರ ಸರ್ಕಾರದ ಧೋರಣೆ ಮತ್ತು ನೀತಿಗಳನ್ನು ಅವಲಂಭಿಸಿದೆ. ಸಂಸ್ಥೆಯನ್ನು ಉಳಿಸಿಕೊಳ್ಳಲು ಮುಂಬರುವ ದಿನಗಳಲ್ಲಿ ಹೋರಾಟ ಅನಿವಾರ್ಯವಾಗುತ್ತದೆ. ಎಲ್ಐಸಿ ಪಾಲಿಸಿದಾರರು, ಪ್ರತಿನಿಧಿಗಳು, ಸಂಸ್ಥೆಯ ಉದ್ಯೋಗಿಗಳು ಹಾಗೂ ಜನರ ಐಕ್ಯ ಚಳುವಳಿಯ ಮೂಲಕ ಸಂಸ್ಥೆಯನ್ನು ಉಳಿಸಲು ಮತ್ತು ಮತ್ತಷ್ಟು ಬೆಳೆಸಲು ಪಣತೊಡಬೇಕಿದೆ ಎಂದರು.

ಲಿಕಾಯಿ ರಾಜ್ಯ ಗೌರವಾಧ್ಯಕ್ಷರು ಹಾಗೂ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಕೆ.ಪ್ರಕಾಶ್ ಸಮಾರೋಪ ಭಾಷಣಮಾಡಿ ಮಾತನಾಡುತ್ತಾ, ಸಮಾಜದಲ್ಲಿ ಮಹಿಳೆಯರು ನಿರಂತರವಾಗಿ ಶೋಷಣೆಗೆ ಒಳಗಾಗುತ್ತಿದ್ದಾರೆ. ಮಾತೃ ಪ್ರಧಾನ ವ್ಯವಸ್ಥೆ ಹೋಗಿ, ಪಿತೃ ಪ್ರಧಾನ ವ್ಯವಸ್ಥೆ ಹೇರುವ ಮೂಲಕ ಮಹಿಳೆಯರನ್ನು ಶೋಷಣೆ ಮಾಡಲಾಗುತ್ತಿದೆ. ಕುಟುಂಬ ಹಾಗೂ ಸಮಾಜದಲ್ಲಿ ಮಹಿಳೆಯರ ಕಡೆಗಣನೆ ನಿರಂತರವಾಗಿ ನಡೆಯುತ್ತಿದೆ. ಉತ್ಪಾದನೆಯಲ್ಲಿ ತೊಡಗಿದ ಎಲ್ಲಾ ಶ್ರಮಜೀವಿಗಳು ಮಹಿಳಾ ಮತ್ತು ಪುರುಷ ಎನ್ನುವ ಲಿಂಗಭೇದವಿಲ್ಲದೆ, ಸಮಾನ ವೇತನ ಹಾಗೂ ಸೌಲಭ್ಯಗಳನ್ನು ನೀಡುವ ಸಮಾಜವನ್ನು ಕಟ್ಟುವ ದಿಶೆಯಲ್ಲಿ ಈ ಮಹಿಳಾ ಸಮಾವೇಶ ಮುಂದಾಗಬೇಕು. ಆ ನಿಟ್ಟಿನಲ್ಲಿ ಎಲ್ಐಸಿಯಂತಹ ಸೇವಾ ವಲಯದ ಸಂಸ್ಥೆಯನ್ನು ಉಳಿಸಲು, ಆ ಮೂಲಕ ದೇಶ ಕಟ್ಟಲು ಮುಂದಾಗಿ. ಅದಕ್ಕಾಗಿ ವಿಮಾ ಪ್ರತಿನಿಧಿಗಳನ್ನು ದೊಡ್ಡ ಸಂಖ್ಯೆಯಲ್ಲಿ ಸಂಘಟಿಸುವ ಜವಾಬ್ದಾರಿ ನಿಮ್ಮದಾಗಿದೆ. ಇದಕ್ಕೆ ಸಿಐಟಿಯು ಸಂಪೂರ್ಣ ಸಹಕಾರ ನೀಡುತ್ತದೆ ಎಂದರು.

ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಸಿಐಟಿಯು ರಾಜ್ಯ ಕಾರ್ಯದರ್ಶಿ ಹಾಗೂ ಮಹಿಳಾ ಉಪ ಸಮಿತಿ ಸಂಚಾಲಕರಾದ ಎಚ್.ಎಸ್.ಸುನಂದ ಅವರು, ರಾಷ್ಟ್ರ ಮತ್ತು ರಾಜ್ಯದಲ್ಲಿನ ದುಡಿಯುವ ಮಹಿಳೆಯರ ಪರಿಸ್ಥಿತಿ, ಆಳುವ ಸರ್ಕಾರಗಳ ದ್ವಿಮುಖ ಧೋರಣೆಗಳು, ಮಹಿಳೆಯರ ಮೇಲೆ ಉಂಟಾಗುವ ಪರಿಣಾಮಗಳು, ಉದ್ಯೋಗದಲ್ಲಿ ತಾರತಮ್ಯ, ವೇತನದಲ್ಲಿ ಕಡಿತ ಹಾಗೂ ಭದ್ರತೆ ಮತ್ತು ಸೌಲಭ್ಯಗಳನ್ನು ಕೊಡುವಲ್ಲಿ ಸರ್ಕಾರದ ಹಿಂಜರಿತ, ಕನಿಷ್ಠ ಸೌಲಭ್ಯಗಳನ್ನು ನೀಡದೆ, ನಾಗರಿಕ ರಕ್ಷಣೆ ಇಲ್ಲದೆ ಮಹಿಳೆಯರು ಎಲ್ಲದರಿಂದಲೂ ಹಿಂದೆ ಉಳಿಯುವಂತಹ ವಾತಾವರಣ ನಿರ್ಮಾಣವಾಗುತ್ತಿದೆ. ಮಹಿಳೆ ಮನೆಗೆ ಸೀಮಿತ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಪರಿಸ್ಥಿತಿಯನ್ನು ವಿರೋಧಿಸಿ ದುಡಿಯುವ ಮಹಿಳೆಯರು ಹೋರಾಟ ನಡೆಸುತ್ತಿದ್ದಾರೆ. ತಾವುಗಳು ಈ ಎಲ್ಲಾ ಚಳುವಳಿಯಲ್ಲಿ ಪಾಲ್ಗೊಳ್ಳುವಂತಾಗಬೇಕು. ಇತರೆ ಮಹಿಳಾ ಪ್ರತಿನಿಧಿಗಳನ್ನು ಸಂಘಟಿಸಲು ಮುಂದಾಗಬೇಕು ಎಂದು ಕರೆ ನೀಡಿದರು.



ಉಪಸಮಿತಿ ಆಯ್ಕೆ

ಸಮಾವೇಶದಲ್ಲಿ 25 ಜನರ ರಾಜ್ಯ ಮಟ್ಟದ ಮಹಿಳಾ ಉಪಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಈ ಸಮಿತಿಗೆ ಸಂಚಾಲಕರಾಗಿ ಆರ್.ಶಿವರುದ್ರಮ್ಮ (ಮೈಸೂರು), ಸಹ ಸಂಚಾಲಕರುಗಳಾಗಿ ಜಿ.ಜಿ. ಸವಿತಾ, ಸಂಗೀತಾ ಶೆಟ್ಟಿ, ಸರಸ್ವತಿ, ಚಂದ್ರಿಕಾ, ನೇತ್ರಾವತಿ, ಬಸಮ್ಮ ಮತ್ತು ಭವಾನಿ ಅಮೀನ್ ಆಯ್ಕೆಯಾದರು. ರಾಜ್ಯದ ಎಲ್ಲಾ ಜಿಲ್ಲೆಗಳಿಂದ 147 ಮಹಿಳಾ ಪ್ರತಿನಿಧಿಗಳು ಪಾಲ್ಗೊಂಡಿದ್ದು, 28ಕ್ಕೂ ಹೆಚ್ಚು ಪ್ರತಿನಿಧಿಗಳು ಮಾತನಾಡುವ ಮೂಲಕ ವರದಿಯನ್ನು ಪೂರ್ಣಗೊಳಿಸಿದರು.

ಏಕೀಕೃತ ಪಿಂಚಣಿ ಯೋಜನೆಯ (UPS) ಕುರಿತು ಒಂದಷ್ಟು ವಿಮರ್ಶೆ: ಹಳೆಯ ಪಿಂಚಣಿ ಯೋಜನೆ (OPS) ಎಂದೆಂದಿಗೂ ಉತ್ತಮ

ಆರ್.ಇಳಂಗೋವನ್
ದಕ್ಷಿಣ ರೈಲ್ವೆ ಎಂಪ್ಲಾಯಿಸ್ ಯೂನಿಯನ್ ಮುಖಂಡರು

ಹೊಸ ಪೆನ್ಷನ್ ಯೋಜನೆ ಜಾರಿ

ರಾಷ್ಟ್ರೀಯ ಪಿಂಚಣಿ ಯೋಜನೆ (NPS)– ಅಂದರೆ ಹೊಸ ಪಿಂಚಣಿ ಯೋಜನೆಯಲ್ಲಿ ವೇತನದ ಶೇ.10 ರಷ್ಟನ್ನು ಉದ್ಯೋಗಿಗಳು ಪಾವತಿಸುತ್ತಾರೆ. ಶೇ.14ರಷ್ಟು ಕೊಡುಗೆಯನ್ನು ಸರ್ಕಾರ ನೀಡುತ್ತದೆ. ಈ ಒಟ್ಟು ಪಿಂಚಣಿ ನಿಧಿಯನ್ನು ಷೇರು ಮಾರುಕಟ್ಟೆಯಲ್ಲಿ ಮ್ಯೂಚುವಲ್ ಪಂಡ್‌ನಲ್ಲಿ ಹೂಡಿಕೆ ಮಾಡಲಾಗುತ್ತದೆ. ಅದರಿಂದ ಬರುವ ಲಾಭವೂ ನಮ್ಮ ಪಿಂಚಣಿ ಖಾತೆಯಲ್ಲಿ ಇರುತ್ತದೆ. ನೌಕರರು ನಿವೃತ್ತಿಯ ಸಮಯದಲ್ಲಿ ಈ ನಿಧಿಯಿಂದ ಶೇ.60ರಷ್ಟು ಹಣವನ್ನು ತೆಗೆದುಕೊಳ್ಳಬಹುದು. ಉಳಿದ ಶೇ.40 ರಷ್ಟನ್ನು ಮ್ಯೂಚುವಲ್ ಪಂಡ್ ನಲ್ಲಿ ಹೂಡಿಕೆ ಮಾಡಿ, ಅದರಿಂದ ಬರುವ ಲಾಭದಿಂದ ಪಿಂಚಣಿ ಕೊಡಲಾಗುತ್ತದೆ. ಪಿಂಚಣಿದಾರ ಮತ್ತು ಅವನ ಜೀವಂತ ಸಂಗಾತಿ ಇಬ್ಬರ ಮರಣದ ನಂತರ ಶೇ.40 ಅನ್ನು ವಾರಸುದಾರರಿಗೆ ಹಿಂತಿರುಗಿಸಲಾಗುತ್ತದೆ.

ಏಕೀಕೃತ ಪಿಂಚಣಿ ಯೋಜನೆಯಲ್ಲಿ ಹೇಳಿರುವಂತೆ

ಪ್ರಸ್ತುತ ಘೋಷಿಸಲಾದ ಏಕೀಕೃತ ಪಿಂಚಣಿ ಯೋಜನೆ(UPS)ಗೆ ಉದ್ಯೋಗಿಗಳು ಶೇ. 10 ಕೊಡುಗೆಯನ್ನು ಮುಂದುವರಿಸುತ್ತಾರೆ. ಸರ್ಕಾರ ಶೇ. 18.5 ಅನ್ನು ನೀಡುತ್ತದೆ. ಅಂದರೆ ಒಟ್ಟು ಶೇ. 28.5ರಷ್ಟು ಪಿಂಚಣಿ ಖಾತೆಗೆ ಜಮಾ ಆಗಬೇಕಲ್ಲವೇ? ಆದರೆ ಸರ್ಕಾರವು ನೌಕರನ ಶೇ 10ಕ್ಕೆ ಕೇವಲ ಶೇ. 10 ಅನ್ನು ಮಾತ್ರ ಸೇರಿಸುತ್ತದೆ. ಆದ್ದರಿಂದ ಒಟ್ಟು ನೌಕರನ ಖಾತೆಯಲ್ಲಿ ಶೇ. 28.5ರ ಬದಲಿಗೆ ಶೇ. 20ರಷ್ಟು ಮಾತ್ರ ಇರುತ್ತದೆ. ಉಳಿದ ಶೇ. 8.5ರಲ್ಲಿ ಸರ್ಕಾರ ಪ್ರತ್ಯೇಕ ಖಾತೆಯನ್ನು ಸ್ಥಾಪಿಸಲಿದೆಯಂತೆ. ಅದನ್ನು ಮಾರುಕಟ್ಟೆಯಲ್ಲಿ ನಿರಂತರವಾಗಿ ಹೂಡಿಕೆ ಮಾಡಿ ಲಾಭ ಪಡೆದರೆ, ಆ ಲಾಭವನ್ನು ಪ್ರತ್ಯೇಕ ಪಿಂಚಣಿ ಖಾತೆಗೆ ಸೇರಿಸುತ್ತಾರೆ. ಅವರು ಅದನ್ನು ಪ್ರತ್ಯೇಕವಾಗಿ ನಿರ್ವಹಿಸುತ್ತ ಪಿಂಚಣಿಯಲ್ಲಿನ ಕೊರತೆಯನ್ನು ಸರಿದೂಗಿಸಲು ಬಳಸುತ್ತಾರೆ. ಪ್ರತ್ಯೇಕ ಪಿಂಚಣಿ ಖಾತೆಯಲ್ಲಿ ಇರುವ ಸಂಪೂರ್ಣ ಮೊತ್ತವನ್ನು ಸರ್ಕಾರ ತೆಗೆದುಕೊಳ್ಳುತ್ತದೆ, ಉದ್ಯೋಗಿಗೆ ಖಾತರಿ ಪಿಂಚಣಿ, ಸಂಗಾತಿಗೆ ಖಾತರಿಯ ಕುಟುಂಬ ಪಿಂಚಣಿ ನೀಡಲಾಗುತ್ತದೆ. ಇಬ್ಬರೂ ಮರಣಹೊಂದಿದ ನಂತರ, ಅವರು ಹೂಡಿಕೆ ಮಾಡಿದ ಹಣವು ನಾಮಿನಿಗೆ ಹೋಗುತ್ತದೆ ಹೊಸ ಪಿಂಚಣಿ ಯೋಜನೆಯಲ್ಲಿ, 40 ಪ್ರತಿಶತವು ರಿಟರ್ನ್ ರೂಪದಲ್ಲಿ ಲಭ್ಯವಿರುವುದಿಲ್ಲ. ಸರ್ಕಾರ ಅದನ್ನು ಉಳಿಸಿಕೊಳ್ಳುತ್ತದೆ.

ಸೇವೆಯ ಅವಧಿ ವ್ಯತ್ಯಾಸ

ಹೊಸ ಪಿಂಚಣಿ ಯೋಜನೆ(ಎನ್‌ಪಿಎಸ್) ಯಲ್ಲಿ ಉದ್ಯೋಗಿ 25 ವರ್ಷಗಳ ಸೇವೆಯನ್ನು ಹೊಂದಿರಬೇಕು. ವೈಯಕ್ತಿಕ ಪಿಂಚಣಿ ಖಾತೆಯಲ್ಲಿ ಇರುವ ಇಡೀ ಮೊತ್ತದ ಶೇ. 100ರಷ್ಟನ್ನು ಸರ್ಕಾರವೇ ತೆಗೆದುಕೊಳ್ಳಲು ಉದ್ಯೋಗಿ ಒಪ್ಪಿಕೊಳ್ಳಬೇಕು. ಹಾಗಾದರೆ, ನೌಕರನು ತನ್ನ ಕೊನೆಯ 12 ತಿಂಗಳ ಮೂಲ ವೇತನವನ್ನು ಕೂಡಿಸಿ, 12ರಿಂದ ಭಾಗಿಸಿದರೆ ಬರುವ ಸರಾಸರಿ ವೇತನದ ಶೇ. 50ರಷ್ಟು ಖಾತರಿ ಪಿಂಚಣಿ ಲಭ್ಯವಿದೆ.

ಯುಪಿಎಸ್ (UPS) ಎಂದು ಕರೆಯಲಾಗುವ ಏಕೀಕೃತ ಪಿಂಚಣಿ ಯೋಜನೆಯ ಮಾಹಿತಿಯನ್ನು ಕೇಂದ್ರ ಬಿಜೆಪಿ ಸಮ್ಮಿಶ್ರ ಸರ್ಕಾರ ಸ್ವಲ್ಪಮಟ್ಟಿಗೆ ಸೋರಿಕೆ ಮಾಡುತ್ತಿದೆ, ಸಂಪೂರ್ಣ ಅಧಿಸೂಚನೆ ಹೊರಬಂದಾಗ ಮಾತ್ರ ಇಡೀ ಸಮಸ್ಯೆ ಬೆಳಕಿಗೆ ಬರಲಿದೆ. ಹೊಸದಾಗಿ ಘೋಷಿಸಲಾದ ಏಕೀಕೃತ ಪಿಂಚಣಿ ಯೋಜನೆಯು 2025ರ ಏಪ್ರಿಲ್ ಒಂದರಿಂದ ಜಾರಿಗೆ ಬರಲಿದೆ. ಅಂದರೆ 2025 ರ ಮಾರ್ಚ್ 31 ರ ನಂತರ ನಿವೃತ್ತರಾಗುವವರಿಗೆ ಇದು ಅನ್ವಯಿಸುತ್ತದೆ. ಸೋರಿಕೆಗೊಂಡ ಅಂಶಗಳನ್ನು ಗಮನಿಸಿದರೆ, ಇದರಲ್ಲಿ ಬಹಳಷ್ಟು ವಂಚನೆಗಳಿರುವುದು ಕಾಣುತ್ತದೆ. ಯುಪಿಎಸ್ ಎಂಬುದು ಪಿಂಚಣಿ ಖಾತರಿಯಾಗಿದೆ ಎಂದು ಹೇಳಿದರೂ, ಹಳೆಯ ಪಿಂಚಣಿ ಯೋಜನೆಗೆ ಹೋಲಿಸಿದರೆ ಇದು ಅಸಮರ್ಪಕವಾಗಿದೆ. 'ಯುಪಿಎಸ್' ಎಂಬುದು ನಾಯಿಯ ಬಾಲ ಕತ್ತರಿಸಿ ನಾಯಿಗೆ ಸೂಪ್ ಮಾಡಿ ಕೊಟ್ಟಂತೆ, ನಮ್ಮ ಹಣದಲ್ಲಿ 100 ಪರ್ಸೆಂಟ್ ತೆಗೆದುಕೊಂಡು ನಮಗೇ ಪಿಂಚಣಿ ಕೊಡುತ್ತಾರೆ!



ಆದರೆ ಒಪಿಎಸ್ ನಲ್ಲಿ 10 ವರ್ಷಗಳ ಸೇವೆಯ ನಂತರವೇ ಕೊನೆಯ ತಿಂಗಳ ಮೂಲ ವೇತನದ 50 ಪ್ರತಿಶತವು ಪಿಂಚಣಿಯಾಗಿ ಖಾತರಿಪಡಿಸುತ್ತದೆ. ಹೊಸ ಪಿಂಚಣಿ ಯೋಜನೆಯಲ್ಲಿ (NPS) 24 ಶೇಕಡಾದಲ್ಲಿ 60 ರಷ್ಟು ತೆಗೆದುಕೊಳ್ಳಬಹುದಲ್ಲವೇ? ಆದರೆ ಯುಪಿಎಸ್‌ನಲ್ಲಿ ವೈಯಕ್ತಿಕ ಪಿಂಚಣಿ ಖಾತೆಯಲ್ಲಿರುವ ಶೇ. 20ರಿಂದ ಶೇ. 60ರವರೆಗೆ ಹಿಂಪಡೆಯಬಹುದು. ಆ ರೀತಿಯಲ್ಲಿ ತೆಗೆದುಕೊಂಡರೆ ನಿಮ್ಮ ಶೇ. 50 ಪಿಂಚಣಿಯು ಅದೇ ಅನುಪಾತದಲ್ಲಿ ಕಡಿಮೆಯಾಗುತ್ತದೆ.

ಉದಾಹರಣೆಗೆ, ಶೇ. 60ರಷ್ಟನ್ನು ಹಿಂತೆಗೆದುಕೊಂಡರೆ, ಶೇ. 50ರಲ್ಲಿ ಶೇ. 60ರಷ್ಟು ಕಡಿಮೆಯಾಗುತ್ತದೆ. ಉಳಿದ ಶೇ. 40 ಮಾತ್ರ ಪಿಂಚಣಿಯಾಗಿ ಸಿಗುತ್ತದೆ. ಆದರೆ ಇದು ಖಾತರಿಯಾಗಿದೆ. ಎನ್‌ಪಿಎಸ್ ನಲ್ಲಿ ಸಾಕಷ್ಟು ಪಿಂಚಣಿಯೂ ಇಲ್ಲ. ಖಾತರಿ ಪಿಂಚಣಿಯೂ ಇಲ್ಲ. ಅದೇ ರೀತಿ 25 ವರ್ಷ ಸೇವೆ ಸಲ್ಲಿಸಿದರೆ ಮಾತ್ರವೇ ಶೇ. 50ರಷ್ಟು ಪಿಂಚಣಿ ಸಿಗುತ್ತದೆ. ಸೇವಾ ಅವಧಿ 20 ವರ್ಷವಾಗಿದ್ದರೆ, ನಿಮ್ಮ ಪಿಂಚಣಿ 25 ವರ್ಷ ಸೇವಾವಧಿಗೆ 50 ಎಂದರೆ 20ಕ್ಕೆ ಎಷ್ಟು ಎಂದು ನೋಡುತ್ತಾರೆ. ಹಾಗೆಂದರೆ, ನಿಮ್ಮ ಮಾಸಿಕ ಸರಾಸರಿ ಸಂಬಳದ ಶೇ. 40 ಅನ್ನು ಮಾತ್ರ ನೀವು ಪಿಂಚಣಿಯಾಗಿ ಪಡೆಯುತ್ತೀರಿ. 10 ವರ್ಷಗಳು ನಿಮ್ಮ ಸೇವಾವಧಿ ಎಂದರೆ ಶೇ. 20 ಪಿಂಚಣಿ ಸಿಗುತ್ತದೆ. ಅಂದರೆ, ನಿವೃತ್ತಿ ವಯಸ್ಸಿನಲ್ಲಿ (60/62/65) ನಿವೃತ್ತರಾಗುವ ವ್ಯಕ್ತಿಯು 10,000 ರೂ.ಗಳ ಖಾತರಿಯ ಪಿಂಚಣಿಯನ್ನು ಪಡೆಯುತ್ತಾನೆ. OPS ನಲ್ಲಿ ಇದು 9000 ರೂಪಾಯಿ. ಆಂಧ್ರಪ್ರದೇಶಲ್ಲಿರುವ GPS ಎಂಬ ಖಾತರಿ ಪಿಂಚಣಿ ಯೋಜನೆಯಲ್ಲಿ, 10 ವರ್ಷಗಳ ಸೇವೆಯ ನಂತರ, ವೇತನದಲ್ಲಿ ಶೇ. 50 ಪಿಂಚಣಿ ಸಿಗುತ್ತದೆ. ಅಲ್ಲದೇ ಉದ್ಯೋಗಿಯ ಖಾತೆಯಲ್ಲಿರುವ ಶೇ. 60ರಷ್ಟು ಮೊತ್ತವನ್ನು ತೆಗೆದುಕೊಳ್ಳಬಹುದು. ಪಿಂಚಣಿ ಪ್ರಮಾಣಾನುಗುಣವಾಗಿ ಕಡಿಮೆಯಾಗುವುದಿಲ್ಲ

ಯುಪಿಎಸ್ ನಲ್ಲಿ ಕನಿಷ್ಠ ಪಿಂಚಣಿ

ಒಬ್ಬರ ನಿವೃತ್ತಿಯ ಹಿಂದಿನ 12 ತಿಂಗಳ ಸರಾಸರಿಯನ್ನು ಆಧರಿಸಿ ಮಾಸಿಕ ವೇತನವು ಒಂದು ಲಕ್ಷ ಎಂದು ಊಹಿಸೋಣ. ಅವರು ತಮ್ಮ ವೈಯಕ್ತಿಕ ಪಿಂಚಣಿ ಖಾತೆಯ ಶೇ. 100 ರಷ್ಟನ್ನು ಸರ್ಕಾರಕ್ಕೆ ಬಿಟ್ಟುಕೊಡಲು ಒಪ್ಪುತ್ತಾರೆ ಎಂದು ಭಾವಿಸೋಣ. ಅವರು 60ನೇ ವಯಸ್ಸಿಗೆ ನಿವೃತ್ತರಾದಾಗ 25 ವರ್ಷಗಳ ಸೇವಾವಧಿ ಹೊಂದಿದ್ದರೆ ಶೇ. 50ರಷ್ಟು ಪಿಂಚಣಿ ರೂ.50,000 ಸಿಗುತ್ತದೆ. ಅವರು ವೈಯಕ್ತಿಕ ಪಿಂಚಣಿ ಖಾತೆಯಿಂದ ಶೇ.60 ಅನ್ನು ಹಿಂಪಡೆಯಲು ಬಯಸಿದರೆ, ಅವರ ಪಿಂಚಣಿ 50,000 ದಲ್ಲಿ ಶೇ.60 ಅನ್ನು ಕಡಿತಮಾಡಿ ಉಳಿದ ಶೇ.40 ಮಾತ್ರ ಪಿಂಚಣಿಯಾಗಿ ಲಭ್ಯವಿರುತ್ತದೆ. ಅಂದರೆ ರೂ.20,000 ಮಾತ್ರ ಸಿಗುತ್ತದೆ. ಆದರೆ ಇದು ಖಾತರಿಯಾಗಿ ಸಿಗುತ್ತದೆ. ಈ ಮೊತ್ತವು ರೂ.10,000 ಕ್ಕಿಂತ ಕಡಿಮೆಯಾದರೆ ರೂ.10,000 ಖಾತರಿಯಾಗಿ ಲಭ್ಯವಿರುತ್ತದೆ.

ಸೇವಾ ಅವಧಿ 25 ವರ್ಷಗಳಾಗಿದ್ದರೆ ವೈಯಕ್ತಿಕ ಖಾತೆಯಲ್ಲಿರುವ ಸಂಪೂರ್ಣ ಪಿಂಚಣಿ ಮೊತ್ತವನ್ನು ಬಿಟ್ಟುಕೊಟ್ಟರೆ ರೂ. 50,000 ಪಿಂಚಣಿ; ಶೇ. 60ರಷ್ಟು ತೆಗೆದುಕೊಂಡರೆ ರೂ.20,000 ಪಿಂಚಣಿ; 20 ವರ್ಷಗಳ ಸೇವಾ ಅವಧಿ ಮಾತ್ರ ಇದ್ದರೆ, ಸರಾಸರಿ ಒಂದು ತಿಂಗಳ ವೇತನದಲ್ಲಿ ಪೂರ್ಣ ವೈಯಕ್ತಿಕ ಖಾತೆಯಲ್ಲಿನ ಸಂಪೂರ್ಣ ಪಿಂಚಣಿ ಮೊತ್ತವನ್ನು ಬಿಟ್ಟುಕೊಟ್ಟರೆ ಶೇ. 40ರಷ್ಟು ಪಿಂಚಣಿ. ಅಂದರೆ ರೂ.40,000 ಪಿಂಚಣಿ; ಶೇ. 60 ತೆಗೆದುಕೊಂಡರೆ 40,000 ರೂ.ನಲ್ಲಿ ಶೇ. 40ರಷ್ಟು ಅಂದರೆ ರೂ.16,000 ಪಿಂಚಣಿ ಖಾತರಿ. 10 ವರ್ಷಗಳ ಸೇವಾವಧಿಯನ್ನು ಹೊಂದಿದ್ದರೆ ಸಂಪೂರ್ಣ ವೈಯಕ್ತಿಕ ಖಾತೆಯಲ್ಲಿ ಇರುವ ಹಣವನ್ನು ಬಿಟ್ಟುಕೊಟ್ಟರೆ ಸರಾಸರಿ ಒಂದು ತಿಂಗಳ ವೇತನದಲ್ಲಿ ಶೇ.20 ಅಂದರೆ ರೂ.20,000 ಪಿಂಚಣಿ. 60 ರಷ್ಟು ತೆಗೆದುಕೊಂಡರೆ, 20,000 ರೂ.ಗಳಲ್ಲಿ ಶೇ.40 ಅಂದರೆ ರೂ.8000 ಪಿಂಚಣಿ. ಆದರೂ ಇವರಿಗೆ ರೂ. 10,000 ಗ್ಯಾರಂಟಿ. 10 ವರ್ಷಕ್ಕಿಂತ ಕಡಿಮೆ ಇದ್ದರೆ ಪಿಂಚಣಿ ಇರುವುದಿಲ್ಲ. ಅವರ ಹಣ ಹಿಂತಿರುಗಿ ಸಿಗುತ್ತದೆಯೇ ಎಂಬುದು ಅಧಿಸೂಚನೆ ಹೊರ ಬಂದ ನಂತರವೇ ತಿಳಿಯುತ್ತದೆ. ಆದರೆ ನಾವು ಒತ್ತಾಯಿಸುವ ಹಳೆಯ ಪಿಂಚಣಿ ಯೋಜನೆ (OPS)ಯಲ್ಲಿ ಈ ಸಮಸ್ಯೆ ಇಲ್ಲ. 10 ವರ್ಷಗಳ ಸೇವಾವಧಿ ಇದ್ದರೂ ರೂ.50,000 ಪಿಂಚಣಿ ಖಾತರಿಪಡಿಸಲಾಗಿದೆ. ಯಾವುದೇ ಕೊಡುಗೆಯ ಅಗತ್ಯವಿಲ್ಲ. ಆದ್ದರಿಂದ ಏಕೀಕೃತ ಪಿಂಚಣಿ ಯೋಜನೆ (ಯುಪಿಎಸ್) ಎಂಬುದು ಖಾತರಿಯಾಗಿದೆ ಎಂದು ಹೇಳಿದರೂ ಎನ್‌ಪಿಎಸ್‌ನಂತೆ, ಹಳೆಯ ಪಿಂಚಣಿ ಯೋಜನೆಗೆ ಹೋಲಿಸಿದರೆ ಇದು ಅಸಮರ್ಪಕವಾಗಿದೆ.

ಹಳೆಯ ಪಿಂಚಣಿ ಯೋಜನೆ (OPS) ಸಾಕು, ಅದು ಉತ್ತಮವಾಗಿದೆ. ಇದರಲ್ಲಿ ತುಟ್ಟಿಭತ್ಯೆಯನ್ನು ಸಂಪೂರ್ಣವಾಗಿ ಸಂಯೋಜಿಸಲಾಗಿದೆ. ಖಾತರಿಪಡಿಸಲಾಗಿದೆ. ಕುಟುಂಬ ಪಿಂಚಣಿಯೂ ಇದೆ. ವಾರಸುದಾರರಿಗೂ ಇದೆ. ಕನಿಷ್ಠ ಪಿಂಚಣಿ ನ್ಯಾಯಯುತವಾಗಿದೆ. ಕಮ್ಯುಟೇಶನ್ ಇದೆ. ವಯಸ್ಸಿನೊಂದಿಗೆ ಹೆಚ್ಚಾಗುತ್ತದೆ. ವೇತನ ಆಯೋಗದಲ್ಲಿ ಹೆಚ್ಚಳವಾಗುತ್ತದೆ. ಇದಕ್ಕಾಗಿ ನಾವು ಹೋರಾಡಬೇಕಿದೆ.

ಏಕೀಕೃತ ಪಿಂಚಣಿ ಯೋಜನೆಯಲ್ಲಿನ ಕುಟುಂಬ ಪಿಂಚಣಿ

ಯುಪಿಎಸ್ ಯೋಜನೆಯಲ್ಲಿ ಕುಟುಂಬ ಪಿಂಚಣಿ ಸಂಗಾತಿಗೆ ಮಾತ್ರ ಲಭ್ಯವಿರುತ್ತದೆ. ಹೊಸ ಪಿಂಚಣಿ ಯೋಜನೆ(NPS)ಯಲ್ಲೂ ಇದೇ ಆಗಿದೆ. ನಿವೃತ್ತ ಉದ್ಯೋಗಿಯ ಅರ್ಹ ಪಿಂಚಣಿಯ ಶೇ. 60ರಷ್ಟು ಕುಟುಂಬ ಪಿಂಚಣಿ ಎಂದು ಖಾತರಿಪಡಿಸಲಾಗುತ್ತದೆ. ರೂ.50,000 ಪಿಂಚಣಿ ಎಂದರೆ ಇದರಲ್ಲಿ ಶೇ.60 ಎಂದರೆ, ರೂ.30,000 ಕುಟುಂಬ ಪಿಂಚಣಿ ಖಾತರಿಯಾಗಿ ಸಿಗುತ್ತದೆ. ಪಿಂಚಣಿ ರೂ.10,000 ಆಗಿದ್ದರೆ ಅದರಲ್ಲಿ ಶೇ. 60ರಷ್ಟು ಕುಟುಂಬ ಪಿಂಚಣಿ ರೂ.6000 ಆಗಿರುತ್ತದೆ. ಕನಿಷ್ಠ ಪಿಂಚಣಿ ರೂ.10,000 ಎಂಬುದು ನಿವೃತ್ತಿಯ ವಯಸ್ಸಿನಲ್ಲಿ ನಿವೃತ್ತರಾದವರಿಗೆ ಮಾತ್ರ ಅನ್ವಯಿಸುತ್ತದೆ. ಕುಟುಂಬ ಪಿಂಚಣಿಗೆ ಅನ್ವಯಿಸುವುದಿಲ್ಲ. ಆದ್ದರಿಂದ ಕನಿಷ್ಠ ಕುಟುಂಬ ಪಿಂಚಣಿ ರೂ.6000 ಮಾತ್ರ.

ಒಪಿಎಸ್‌ನಲ್ಲಿ ಪಿಂಚಣಿದಾರರು ಮರಣಹೊಂದಿದರೆ, ನಿವೃತ್ತಿಯ ದಿನಾಂಕದಿಂದ 7 ವರ್ಷಗಳವರೆಗೆ ಅಥವಾ 67 ವರ್ಷ ವಯಸ್ಸಿನವರೆಗೆ ಕೊನೆಯ ತಿಂಗಳ ಸಂಬಳದ ಶೇ. 50ರಷ್ಟು ಕುಟುಂಬ ಪಿಂಚಣಿಯನ್ನು ಪಾವತಿಸಲಾಗುತ್ತದೆ. ಅದರ ನಂತರ ಕೊನೆಯ ತಿಂಗಳ ಸಂಬಳದ ಶೇ. 30ರಷ್ಟನ್ನು ಕುಟುಂಬ ಪಿಂಚಣಿಯಾಗಿ ನೀಡಲಾಗುತ್ತದೆ. ಕನಿಷ್ಠಪಕ್ಷ ರೂ.9000 ಮೂಲ ಪಿಂಚಣಿ ನೀಡಲಾಗುವುದು. ಇದಕ್ಕಾಗಿ, ಕೇಂದ್ರ ಸರ್ಕಾರಿ ನೌಕರರಿಗೆ ಸಮಾನವಾಗಿ ಬೆಲೆ ಏರಿಕೆಗೆ ಅನುಗುಣವಾಗಿ ಸಿಗುತ್ತದೆ. ಸಂಗಾತಿಯು ನಿಧನರಾದರೆ ಅವರ ಅಂಗವಿಕಲ ಮಗ ಅಥವಾ ಅವಿವಾಹಿತ ಅಥವಾ ವಿಧವೆ ಅಥವಾ ವಿಚ್ಛೇದಿತ ಮಗಳು ಇವರ ಜೀವನಕ್ಕಾಗಿ, ಇಬ್ಬರಲ್ಲಿ ಯಾರಿಗಾದರೂ ಒಬ್ಬರಿಗೆ ಜೀವನಪೂರ್ತಿ ಅಥವಾ ಮರುಮದುವೆ ಆಗುವವರೆಗೆ ಅದೇ ಪಿಂಚಣಿ ಸಿಗುತ್ತದೆ. ಆದರೆ ಎನ್‌ಪಿಎಸ್ ಅಥವಾ ಯುಪಿಎಸ್ ಸಂಗಾತಿ ನಿದನದ ನಂತರ ಪಿಂಚಣಿ ಕೊನೆಗೊಳ್ಳುತ್ತದೆ.

ತುಟ್ಟಿಭತ್ಯೆಗೆ ಅನುಗುಣವಾಗಿ

ಎನ್‌ಪಿಎಸ್ ನಲ್ಲಿ ತುಟ್ಟಿಭತ್ಯೆಗೆ ಅನುಗುಣವಾಗಿ ಪಿಂಚಣಿ ಹೆಚ್ಚಳವಿಲ್ಲ. ಯುಪಿಎಸ್ ನಲ್ಲಿ ತುಟ್ಟಿಭತ್ಯೆಗೆ ಅನುಗುಣವಾಗಿ ಇದೆ. ಆದರೆ ತುಟ್ಟಿಭತ್ಯೆಯನ್ನು ಕೇಂದ್ರ ಸರ್ಕಾರಿ ನೌಕರರಿಗೆ ಪುಟ 10 ಕ್ಕೆ

ಮರೆಯಬಾರದ ಫಾತೀಮಾ ಶೇಕ್

ಸಾವಿತ್ರಿಬಾಯಿ ಫುಲೆ–ಫಾತೀಮಾ ಶೇಕ್ ಆಧುನಿಕ ಭಾರತದ ಮೊದಲ ಶಿಕ್ಷಕಿಯರು

ಭಾರತದ ರಾಷ್ಟ್ರಪತಿಯಾಗಿದ್ದ ಸರ್ವೇಪಲ್ಲಿ ರಾಧಾಕೃಷ್ಣನ್ ಅವರು ಹುಟ್ಟಿದ ದಿನ ಸೆಪ್ಟೆಂಬರ್ 5ರಂದು ದೇಶದಾದ್ಯಂತ ‘ಶಿಕ್ಷಕರ ದಿನ’ ಎಂದು ಆಚರಿಸಲಾಗುತ್ತಿದೆ. ಅಂದು ಶಿಕ್ಷಕರು ನೀಡಿದ ಕೊಡುಗೆಗಳನ್ನು ಸ್ಮರಿಸುವುದು, ಗೌರವಿಸುವ ಹಲವು ಕಾರ್ಯಕ್ರಮಗಳು ಜರುತ್ತವೆ. ಪ್ರಶಸ್ತಿಗಳನ್ನೂ ನೀಡಲಾಗುತ್ತದೆ. ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾದ ಅನೇಕರು ಇದ್ದಾರೆ. ಆದರೆ ಮೇಲ್ಜಾತಿ, ಮೇಲ್ವರ್ಗದವರನ್ನು ಹೊರತು ಪಡಿಸಿ ಉಳಿದ ಜಾತಿಗಳ ಜನರು ಕಲಿಯುವುದು, ಅಕ್ಷರ ಕಲಿಸುವುದು ಮಹಾಪರಾಧ ಎಂದು ಘೋಷಿತ ಮೌಲ್ಯಗಳ ಪರಿಸ್ಥಿತಿಯಲ್ಲಿ ಅಕ್ಷರ ಕಲಿಸುವ ಕ್ರಾಂತಿಕಾರಿ ಹೆಜ್ಜೆ ಇರಿಸಿದವರಲ್ಲಿ ಜ್ಯೋತಿ ಬಾ ಫುಲೆ, ಸಾವಿತ್ರಿಬಾಯಿ ಫುಲೆ, ಫಾತೀಮಾ ಶೇಕ್ ಮೊದಲಿಗರು. ಅದರಲ್ಲೂ ಸಾವಿತ್ರಿಬಾಯಿ ಯವರನ್ನು ‘ಅಕ್ಷರದವ್ವ’ ಎಂದು ಕರೆಯಲಾಗುತ್ತಿದೆ. ನಿಜ ಅದು ಅವರಿಗೆ ಸಲ್ಲಿಸುವ ಗೌರವ. ಇದೇ ಹೊತ್ತಿನಲ್ಲಿ ಇವರೊಂದಿಗೆ ಜೊತೆ ಜೊತೆಯಾಗಿ ನಿಂತು ಅಕ್ಷರ ಕಲಿಸಿದ ಫಾತಿಮಾಳನ್ನು ಆಚರಣೆಯ ಸಂದರ್ಭದಲ್ಲಿ ಮರೆಯಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಫಾತೀಮಾ ಶೇಕ್ ರವರ ಪಾತ್ರ, ಕೊಡುಗೆಗಳನ್ನು ಲೇಖಕರು ಇಲ್ಲಿ ನೆನಪಿಸಿಕೊಂಡಿದ್ದಾರೆ.

ಡಾ.ಅರುಣ್ ಜೋಳದ ಕೂಡ್ಲಿಗಿ



ಕೆಳಜಾತಿಗಳಿಗೆ ಅಕ್ಷರ ಕಲಿಸುವುದು ಧರ್ಮವಿರೋಧಿ ಎಂದು ಮೇಲ್ಜಾತಿಗಳ ಜನರು, ವ್ಯಾಪಾರಿ ಗೋವಿಂದರಾವ್ ಜತೆ ಜಗಳ ಮಾಡುತ್ತಾರೆ. ಇದರಿಂದಾಗಿ ಮಗ ಜೋತಿಬಾ, ಸೊಸೆ ಸಾವಿತ್ರಿಬಾಯಿ ಅವರು ಅಕ್ಷರ ಕಲಿಸುವುದನ್ನು ನಿಲ್ಲಿಸದ್ದಕ್ಕೆ ಅವರಿಬ್ಬರನ್ನು ಉಟ್ಟ ಬಟ್ಟೆಯಲ್ಲಿಯೇ ಮನೆಯಿಂದ ಹೊರಹಾಕುತ್ತಾರೆ. ಗೋವಿಂದರಾವ್ ತಂಗಿ ಸುಗುಣಬಾಯಿ ಪರ್ಷಿಯನ್ ಶಿಕ್ಷಕ ಮುನ್ಷಿ ಗಫರ್ ಖಾನ್ ಅವರ ಬಳಿ ವಿಷಯ ತಿಳಿಸುತ್ತಾರೆ. ಗಫರ್ ಖಾನ್ ಫುಲೆ ದಂಪತಿಗಳನ್ನು ಉಸ್ಮಾನ್ ಶೇಕ್ ಅವರ ಮನೆಗೆ ಕರೆದೊಯ್ಯುತ್ತಾರೆ. ನಡೆದ ಘಟನೆಯನ್ನು ವಿವರಿಸುತ್ತಾರೆ. ಉಸ್ಮಾನ್ ಶೇಕ್ ತನ್ನ ಮನೆಯ ಎರಡು ಕೋಣೆಗಳನ್ನು ಬಿಟ್ಟುಕೊಡುತ್ತಾರೆ. ಮನೆಯ ಒಳಗಿಂದ ಒಂದು ಹುಡುಗಿ ಬಂದು ಸಾವಿತ್ರಿಬಾಯಿಯನ್ನು ಪರಿಚಯ ಮಾಡಿಕೊಳ್ಳುತ್ತಾಳೆ. ಆ ಹುಡುಗಿಯೇ ಉಸ್ಮಾನ್ ಶೇಕ್ ಅವರ ತಂಗಿ ಫಾತೀಮಾ ಶೇಕ್.

ಉಸ್ಮಾನ್ ಶೇಕ್ ಅವರ ಮನೆಯಲ್ಲಿ ಫುಲೆ ದಂಪತಿಗಳಿಂದ (1848) ಶಾಲೆಯೊಂದು ಆರಂಭವಾಗುತ್ತದೆ. ಇದೇ ಶಾಲೆಯಲ್ಲಿ ಸಾವಿತ್ರಿಬಾಯಿ ಮತ್ತು ಫಾತೀಮಾ ಶಿಕ್ಷಕಿಯರಾಗುತ್ತಾರೆ. ಆದರೆ ಸಾವಿತ್ರಿಬಾಯಿ ಅವರನ್ನು ಜನವರಿ 3 ರಂದು ದೇಶವ್ಯಾಪಿ ನೆನೆದು, ಫುಲೆ ದಂಪತಿಗಳ ಅಕ್ಷರಕ್ರಾಂತಿಯ ಭಾಗವಾಗಿದ್ದ ಫಾತೀಮಾ ಶೇಕ್ ಹುಟ್ಟಿದ ಜನವರಿ 9 ಅನ್ನು ಚಾರಿತ್ರಿಕವಾಗಿ ನೆನೆಯುವುದಿಲ್ಲ.

ಹಾಗೆ ನೋಡಿದರೆ, ಫುಲೆ ದಂಪತಿಗಳ ಜತೆ, ಮುನ್ಷಿ ಗಫರ್ ಖಾನ್, ಸುಗುಣಬಾಯಿ, ಉಸ್ಮಾನ್ ಶೇಕ್, ಮತ್ತು ಫಾತೀಮಾ ಶೇಕ್ ಆಧುನಿಕ ಭಾರತದಲ್ಲಿ ದಮನಿತರಿಗೆ ಅಕ್ಷರದ ಬೆಳಕು ಬೀರಲು ಸಾಲುದೀಪದಂತೆ ಉರಿದವರು. ಹಾಗಾಗಿ ಈ ಕಾರ್ಯಾಚರಣೆಯ ಭಾಗವಾದ ಎಲ್ಲರನ್ನೂ ನೆನೆಯಬೇಕಿದೆ. ಈ ಶಿಕ್ಷಣ ಕ್ರಾಂತಿಗೆ ’ದಲಿತ–ದಮನಿತ–ಮಹಿಳೆ–ಮುಸ್ಲೀಂ’ ಸಂಯುಕ್ತ ಅರಿವಿನ ಹೋರಾಟದ ಒಂದು ದೊಡ್ಡ ಮಾದರಿಯನ್ನು ಈ ಮೂಲಕ ತೋರಿಸಿದ್ದಾರೆ.

ಸೂಸಿ ತಾರು ಮತ್ತು ಲಲಿತ ಕೆ. ಅವರು 1991 ರಲ್ಲಿ ಸಂಪಾದಿಸಿದ 'ವುಮನ್ ರೈಟಿಂಗ್ ಇನ್ ಇಂಡಿಯಾ’ ಮೊದಲ ಸಂಪುಟದಲ್ಲಿ ಸಾವಿತ್ರಿಬಾಯಿ 1856 ರಲ್ಲಿ ಬರೆದ ಪತ್ರವೊಂದು ಪ್ರಕಟವಾಗುತ್ತದೆ. ಈ ಪತ್ರದಲ್ಲಿ ಫಾತೀಮಾ ಶೇಕ್ ಅವರ ಉಲ್ಲೇಖ ಗಮನ ಸೆಳೆಯುತ್ತದೆ. ನಂತರ ಫಾತೀಮಾಳ ಬಗ್ಗೆ ಕುತೂಹಲ ಮೂಡುತ್ತದೆ. 1831 ರ ಜನವರಿ 09 ರಂದು ಫಾತೀಮಾ ಶೇಕ್ ಪುಣೆಯಲ್ಲಿ ಜನಿಸುತ್ತಾರೆ. ಅಣ್ಣ ಉಸ್ಮಾನ್ ಶೇಕ್ ಜತೆ ಪುಣೆಯ ಭಿಡೆವಾಡೆಯಲ್ಲಿ ಬೆಳೆಯುತ್ತಾರೆ. ಉಸ್ಮಾನ್ ತಂಗಿಗೆ ಉರ್ದು ಶಿಕ್ಷಣ ಕೊಡಿಸುತ್ತಾರೆ. ಮುಸ್ಲೀಮರ ವಿರೋಧದ ನಡುವೆಯೂ ಫಾತಿಮಾಗೆ ಮರಾಠಿ ಶಿಕ್ಷಣ ಕೊಡಿಸುತ್ತಾರೆ. ಹಾಗಾಗಿ ಭಾರತದ ಮೊದಲ ಮುಸ್ಲಿಂ ಮಹಿಳೆ.

ಮೊದಲ ಬಾರಿಗೆ ಫಾತೀಮ–ಸಾವಿತ್ರಿಬಾ ಫುಲೆ ಇರುವ ಒಂದು ಹಳೆಯ ಕಪ್ಪುಬಿಳುಪಿನ ಚಿತ್ರವನ್ನು ಲೋಖಂಡೆ ಎನ್ನುವ ಬ್ರಿಟಿಷ್ ಮಿಷನರಿ ತನ್ನ ಪುಸ್ತಕದಲ್ಲಿ ಪ್ರಕಟಿಸ್ತಾನೆ. 1924 ರಲ್ಲಿ ಆರ್. ಎನ್.ಲಾಡ್ ಎನ್ನುವವರು ಸಂಪಾದಕರಾಗಿ ಪ್ರಕಟಿಸುತ್ತಿದ್ದ "ಮಜೂರ್" ಎನ್ನುವ ಪತ್ರಿಕೆಯಲ್ಲಿ ಪ್ರಕಟಿಸಿರ್ತಾರೆ. ಮುಂದೆ ಈ ಫೋಟೋವನ್ನು ಡಾ.ಎಂ.ಜಿ.ಮಾಲಿ ಅವರ ‘ಸಾವಿತ್ರಿಬಾ ಫುಲೆ ಸಮಗ್ರ ವಾಙ್ಮಯ’ ಎನ್ನುವ ಕೃತಿಯಲ್ಲಿ ಪ್ರಕಟಿಸುತ್ತಾರೆ. ಇದರ ರೆಫರೆನ್ಸ್ ನಿಂದ 2020 ರಲ್ಲಿ ಬಿಬಿಸಿಯ ಹಿಂದಿ ಚಾನಲ್ ನಲ್ಲಿ ಪತ್ರಕರ್ತ ನಾಜಿರುದ್ದೀನ್ ಅವರು "ಫಾತೀಮಾ ಶೇಕ್–ಸಾವಿತ್ರಿಬಾಯಿ ಕೆ ಸಾತ್ ವಂಚಿತೋಂಕೋ ಶಿಕ್ಷಿತ್ ಕರ್ನೆ ವಾಲಿ ಮಹಿಳಾ” ಎಂಬ ಕಾರ್ಯಕ್ರಮ ಪ್ರಸಾರ ಮಾಡಿ ಈ ಫೋಟೋದ ಚಾರಿತ್ರಿಕತೆ ಕುರಿತು ಚರ್ಚಿಸುತ್ತಾರೆ. ಆಗ ಈ ಫೋಟೋ ಹೆಚ್ಚು ಜನಪ್ರಿಯವಾಗುತ್ತದೆ.

ಸಾವಿತ್ರಿಬಾಯಿ ಶಾಲೆಗಳಲ್ಲಿ ಕಲಿಸುತ್ತಿದ್ದರೆ ಫಾತೀಮಾ ಮನೆ ಮನೆಗೆ ತೆರಳಿ ಶಿಕ್ಷಣದ ಮಹತ್ವವನ್ನು ತಿಳಿಸಿ ಮಕ್ಕಳನ್ನು ಶಾಲೆಗೆ ಕರೆತರುತ್ತಾರೆ. ಮುಸ್ಲಿಂ ಸಮುದಾಯದ ಬಾಲಕಿಯರನ್ನು ಶಾಲೆಗೆ ಪ್ರೇರೇಪಿಸಿದ್ದಕ್ಕೆ ಮುಸ್ಲೀಂ ಗಂಡಸರಿಂದ ಕಷ್ಟಗಳನ್ನು ಎದುರಿಸುತ್ತಾರೆ. ಮುಂದೆ ಮಹಿಳೆಯರಿಗಾಗಿ ಫುಲೆ ದಂಪತಿಗಳು ಆರಂಭಿಸಿದ ಹದಿನೆಂಟು ಶಾಲೆಗಳ ವ್ಯವಹಾರವನ್ನು ನಿರ್ವಹಿಸುತ್ತಾರೆ.

ಸೈಯದ್ ನಾಜೀರ್ ಅಹಮದ್ ಅವರ 'ಫಾತೀಮಾ ಶೇಕ್’ ತೆಲುಗು ಕೃತಿಯಲ್ಲಿ ಇದನ್ನು ಚರ್ಚಿಸಿದ್ದಾರೆ. ಕಾ.ಹು. ಚಾನ್ ಪಾಶ ಈ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಆಸಕ್ತರು ಗಮನಿಸಿ.

ದಲಿತ–ದಮನಿತ–ಅಲ್ಪಸಂಖ್ಯಾತ ಮುಸ್ಲಿಂ ಮಹಿಳೆಯರಿಗೆ ಮೊದಲಬಾರಿಗೆ ಸಾವಿತ್ರಿಬಾ ಫುಲೆ ಅವರ ಜತೆಗೆ ಶಿಕ್ಷಕಿಯಾಗಿ ಶಿಕ್ಷಣ ಕೊಟ್ಟ ಫಾತೀಮಾ ಚರಿತ್ರೆ ಮರೆಯಬಾರದ ಒಬ್ಬ ಅಪ್ರತಿಮ ಮಹಿಳೆ. ಹಾಗಾಗಿ ಭಾರತದ ಚರಿತ್ರೆಯಲ್ಲಿ ಮರೆಯಬಾರದ ಫಾತೀಮಾ ಶೇಕ್ ಅವರನ್ನು ಇನ್ನಾದರೂ ನೆನೆಯೋಣ.

ಅಮೇರಿಕನ್ ಮಿಷನರಿ ಸಿಂಥಿಯಾ ಫರಾರ್ ನಡೆಸುತ್ತಿದ್ದ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಸಾವಿತ್ರಿಬಾಯಿ ಮತ್ತು ಫಾತೀಮಾ ತರಬೇತಿ ಪಡೆಯುತ್ತಾರೆ. ಸಾವಿತ್ರಿಬಾಯಿ ಶಾಲೆಗಳಲ್ಲಿ ಕಲಿಸುತ್ತಿದ್ದರೆ ಫಾತೀಮಾ ಮನೆ ಮನೆಗೆ ತೆರಳಿ ಶಿಕ್ಷಣದ ಮಹತ್ವವನ್ನು ತಿಳಿಸಿ ಮಕ್ಕಳನ್ನು ಶಾಲೆಗೆ ಕರೆತರುತ್ತಾರೆ. ಮುಸ್ಲಿಂ ಸಮುದಾಯದ ಬಾಲಕಿಯರನ್ನು ಶಾಲೆಗೆ ಪ್ರೇರೇಪಿಸಿದ್ದಕ್ಕೆ ಮುಸ್ಲೀಂ ಗಂಡಸರಿಂದ ಕಷ್ಟಗಳನ್ನು ಎದುರಿಸುತ್ತಾರೆ. ಮುಂದೆ ಮಹಿಳೆಯರಿಗಾಗಿ ಫುಲೆ ದಂಪತಿಗಳು ಆರಂಭಿಸಿದ ಹದಿನೆಂಟು ಶಾಲೆಗಳ ವ್ಯವಹಾರವನ್ನು ನಿರ್ವಹಿಸುತ್ತಾರೆ. ಮುಂಬೈನಲ್ಲಿ ಕ್ರಿ.ಶ.1851 ರಲ್ಲಿ ಸ್ವತಃ ಹುಡುಗಿಯರಿಗಾಗಿ ಎರಡು ಶಾಲೆಗಳನ್ನು ತೆರೆಯುತ್ತಾರೆ. ಫುಲೆ ದಂಪತಿಗಳಂತೆ ಫಾತೀಮಾ ಸಾಹಿತ್ಯ ರಚಿಸದಿದ್ದ ಕಾರಣ, ಬಹುಕಾಲ ತೆರೆಮರೆಯಲ್ಲೆ ಉಳಿದರು.


ಅಂಬೇಡ್ಕರ್ 1946 ರಲ್ಲಿ ‘ಶೂದ್ರರು ಯಾರಾಗಿದ್ದರು?’ ಕೃತಿಯನ್ನು ಜೋತಿಬಾ ಫುಲೆ ಅವರಿಗೆ ಅರ್ಪಿಸಿ ಅವರು ನನ್ನ ಗುರು ಎನ್ನುತ್ತಾರೆ. ಹೀಗಾಗಿ ಅಂಬೇಡ್ಕರ್ ಕುರಿತ ಅಧ್ಯಯನದ ಜತೆಜತೆಗೆ ದಲಿತ–ಬಹುಜನ ಪಕ್ಷವು ಜೋತಿಬಾ ಮತ್ತು ಸಾವಿತ್ರಿಬಾಯಿ ಅವರನ್ನು ಮುನ್ನಲೆಗೆ ತಂದಿತು. ಭಾರತದಲ್ಲಿ ಮುಸ್ಲಿಂ ಚಿಂತಕರು ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದ ಸ್ಥಾಪನೆಗೆ ಕಾರಣರಾದ ಸರ್ ಸೈಯದ್ ಅಹ್ಮದ್ ಖಾನ್ ಮೂಲಕ ಆಧುನಿಕ ಭಾರತದ ಮುಸ್ಲಿಂ ಶಿಕ್ಷಣವನ್ನು ಗುರುತಿಸುತ್ತಾರೆ. ವಿಪರ್ಯಾಸವೆಂದರೆ, ಕ್ರಿ.ಶ.1848 ರಲ್ಲಿಯೇ ಶಿಕ್ಷಕಿಯಾಗಿ ಅಕ್ಷರದ ಬೆಳಕಿಂಡಿ ತೆರೆದ ಫಾತೀಮಾ ಶೇಕ್ ಬಗ್ಗೆ ಮುಸ್ಲಿಂ ಚಿಂತಕರು ಚರಿತ್ರೆಯಲ್ಲಿ ಗುರುತಿಸುವುದಿಲ್ಲ.


2014 ರಲ್ಲಿ, ಸರ್ ಸೈಯದ್ ಅಹ್ಮದ್ ಖಾನ್, ಜಾಕಿರ್ ಹುಸೇನ್, ಅಬುಲ್ ಕಲಾಂ ಆಜಾದ್ ಅವರಂತಹ ಬಾಲ ಭಾರತಿ ಮಹಾರಾಷ್ಟ್ರ ಸ್ಟೇಟ್ ಬ್ಯೂರೋದ ಶಾಲಾ ಉರ್ದು ಪಠ್ಯಪುಸ್ತಕಗಳಲ್ಲಿ ಫಾತಿಮಾ ಶೇಖ್ ಅವರ ಸಂಕ್ಷಿಪ್ತ ಪ್ರೊಫೈಲ್ ಅನ್ನು ಸೇರಿಸಲಾಗಿದೆ. ಆಗ ಮರಾಠಾ ಸಮುದಾಯದ ಕೆಲವರು ಇದನ್ನು ವಿರೋಧಿಸಿದ್ದರು. ಮುಂದುವರಿದು 2022 ರಲ್ಲಿ ಆಂಧ್ರದ 08 ನೇ ತರಗತಿಯ ಪಠ್ಯದಲ್ಲಿಯೂ ಸೇರಿಸಲಾಗಿದೆ. 2022 ರಲ್ಲಿ ಫಾತಿಮಾಳ 191 ನೇ ಜನ್ಮದಿನಾಚರಣೆಗೆ ಗೂಗಲ್ ಡೂಡಲ್ ಮೂಲಕ ಗೌರವಿಸಿ ಗಮನಸೆಳೆಯಿತು.

ದಲಿತ–ದಮನಿತ–ಅಲ್ಪಸಂಖ್ಯಾತ ಮುಸ್ಲಿಂ ಮಹಿಳೆಯರಿಗೆ ಮೊದಲಬಾರಿಗೆ ಸಾವಿತ್ರಿಬಾ ಫುಲೆ ಅವರ ಜತೆಗೆ ಶಿಕ್ಷಕಿಯಾಗಿ ಶಿಕ್ಷಣ ಕೊಟ್ಟ ಫಾತೀಮಾ ಚರಿತ್ರೆ ಮರೆಯಬಾರದ ಒಬ್ಬ ಅಪ್ರತಿಮ ಮಹಿಳೆ. ಹಾಗಾಗಿ ಭಾರತದ ಚರಿತ್ರೆಯಲ್ಲಿ ಮರೆಯಬಾರದ ಫಾತೀಮಾ ಶೇಕ್ ಅವರನ್ನು ಇನ್ನಾದರೂ ನೆನೆಯೋಣ. ●

ತಾಯಿ–ಮಕ್ಕಳ ಆರೋಗ್ಯ ಸಂಬಂಧಿ ಜಾಹಿರಾತುಗಳು ಸುಳ್ಳು ಪ್ರಚಾರಗಳು ಮತ್ತು ವೈಜ್ಞಾನಿಕ ಸತ್ಯಗಳು......

ಪುಟ 2 ರಿಂದ





ಮತ್ತು ಬಿಡುಗಡೆಯ ಮೇಲೆ ದುಷ್ಪರಿಣಾಮ ಆಗುತ್ತದೆ. ಇದರಿಂದ ತಾಯಿ ಮತ್ತು ಮಗು ಇಬ್ಬರೂ ತೊಂದರೆ ಎದುರಿಸಬೇಕಾಗಿ ಬರುತ್ತದೆ. ಹೆಣ್ಣು ಮಗುವನ್ನು ಹೆತ್ತಳು ಎಂಬ ಕಾರಣಕ್ಕಾಗಿ ಅಥವಾ ಯಾವುದೇ ಕಾರಣಕ್ಕಾಗಲಿ ತಾಯಿಯು ಖಿನ್ನತೆಗೆ ಗುರಿಯಾಗುವಂತಹ ವರ್ತನೆಯನ್ನು ಕುಟುಂಬದವರು ಯಾರೂ ತೋರಬಾರದು. ಸಂತೋಷದಿಂದ ಇರುವಂತೆ ಪ್ರೀತಿ ಕಾಳಜಿಯಿಂದ ಆರೈಕೆ ಮಾಡಬೇಕು.

ಪ್ರಶ್ನೆ: ‘ಹಾರ್ಲಿಕ್ಸ್’, ‘ಬೂಸ್ಟ್’ನಂತಹ ಪೇಯಗಳನ್ನು ಕುಡಿದು ಮಕ್ಕಳು ಪರೀಕ್ಷೆ ಭಯವನ್ನು ಮೀರಲು ಸಾಧ್ಯವೇ? ಇಂತಹ ಜಾಹಿರಾತುಗಳು ದೂರದರ್ಶನ ವಾಹಿನಿಗಳಲ್ಲಿ ಪದೇ ಪದೇ ಪ್ರಸಾರವಾಗುತ್ತಿರುತ್ತವೆ.

ಡಾ.ಎ.ಸಾವಿತ್ರಿ: ಮಕ್ಕಳು ಪರೀಕ್ಷೆಗೆ ಹೆದರುವುದು ಅಥವಾ ಹೆದರದಿರುವುದು ನಾವು ಮಕ್ಕಳನ್ನು ಹೇಗೆ ಬೆಳೆಸುತ್ತವೆ ಮತ್ತು ಸನ್ನಿವೇಶವನ್ನು ಎದುರಿಸುವುದನ್ನು ಹೇಗೆ ಕಲಿಸುತ್ತೇವೆ ಎಂಬುದರ ಮೇಲೆ ಅವಲಂಬಿಸಿದೆ. ಪರೀಕ್ಷೆ ಭಯ ನಿವಾರಣೆಯಾಗಬೇಕು ಎಂದರೆ ಮುಖ್ಯವಾಗಿ ಪರೀಕ್ಷೆಗೆ ಮುಂಚಿನಿಂದಲೇ ಸಿದ್ಧತೆ ಮಾಡಿಕೊಂಡಿರಬೇಕು. ಪರೀಕ್ಷೆ ಭಯ ಇರುವ ಮಕ್ಕಳಿಗೆ ಮಾನಸಿಕ ಆಪ್ತ ಸಮಾಲೋಚನೆ (Psychological Councling) ಮಾಡುವ ಮೂಲಕ ಪರೀಕ್ಷಾ ಭಯವನ್ನು ಕಡಿಮೆ ಮಾಡಬಹುದೇ ಹೊರತು ಯಾವುದೇ ಪಾನೀಯ ಅಥವಾ ಔಷಧಿಯಿಂದ ಪರೀಕ್ಷಾ ಭಯ ಕಡಿಮೆ ಮಾಡುವುದು ಸಾಧ್ಯವಿಲ್ಲ.

ಮಕ್ಕಳಲ್ಲಿ ಪರೀಕ್ಷಾ ಭಯ ಏಕೆ ➚

ಹುದ್ದೆಗೇ ನಾಲಾಯಕ್ ಅಸ್ಸಾಂ ಸಿಎಂ

ಪ್ರಕಾಶ್ ಕಾರತ್

ಕೆಲವು ಸಮುದಾಯಗಳ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆ ಮತ್ತು ಕೋಮುವಾದಿ ಹಾಗೂ ಜನಾಂಗವಾದಿ ನೆಲೆಯಲ್ಲಿ ಜನರನ್ನು ವಿಭಜಿಸಲು ಕೆಲವು ಘಟನೆಗಳನ್ನು ಬಳಸಿಕೊಳ್ಳಲಾಗುತ್ತಿರುವುದರಿಂದ ಅಸ್ಸಾಂನಲ್ಲಿ ಪರಿಸ್ಥಿತಿ ಕ್ರಮೇಣ ಬಿಗಡಾಯಿಸುತ್ತಿದೆ. ಮುಖ್ಯಮಂತ್ರಿ ಹಿಮಂತ ಬಿಶ್ವ ಶರ್ಮಾ ಮತ್ತು ಬಿಜೆಪಿ ನೇತೃತ್ವದ ಸರಕಾರ, ಪ್ರಸ್ತುತ ಸನ್ನಿವೇಶಕ್ಕೆ ಸಂಪೂರ್ಣ ಹೊಣೆಗಾರರು.

ಮುಸ್ಲಿಂ ನಿಂದನೆಯ ಪ್ರಚಾರ ಮತ್ತು 'ದೇಶೀಯರು ವರ್ಸಸ್ ಹೊರಗಿನವರು' ಎಂಬ ವಿಭಜನಕಾರಿ ಮಾತಿನ ಭರದಲ್ಲಿ ಹಿಮಂತ ಬಿಶ್ವ ಶರ್ಮಾ ತನ್ನ ಎಲ್ಲಾ ಮಿತಿಗಳನ್ನು ಮೀರಿದ್ದಾರೆ. 'ಹೊರಗಿನವರು' ಎಂದು ತಾನು ಕರೆಯುವ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಶರ್ಮಾ ಕುತ್ಸಿತ ಆರೋಪಗಳನ್ನು ಮಾಡದ ದಿನವೇ ಇಲ್ಲ.

ಅವರ ಉದ್ದೇಶಪೂರ್ವಕ ವಿಭಜನಕಾರಿ ರಾಜಕೀಯ ಮತ್ತು ದ್ವೇಷದ ಬೆಂಕಿಯುಗುಳುವ ಭಾಷಣಗಳು ಅಲ್ಪಸಂಖ್ಯಾತರನ್ನು ಟಾರ್ಗೆಟ್ ಮಾಡಿ ಹಿಂಸಾಚಾರ ನಡೆಸುವ ವಾತಾವರಣ ಸೃಷ್ಟಿಸಲು ಜನರ ಕೆಲವು ವಿಭಾಗಗಳನ್ನು ಪ್ರಚೋದಿಸಿವೆ. ಲೈಂಗಿಕ ದೌರ್ಜನ್ಯದ ಎರಡು ಪ್ರಕರಣಗಳನ್ನು ನಿಭಾಯಿಸಿದ ರೀತಿ ಇದಕ್ಕೆ ಸಾಕ್ಷಿಯಾಗಿದೆ. ಶಿವಸಾಗರ ಪಟ್ಟಣದಲ್ಲಿ ಮಾರ್ವಾಡಿ ವರ್ತಕ ಸಮುದಾಯದ ಇಬ್ಬರು ವ್ಯಕ್ತಿಗಳು 17 ವರ್ಷದ ಬಾಲಕಿ ಮೇಲೆ ನಡೆಸಿದ ದೌರ್ಜನ್ಯವು ಕೆಲವು ನಿರ್ದಿಷ್ಟ ಸಂಘಟನೆಗಳು 'ಹೊರಗಿನವರ' ವಿರುದ್ಧ ಬೆದರಿಕೆ ಹಾಕುವಂತೆ ಮಾಡಿವೆ. ಪ್ರಕರಣದಲ್ಲಿ ಒಳಗೊಂಡಿರುವ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸುವ ಬದಲು, ಇಡೀ ಮಾರ್ವಾಡಿ ಸಮುದಾಯವನ್ನು ಈ ಅಪರಾಧಕ್ಕಾಗಿ ದೂರಲಾಗಿದೆ. ಇದು ಮೇಲ್ (ಅಪ್ಪರ್) ಅಸ್ಸಾಂನಲ್ಲಿ ಅಸ್ಸಾಮೇತರ ವರ್ತಕರ ವಿರುದ್ಧ ದೊಡ್ಡ ಪ್ರತಿಭಟನೆಯಾಗಿ ತಿರುಗಿದ್ದು ಮಾರ್ವಾಡಿ ಸಮುದಾಯದ ಪ್ರತಿನಿಧಿಗಳು ಶಿವಸಾಗರ ಪಟ್ಟಣದಲ್ಲಿ ರಾಜ್ಯದ ಒಬ್ಬ ಕ್ಯಾಬಿನೆಟ್ ಮಂತ್ರಿ ಮತ್ತು ಪೊಲೀಸ್ ಅಧೀಕ್ಷಕರ (ಎಸ್‌ಪಿ) ಸಮ್ಮುಖದಲ್ಲಿ ಮಂಡಿಯೂರಿ ಕ್ಷಮೆ ಕೋರುವಲ್ಲಿ ಪರ್ಯಾವಸಾನಗೊಂಡಿದೆ.

ನಾಗಾಂವ್ ಜಿಲ್ಲೆಯಲ್ಲಿ ಮುಸ್ಲಿಮರೆನ್ನಲಾದ ಮೂರು ಯುವಕರಿಂದ 14 ವರ್ಷದ ಬಾಲಕಿಯೊಬ್ಬಳ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣ ಹೆಚ್ಚು ಗಂಭೀರವಾದ ಇನ್ನೊಂದು ಘಟನೆಯಾಗಿದೆ. ಯುವಕರ ವಿರುದ್ಧದ ಆಕ್ರೋಶವನ್ನು 'ಮಿಯಾ'ಗಳೆಂದು ಅವಮಾನಕರವಾಗಿ ಬಣ್ಣಿಸುವ ಪೂರ್ವ ಬಂಗಾಳ ಮೂಲದ ಮುಸ್ಲಿಮರ ವಿರುದ್ಧ ತಿರುಗಿಸಲಾಗಿದೆ. ಆರ್‌ಎಸ್‌ಎಸ್ ಮತ್ತು ಬಿಜೆಪಿ ಬೆಂಬಲಿತ ಕೆಲವು ಸಂಘಟನೆಗಳು ಅಪ್ಪರ್–ಅಸ್ಸಾಂ 'ಮಿಯಾ'ಗಳಿಗೆ



ಬೆದರಿಕೆ ಹಾಕಿವೆ. 'ಮಿಯಾ' ಸಮುದಾಯದ ನಿರ್ಮಾಣ ಕಾರ್ಮಿಕರನ್ನು ನಿರ್ದಯವಾಗಿ ಹೊಡೆದ ಘಟನೆಯ ನಂತರ, ಬಂಗಾಳಿ ಮಾತನಾಡುವ ಸಾವಿರಾರು ಮುಸ್ಲಿಮರು ಅಪ್ಪರ್–ಅಸ್ಸಾಂ ಜಿಲ್ಲೆಗಳಿಂದ ಪಲಾಯನ ಮಾಡಿದ್ದಾರೆ.

ತಾನು ಒಂದು ವಿಭಾಗದ ಪರ ವಹಿಸಬಲ್ಲೆ ಎಂದು ವಿಧಾನಸಭೆಯಲ್ಲಿ ಹೇಳಿದ ಸಿಎಂ ಶರ್ಮಾ, 'ಮಿಯಾ' ಮುಸ್ಲಿಮರು 'ಅಸ್ಸಾಂನ ನಿಯಂತ್ರಣ ಪಡೆಯಲು ಬಿಡುವುದಿಲ್ಲ' ಎಂದೂ ಘೋಷಿಸಿದ್ದಾರೆ. ಎಲ್ಲಾ ರಂಗಗಳಲ್ಲಿ ತನ್ನ ಸರಕಾರದ ವೈಫಲ್ಯಗಳನ್ನು ಮುಚ್ಚಿಹಾಕುವ ಉದ್ದೇಶದಿಂದ ಶರ್ಮಾ, ಪೂರ್ಣ ಪ್ರಮಾಣದಲ್ಲಿ ಮುಸ್ಲಿಂ–ವಿರೋಧಿ ಪ್ರಚಾರದಲ್ಲಿ ತೊಡಗಿದ್ದಾರೆ. ಭಯಾನಕ ರೇಪ್ ಮತ್ತು ಹಿಂಸಾಚಾರದ ಘಟನೆಗಳು ನಡೆಯುತ್ತಿದ್ದು ಮಹಿಳೆಯರನ್ನು ರಕ್ಷಿಸಲು ರಾಜ್ಯ ಸರಕಾರ ದಯನೀಯವಾಗಿ ವಿಫಲವಾಗಿದೆ. ಆರು ಹಿಂದುಳಿದ ಸಮುದಾಯಗಳಿಗೆ ಪರಿಶಿಷ್ಟ ಪಂಗಡ (ಎಸ್‌ಟಿ) ಸ್ಥಾನಮಾನ ನೀಡಬೇಕೆಂಬ ಬೇಡಿಕೆ ಇನ್ನೂ ಬಗೆಹರಿಯದೇ ಉಳಿದಿದೆ. ಭೂಮಿಯ ಸಂರಕ್ಷಣೆ ಮತ್ತು 1971ರ ಮಾರ್ಚ್‌ನಿಂದ ದಶಕಗಳ ಕಾಲದಿಂದ ಅಸ್ಸಾಂನಲ್ಲಿ ನೆಲೆಸಿರುವ ಭೂರಹಿತ ಜನರಿಗೆ ಭೂಮಿ ಹಂಚಿಕೆ ಮಾಡಬೇಕೆಂಬ ಬೇಡಿಕೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಗಂಭೀರವಾದ ಪ್ರವಾಹ ಮತ್ತು ಸವಕಳಿ ಸಮಸ್ಯೆಗಳನ್ನು ನಿಭಾಯಿಸಲು ಸರಕಾರ ಏನನ್ನೂ ಮಾಡಿಲ್ಲ. ರಾಜ್ಯದಲ್ಲಿ ನಿರುದ್ಯೋಗಿಗಳ ಸಂಖ್ಯೆ ಒಂದೇ ಸಮನೆ ಏರುತ್ತಿದೆ.

ಈ ಹಿನ್ನೆಲೆಯಲ್ಲಿ ಬಿಜೆಪಿ ಸರಕಾರ ಮತ್ತು ಶರ್ಮಾ ಲಜ್ಜೆಗೇಡಿ ಕೋಮುವಾದಿ ಪ್ರಚಾರದಲ್ಲಿ ತೊಡಗಿದ್ದಾರೆ. ಮಹಿಳೆಯರ ಮೇಲಿನ ದೌರ್ಜನ್ಯಗಳ ಸಹಿತ ಅಪರಾಧಗಳು ಹೆಚ್ಚುತ್ತಿದ್ದು ಎಲ್ಲಾ ಸಮುದಾಯಗಳ ಜನರಿಂದಲೂ ಕ್ರೈಂ ನಡೆಯುತ್ತಿದ್ದರೂ ಮುಸ್ಲಿಮರನ್ನು ಮಾತ್ರವೇ ಕ್ರಿಮಿನಲ್‌ಗಳೆಂದು ಜರೆಯಲಾಗುತ್ತಿದೆ. ರಾಜಧಾನಿ ಗುವಾಹಟಿ ನಗರದ ಕೃತಕ ಪ್ರವಾಹದ ಸಮಸ್ಯೆಗಳನ್ನು ಮುಚ್ಚಿ ಹಾಕಲು ಹಿಮಂತ ಶರ್ಮಾ, 'ಪ್ರವಾಹ ಜಿಹಾದ್' (ಫ್ಲಡ್ ಜಿಹಾದ್) ಎಂಬ ಪದವನ್ನೂ ಹುಟ್ಟು ಹಾಕಿದ್ದಾರೆ.

ಲಜ್ಜೆಗೆಟ್ಟ ದಾಖಲೆ!

ಮುಖ್ಯಮಂತ್ರಿಯಾಗಿ ಸಾಂವಿಧಾನಿಕ ಹುದ್ದೆಯನ್ನು ಹೊಂದಿದ್ದರೂ ಹಿಮಂತ ಶರ್ಮಾ ಎಲ್ಲಾ ಸಾಂವಿಧಾನಿಕ ನಿಯಮಗಳನ್ನು ಉಲ್ಲಂಘಿಸಿದ್ದಾರೆ.

'ಸಂವಿಧಾನ ಮತ್ತು ಕಾನೂನಿಗೆ ಅನುಗುಣವಾಗಿ, ಯಾವುದೇ ಒಲವು, ಅನುರಾಗದ ಭಯ ಅಥವಾ ದುರುದ್ದೇಶವಿಲ್ಲದೆ ಎಲ್ಲಾ ರೀತಿಯ ಜನರಿಗೆ ನಾನು ಒಳಿತು ಮಾಡುತ್ತೇನೆ' ಎಂದು ಮುಖ್ಯಮಂತ್ರಿಯಾಗಿ ಸ್ವೀಕರಿಸಿದ ಶಪಥವನ್ನು ಅವರು ನಾಚಿಕೆಯಿಲ್ಲದೆ ಉಲ್ಲಂಘಿಸಿದ್ದಾರೆ. ವಿಧಾನಸಭೆಯ ಒಳಗಡೆಯೂ ಹೊರಗಡೆಯೂ ಮುಖ್ಯಮಂತ್ರಿ ಆಡಿರುವ ಮಾತುಗಳು ಅಧಿಕಾರದ ಪ್ರಮಾಣ ವಚನದ ಸ್ಪಷ್ಟ ಉಲ್ಲಂಘನೆಯಾಗಿದೆ. ರಾಜಕೀಯ ಮತ್ತು ಸಾಂವಿಧಾನಿಕ ನೈತಿಕತೆಯನ್ನು ತುಳಿದು ಹಾಕುವ ಮೂಲಕ ಅವರು ಒಂದು ಅವಮಾನಕರ ದಾಖಲೆಯನ್ನು ನಿರ್ಮಿಸಿದ್ದಾರೆ.

ಹಾಗಾಗಿಯೇ, 18 ಪ್ರತಿಪಕ್ಷಗಳು ಆಗಸ್ಟ್ 29ರಂದು ಭಾರತದ ರಾಷ್ಟ್ರಪತಿಯವರಿಗೆ ಅಸ್ಸಾಂ ರಾಜ್ಯಪಾಲರ ಕಚೇರಿ ಮೂಲಕ ಒಂದು ಮನವಿಯನ್ನು ಅರ್ಪಿಸಿ, ಕೋಮು ದ್ವೇಷಕ್ಕೆ ಪ್ರಚೋದನೆ ಹಾಗೂ ಸಾಂವಿಧಾನಿಕ ನಿಯಮಗಳ ಉಲ್ಲಂಘನೆಗಾಗಿ ಮುಖ್ಯಮಂತ್ರಿ ಹಿಮಂತ ಬಿಶ್ವ ಶರ್ಮಾರ ವಿರುದ್ಧ ಕ್ರಮಕ್ಕೆ ಆಗ್ರಹಿಸಿವೆ.

ಸಂವಿಧಾನ ಮತ್ತು ಅಧಿಕಾರದ ಪ್ರಮಾಣ ವಚನದ ನಗ್ನ ಉಲ್ಲಂಘನೆಗಾಗಿ ಯಾವುದಾದರೂ ಮುಖ್ಯಮಂತ್ರಿ ವಿರುದ್ಧ ಕ್ರಮ ಕೈಗೊಳ್ಳಬೇಕಿದ್ದರೆ ಖಂಡಿತವಾಗಿಯೂ ಇದೊಂದು ಅರ್ಹ ಪ್ರಕರಣವಾಗಿದೆ.

ಅನು: ವಿಶ್ವ

ಉಂಟಾಗುತ್ತಿದೆ ಎಂಬುದರ ಕಾರಣವನ್ನೂ ನಾವು ಕಂಡುಕೊಳ್ಳಬೇಕು. ಇದು ಮುಖ್ಯವಾಗಿ ಪೋಷಕರಿಂದ ಆಗುತ್ತಿದೆ. ಟ್ಯೂಷನ್, ಹೋಂ ವರ್ಕ್, ಕೋಚಿಂಗ್ ಇತ್ಯಾದಿಗಳ ಹೆಸರಿನಲ್ಲಿ ಮಕ್ಕಳ ಮೇಲೆ ಪೋಷಕರು ಒತ್ತಡ ಹಾಕುತ್ತಿದ್ದಾರೆ. ಎಷ್ಟೆಲ್ಲಾ ಸವಲತ್ತುಗಳನ್ನು ಒದಗಿಸಿ ಕೊಟ್ಟಿದ್ದೇವೆ ಎಂದು ಹೇಳಿ ಅಂಕ ಗಳಿಕೆಗೆ ಗುರಿ ನಿಗದಿ ಮಾಡುತ್ತಾರೆ. ಮಕ್ಕಳು ವಿಷಯವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳುವಂತೆ, ಮಕ್ಕಳಿಗೆ ಓದಲು ಸ್ವಯಂ ಆಸಕ್ತಿ ಮೂಡುವಂತೆ ಮಾಡಿ ಅವರನ್ನು ಮುಕ್ತವಾಗಿ ಬಿಡುವ ಬದಲಿಗೆ ಒತ್ತಡಗಳನ್ನು ಹೇರಲಾಗುತ್ತಿದೆ. ಶಾಲೆಗಳಲ್ಲಿಯೂ ಬಹುತೇಕ ಪರೀಕ್ಷೆಗಾಗಿಯೇ ಎಲ್ಲ ತಯಾರಿ ಎಂಬಂತಹ ರೀತಿಯಲ್ಲಿ ಪಾಠಗಳ ಬೋಧನೆ ನಡೆಯುತ್ತದೆ. ಮಕ್ಕಳು ಪ್ರತಿಯೊಂದನ್ನೂ ಕುತೂಹಲದಿಂದ ಕಲಿಯಬೇಕು. ಪ್ರಾಯೋಗಿಕವಾಗಿ ಅನುಭವಿಸಬೇಕು. ಹಾಗೇ ಕಲಿತರೆ ಕಲಿತದ್ದು ಚೆನ್ನಾಗಿ ನೆನಪಿನಲ್ಲಿರುತ್ತದೆ. ಪ್ರತಿಯೊಬ್ಬ ಮಗುವಿಗೂ ಒಂದಲ್ಲ ಒಂದು ಪ್ರತಿಭೆ ಇದ್ದೇ ಇರುತ್ತದೆ. ಅದನ್ನು ಗುರುತಿಸಿ ಪ್ರೋತ್ಸಾಹಿಸಬೇಕು. ನಮ್ಮ ಶಿಕ್ಷಣ ಪದ್ಧತಿ ಸರಿಯಿಲ್ಲ. ನಮ್ಮ ಶಿಕ್ಷಣ ಪದ್ಧತಿಯನ್ನು ಸುಧಾರಿಸಬೇಕು. ಮಕ್ಕಳಲ್ಲಿ ಪರೀಕ್ಷಾ ಭಯದ ನಿವಾರಣೆಗೆ ಬೂಸ್ಟ್, ಹಾರ್ಲಿಕ್ಸ್‌ಗಳು ಬೇಕಿಲ್ಲ.

ಪ್ರಶ್ನೆ: ತಾವು ಸದೃಢವಾಗಿ ಬೆಳೆಯಬೇಕು, ಎತ್ತರಕ್ಕೆ ಬೆಳೆಯಬೇಕು ಎಂದು ಮಕ್ಕಳೂ ಬಯಸುತ್ತಾರೆ. ಪೋಷಕರೂ ಬಯಸುತ್ತಾರೆ. ಇದಕ್ಕೆ ಏನು ಮಾಡಬೇಕು.?

ಡಾ.ಎ.ಸಾವಿತ್ರಿ: ವ್ಯಕ್ತಿಯ ಎತ್ತರ ಮುಖ್ಯವಾಗಿ ನಿರ್ಧಾರವಾಗುವುದು ವಂಶವಾಹಿ(Genes)ಗಳಿಂದ. ಪೌಷ್ಟಿಕಾಂಶವೂ ಪರಿಣಾಮ ಬೀರುತ್ತದೆ. ಮೊದಲೇ ಹೇಳಿದಂತೆ ತಾಯಿಯ ಹೊಟ್ಟೆಯಿಂದಲೇ ಮಗು ಆರೋಗ್ಯವಾಗಿ ಹುಟ್ಟಿದರೆ ಮಗುವು ಸದೃಢವಾಗಿ ಬೆಳೆಯಲು ಸಾಧ್ಯ. ಇದಲ್ಲದೇ ಪುಷ್ಟಿಕರವಾದ ತಾಜಾ ಆಹಾರವನ್ನು ಸೇವಿಸಬೇಕು. ಸಿದ್ಧ ಆಹಾರ, ಬೇಕರಿ ಪದಾರ್ಥಗಳು, ಜಂಕ್ ಫುಡ್ ಅಲ್ಲ. ನಾವು ಸೇವಿಸುವ ಆಹಾರದಿಂದ ನಮ್ಮ ದೇಹಕ್ಕೆ ಶೇ. 60ರಷ್ಟು ಕಾರ್ಬೋಹೈಡ್ರೇಟ್ ದೊರಕಬೇಕು. ಶೇ. 20ರಷ್ಟು ಪ್ರೋಟೀನು ಮತ್ತು ಉಳಿದ ಶೇ. 20ರಷ್ಟು ಕೊಬ್ಬು ದೊರಕಬೇಕು.

ಮಕ್ಕಳು ಹದಿಹರೆಯಕ್ಕೆ ಕಾಲಿಟ್ಟಾಗ ದೈಹಿಕ ಬೆಳವಣಿಗೆ ತೀವ್ರವಾಗಿ ಆಗುತ್ತದೆ. ಮೆದುಳಿನಲ್ಲಿಯೂ ಬದಲಾವಣೆ ಆಗುತ್ತದೆ. ಗೋಧಿ, ಅಕ್ಕಿ, ರಾಗಿ, ಜೋಳ ಮುಂತಾದವುಗಳಲ್ಲಿ ಮುಖ್ಯವಾಗಿ ಕಾರ್ಬೋಹೈಡ್ರೇಟ್ ದೊರಕುತ್ತದೆ. ಮಕ್ಕಳಿಗೆ ಪ್ರೋಟೀನುಗಳನ್ನು ಕೊಡಬೇಕು.

ಸಸ್ಯಾಹಾರ ಮತ್ತು ಮಾಂಸಾಹಾರ ಎರಡೂ ಮೂಲಗಳಿಂದಲೂ ದೇಹಕ್ಕೆ ಅಗತ್ಯವಾದ ಪ್ರೋಟೀನುಗಳನ್ನು ಪಡೆದುಕೊಳ್ಳಬಹುದು. ಆದರೆ ಮಾಂಸಾಹಾರವನ್ನು ಮಕ್ಕಳು ಇಷ್ಟಪಟ್ಟು ತಿನ್ನುವುದರಿಂದ ಅಗತ್ಯ ಪ್ರೋಟೀನು ದೇಹಕ್ಕೆ ದೊರಕಲು ಅನುಕೂಲವಾಗುತ್ತದೆ. ಮೊಟ್ಟೆ ಹಾಲುಗಳನ್ನು ಕೊಡಬಹುದು. ಬೇಳೆಕಾಳುಗಳಿಂದಲೂ ಪ್ರೋಟೀನು ದೊರಕುತ್ತದೆ. ಆದರೆ, ಬೇಳೆಕಾಳು ಇತ್ಯಾದಿಗಳನ್ನು ಮಕ್ಕಳು ತಿನ್ನಬಹುದು, ಕೆಲವೊಮ್ಮೆ ಕಡಿಮೆ ತಿನ್ನಬಹುದು. ಬೇಳೆಕಾಳುಗಳನ್ನು ತಿನ್ನುವುದರಿಂದ ಕೆಲವೊಮ್ಮೆ ಹೊಟ್ಟೆ ಉಬ್ಬರ ಇತ್ಯಾದಿ ಸಮಸ್ಯೆಗಳು ಕಂಡುಬರಬಹುದು.

ಹೆಣ್ಣು ಮಕ್ಕಳಲ್ಲಿ 18 ವರ್ಷಕ್ಕೆ, ಗಂಡು ಮಕ್ಕಳಲ್ಲಿ 20 ವರ್ಷಕ್ಕೆ ದೇಹದ ಎತ್ತರದ ಬೆಳವಣಿಗೆ ನಿಲ್ಲುತ್ತದೆ. ಮಕ್ಕಳು ಎತ್ತರವಾಗಿ ಸದೃಢವಾಗಿ ಬೆಳೆಯುವುದರಲ್ಲಿ ಆಹಾರದ ಜೊತೆಗೆ ವ್ಯಾಯಾಮ ಸಹ ಅಷ್ಟೇ ಮುಖ್ಯ. ಪ್ರತಿಯೊಬ್ಬರೂ ದಿನಕ್ಕೆ ಕನಿಷ್ಠ ಒಂದು ಗಂಟೆ ಆಟ ಆಡಬೇಕು. ಚೆನ್ನಾಗಿ ನೀರು ಕುಡಿಯಬೇಕು. ಬಿಸಿಲಿನಲ್ಲಿ, ಮುಖ್ಯವಾಗಿ ಬೆಳಗಿನ ಮತ್ತು ಸಂಜೆಯ ಬಿಸಿಲಿನಲ್ಲಿ ಆಟ ಆಡಬೇಕು. ಇದರಿಂದ ದೇಹಕ್ಕೆ ಅಗತ್ಯವಾದ 'ಡಿ' ವಿಟಮಿನ್ ದೊರಕುತ್ತದೆ. ದೇಹದ ಅಂಗಾಂಗಳಿಗೆ ರಕ್ತಪರಿಚಲನೆ ಚೆನ್ನಾಗಿ ಆಗಿ ಮಾಂಸಖಂಡಗಳು, ಮೂಳೆಗಳು ಬಲವಾಗುತ್ತವೆ.

ವಯಸ್ಕರಾದ ನಂತರವೂ ಮನುಷ್ಯರ ಮೂಳೆಗಳು ಬೆಳೆಯುತ್ತಿರುತ್ತವೆ. ಆದರೆ 35 ವರ್ಷಗಳ ನಂತರ ಮೂಳೆಗಳು ಬೆಳೆಯುವುದಿಲ್ಲ. ಮೂಳೆಗಳ ಬೆಳವಣಿಗೆಯ ಅವಧಿಯಲ್ಲಿ ಉತ್ತಮ ಖನಿಜಾಂಶಗಳು ಮೂಳೆಗೆ ಸೇರಿದರೆ ಮೂಳೆಗಳು ಸದೃಢವಾಗುತ್ತವೆ. ನಂತರದ ಮೂಳೆಗಳ ಸವೆತದ ಅವಧಿಯಲ್ಲಿಯೂ ಹೆಚ್ಚು ತೊಂದರೆಗಳು ಕಾಡುವುದಿಲ್ಲ.

ಫಿಜ್ಜಾ, ಬರ್ಗರ್, ಚಿಪ್ಸ್, ಕೋಕೋ ಕೋಲಾ ಮುಂತಾದ ಆಹಾರ ಸೇವನೆಯನ್ನು ತಪ್ಪಿಸಬೇಕು. ಇವುಗಳಲ್ಲಿ ರುಚಿ ಹೆಚ್ಚಿಸುವ ಸಲುವಾಗಿ ರುಚಿಕಾರಕ ರಾಸಾಯನಿಕಗಳನ್ನು ಸೇರಿಸಿರಲಾಗುತ್ತದೆ. ಚಿಪ್ಸ್‌ನಂತಹ ಪದಾರ್ಥಗಳಲ್ಲಿ ಉಪ್ಪಿನಂಶ ಹೆಚ್ಚಾಗಿರುತ್ತದೆ. ಇಂತಹ ಪದಾರ್ಥ, ಪಾನೀಯಗಳ ಸೇವನೆಯಿಂದ ದೇಹಕ್ಕೆ ಅಗತ್ಯಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಕೊಬ್ಬು ಸೇರಿಕೊಂಡು ಬೊಜ್ಜು ಬೆಳೆಯುತ್ತದೆ. ದೇಹದಲ್ಲಿ ಬೊಜ್ಜು ಬೆಳೆಯುವುದರಿಂದ ಸಣ್ಣ ವಯಸ್ಸಿಗೇ ರಕ್ತದೊತ್ತಡ, ಸಕ್ಕರೆ ಖಾಯಿಲೆ, ಹೃದಯದ ತೊಂದರೆಗಳು ಕಂಡು ಬರುತ್ತವೆ. ಕ್ಯಾನ್ಸರ್ ಕೂಡ ಉಂಟಾಗಬಹುದು. ಲೀವರ್(ಯಕೃತ್) ಅಂಗದಲ್ಲಿ ಕೊಬ್ಬು ಹೆಚ್ಚಾಗಿ ಸೇರಿಕೊಂಡು ಇತರ ಅಂಗಾಂಗಗಳಲ್ಲೂ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ಹದಿಹರೆಯದ ಹೆಣ್ಣುಮಕ್ಕಳಲ್ಲಿ ಹಾರ್ಮೋನಿನ ಏರುಪೇರು ಉಂಟಾಗಬಹುದು. ಮುಟ್ಟು ಏರುಪೇರಾಗಬಹುದು. ಬಂಜೆತನವೂ ಕಾಣಿಸಿಕೊಳ್ಳಬಹುದು.

......ಮುಂದುವರೆಯುವುದು

ಮತಾಂತರಗೊಂಡ ದಲಿತರಿಗೆ ಎಸ್.ಸಿ. ಸ್ಥಾನಮಾನ ಸಿಗುವುದೇ?

ಡಾ.ಎಸ್.ವೈ.ಗುರುಶಾಂತ್

ಕ್ರಿಶ್ಚಿಯನ್ ಮತ್ತು ಇಸ್ಲಾಂ ಮತಧರ್ಮಕ್ಕೆ ಮತಾಂತರಗೊಂಡಿರುವ ದಲಿತರಿಗೆ ಎಸ್.ಸಿ. ಸ್ಥಾನಮಾನ ಕೊಡಬೇಕೇ ಎನ್ನುವ ಹಲವು ದಶಕಗಳ ಪ್ರಶ್ನೆಯ ಸುತ್ತ ಅಧ್ಯಯನ ಮಾಡಿ ವರದಿ ನೀಡಲು ನೇಮಕಗೊಂಡಿರುವ ನ್ಯಾ. ಕೆ.ಜಿ.ಬಾಲಕೃಷ್ಣನ್ ಆಯೋಗ ರಾಜ್ಯಕ್ಕೂ ಬಂದು ಹೋಗಿದೆ. ಸುಪ್ರಿಂ ಕೋರ್ಟ್‌ನ ಕಡತಗಳಲ್ಲಿ ನೆನೆಗುದಿಗೆ ಬಿದ್ದಿರುವ ಈ ವಿಷಯದಲ್ಲಿ ಅದು ಕೊಡುವ ವರದಿ ಅತ್ಯಂತ ನಿರ್ಣಾಯಕ ಹೇಗೆ? ಓದಿ.

ಸಿಖ್ ಮತ್ತು ಬೌದ್ಧ ಧರ್ಮವನ್ನು ಹೊರತುಪಡಿಸಿ ಇತರ ಮತಧರ್ಮಗಳಿಗೆ ಮತಾಂತರಗೊಂಡ ದಲಿತರಿಗೆ ಪರಿಶಿಷ್ಟ ಜಾತಿ (ಎಸ್.ಸಿ) ಸ್ಥಾನಮಾನವನ್ನು ನೀಡಬೇಕೇ? ಮತ್ತು ದಲಿತ ಕ್ರಿಶ್ಚಿಯನ್ನರು ಮತ್ತು ದಲಿತ ಮುಸ್ಲಿಮರನ್ನು ಎಸ್.ಸಿ. ವರ್ಗಕ್ಕೆ ಸೇರಿಸುವುದರ ಸುತ್ತಲಿನ ಸಂಕೀರ್ಣತೆಗಳನ್ನು ಅನ್ವೇಷಿಸುವ ಉದ್ದೇಶವನ್ನು ಹೊಂದಿರುವ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್ ಆಯೋಗ ಕರ್ನಾಟಕಕ್ಕೆ ಭೇಟಿ ನೀಡಿದೆ. ಭಾರತದ ಒಕ್ಕೂಟ ಸರ್ಕಾರ ರಚಿಸಿರುವ ಈ ಆಯೋಗವು ಸಾರ್ವಜನಿಕರು ಮತ್ತು ಸಂಘ ಸಂಸ್ಥೆಗಳ ಅಭಿಪ್ರಾಯ ಅಹವಾಲುಗಳನ್ನು ಸ್ವೀಕರಿಸುತ್ತಿದೆ. ಸಿಖ್ ಮತ್ತು ಭೌದ್ಧ ಮತಧರ್ಮಕ್ಕೆ ಮತಾಂತರಗೊಂಡ ಪ.ಜಾತಿಗಳ ಜನರಿಗೆ ಎಸ್.ಸಿ.ಸ್ಥಾನಮಾನ ಅಥವಾ ಶಿಕ್ಷಣ, ಉದ್ಯೋಗದಲ್ಲಿ ಮೀಸಲಾತಿ ನೀಡಕೂಡದು ಎನ್ನುವ ಒತ್ತಾಯದ ಮನವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಲ್ಲಿಕೆಯಾಗಿವೆ ಎಂದು ಮಾಧ್ಯಮಗಳ ವರದಿ ಹೇಳುತ್ತಿವೆ. ಪ್ರಶ್ನೆ ಎಂದರೆ ಇಂತಹ ಮನವಿಗಳು ಬಹುತೇಕ ಸಲ್ಲಿಕೆಯಾಗಿರುವುದು ಸಂಘಪರಿವಾರದ ಅಂಗ ಸಂಸ್ಥೆ ಅಥವಾ ಅದಕ್ಕೆ ಸೇರಿದವರಿಂದ ಎನ್ನುವುದನ್ನು ಗಮನಿಸಬೇಕು.

ಬೇಡಿಕೆ

ಭಾರತೀಯ ಸಮಾಜ ವ್ಯವಸ್ಥೆಯ ವಾಸ್ತವಿಕತೆಗಳನ್ನು ಆಧರಿಸಿದ ಮೀಸಲಾತಿ ನೀತಿಯು ಕೇವಲ ಬಡತನದ ಸಂಬಂಧಿತವಾಗಿಲ್ಲ, ಅದರ ನೀತಿಗಳಿಂದ ಭಿನ್ನವಾಗಿದೆ. ಇದು ನಿರ್ದಿಷ್ಟವಾಗಿ ಜನಾಂಗ, ಬಣ್ಣ, ಲಿಂಗ, ಜಾತಿ ಅಥವಾ ಮತಧರ್ಮದ ಆಧಾರದ ಮೇಲೆ ತಾರತಮ್ಯವನ್ನು ಎದುರಿಸುವ ಗುಂಪುಗಳನ್ನು ಗುರಿಯಾಗಿಸುತ್ತದೆ. ಐತಿಹಾಸಿಕವಾಗಿ, ಹಿಂದೂ ಮತಧರ್ಮ ವ್ಯಾಪ್ತಿಯಲ್ಲಿರುವ ಪರಿಶಿಷ್ಟ ಜಾತಿ–ಎಸ್.ಸಿ. ಸಮುದಾಯಗಳು ಮೀಸಲಾತಿ ಪ್ರಯೋಜನಗಳನ್ನು ಪಡೆಯುತ್ತಿವೆ. ಕ್ರಿಶ್ಚಿಯನ್ ಮತ್ತು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ದಲಿತರಿಗೂ ಮೀಸಲಾತಿಯನ್ನು ಮುಂದುವರಿಸಬೇಕು ಎನ್ನುವ ಬೇಡಿಕೆ ಹಲವು ದಶಕಗಳ ಹಿಂದಿನಿಂದಲೇ ಮುನ್ನೆಲೆಗೆ ಬಂದಿದೆ.

ಹಲವು ಪ್ರಯತ್ನಗಳು–ಶಿಫಾರಸುಗಳು

1990 ರ ನಂತರ, ಈ ಉದ್ದೇಶಕ್ಕಾಗಿ ಹಲವಾರು ಖಾಸಗಿ ಸದಸ್ಯ ಮಸೂದೆಗಳನ್ನು ಸಂಸತ್ತಿನಲ್ಲಿ ತರಲಾಯಿತು. 1996 ರಲ್ಲಿ, ಸಂವಿಧಾನದ (ಪರಿಶಿಷ್ಟ ಜಾತಿಗಳು) ಆದೇಶಗಳ (ತಿದ್ದುಪಡಿ) ಮಸೂದೆಯನ್ನು ರಚಿಸಲಾಯಿತು, ಆದರೆ ಭಿನ್ನಾಭಿಪ್ರಾಯಗಳ ಹಿನ್ನೆಲೆಯಲ್ಲಿ, ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲಾಗಿಲ್ಲ. ಪ್ರಧಾನಿ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರವು ಎರಡು ಪ್ರಮುಖ ಸಮಿತಿಗಳನ್ನು ಸ್ಥಾಪಿಸಿತು. ಅಕ್ಟೋಬರ್ 2004 ರಲ್ಲಿ ರಂಗನಾಥ್ ಮಿಶ್ರಾ ಆಯೋಗ ಎಂದು ಜನಪ್ರಿಯವಾಗಿ ಕರೆಯಲ್ಪಡುವ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗ, ಇದು 2007 ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು, SC ಸ್ಥಾನಮಾನವನ್ನು 'ಧರ್ಮದಿಂದ ಸಂಪೂರ್ಣವಾಗಿ ಡಿ–ಲಿಂಕ್ ಮಾಡಬೇಕು ಮತ್ತು ಪರಿಶಿಷ್ಟ ಪಂಗಡಗಳಂತೆ ಪರಿಶಿಷ್ಟ ಜಾತಿಗಳನ್ನು ಸಂಪೂರ್ಣವಾಗಿ ಧರ್ಮ–ತಟಸ್ಥಗೊಳಿಸಬೇಕು'.

ಮಾರ್ಚ್ 2005 ರಲ್ಲಿ ಮುಸ್ಲಿಮರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಯನ್ನು ಅಧ್ಯಯನ ಮಾಡಲು ದೆಹಲಿ ಹೈಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿ ರಾಜಿಂದರ್ ಸಾಚಾರ್ ನೇತೃತ್ವದ ಏಳು ಸದಸ್ಯರ ಉನ್ನತ ಮಟ್ಟದ ಸಮಿತಿ. ದಲಿತ ಮುಸ್ಲಿಮರು ಮತ್ತು ದಲಿತ ಕ್ರಿಶ್ಚಿಯನ್ನರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯು ಮತಾಂತರದ ನಂತರ ಸುಧಾರಿಸಲಿಲ್ಲ ಎಂದು ನ್ಯಾ.ಸಾಚಾರ್ ಆಯೋಗದ ವರದಿ ಗಮನಿಸಿದೆ.

ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗ ಮತ್ತು ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗವು 2011 ರಲ್ಲಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಅಫಿಡವಿಟ್‌ಗಳಲ್ಲಿ ದಲಿತ ಮುಸ್ಲಿಮರು ಮತ್ತು ದಲಿತ ಕ್ರಿಶ್ಚಿಯನ್ನರಿಗೆ ಎಸ್.ಸಿ. ಸ್ಥಾನಮಾನವನ್ನು ನೀಡಲು ಶಿಫಾರಸು ಮಾಡಿತ್ತು.

1950 ರ ಸಂವಿಧಾನ (ಪರಿಶಿಷ್ಟ ಜಾತಿಗಳು) ಆದೇಶವನ್ನು ಜಾರಿಗೊಳಿಸಿದಾಗ, ಅದು ಆರಂಭದಲ್ಲಿ ಹಿಂದೂಗಳನ್ನು ಮಾತ್ರ ಪರಿಶಿಷ್ಟ ಜಾತಿಗಳು (SCs) ಎಂದು ಗುರುತಿಸಿತ್ತು. ಹಿಂದೂ ಸಮುದಾಯದೊಳಗಿನ ಅಸ್ಪೃಶ್ಯತೆಯಿಂದ ಉಂಟಾಗುವ ಸಾಮಾಜಿಕ ವಿಕಲಾಂಗತೆಗಳನ್ನು ಪರಿಹರಿಸುವುದು ಇದರ ಉದ್ದೇಶವಾಗಿತ್ತು. ನಂತರದ ತಿದ್ದುಪಡಿಗಳು ಸಿಖ್ ಧರ್ಮಕ್ಕೆ (1956 ರಲ್ಲಿ) ಮತ್ತು ಬೌದ್ಧ ಧರ್ಮಕ್ಕೆ (1990 ರಲ್ಲಿ) ಮತಾಂತರಗೊಂಡ ದಲಿತರನ್ನು ಸೇರಿಸಲು ಈ ಮಾನ್ಯತೆಯನ್ನು ವಿಸ್ತರಿಸಿತು. ಈ ತಿದ್ದುಪಡಿಗಳು ಕಾಕಾ ಕಾಲೇಲ್ಕರ್ ಆಯೋಗದ (1955) ಮತ್ತು ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ (1983) ಮೇಲಿನ 'ಉನ್ನತಾಧಿಕಾರ ತಂಡ'ದ (ಹೈ ಪವರ್ಡ್ ಪ್ಯಾನಲ್) ಶಿಫಾರಸುಗಳನ್ನು ಆಧರಿಸಿವೆ.

ಹೆಗಲೇರಿರುವ ಜಾತಿ ವ್ಯವಸ್ಥೆ

ಬದಲಾಗದ ಸ್ಥಿತಿ

ದಲಿತ ಕ್ರಿಶ್ಚಿಯನ್ನರು ಮತ್ತು ದಲಿತ ಮುಸ್ಲಿಮರ ಪರಿಸ್ಥಿತಿ ವಿಭಿನ್ನವಾಗಿದೆ. ಪರಿಶಿಷ್ಟ ಜಾತಿಗೆ ಐತಿಹಾಸಿಕ ಸಂಬಂಧವಿದ್ದರೂ ಅವರನ್ನು ಎಸ್.ಸಿ. ವರ್ಗಕ್ಕೆ ಸೇರಿಸಲಾಗಿಲ್ಲ. ಬ್ರಿಟೀಶ್ ವಸಾಹತುಶಾಹಿ ಸರ್ಕಾರ ಹೊರಡಿಸಿದ್ದ 1936 ರ ಇಂಪೀರಿಯಲ್ ಆದೇಶದಲ್ಲಿ ದಲಿತ ಕ್ರಿಶ್ಚಿಯನ್ನರನ್ನು ಹೊರಗಿಡಲಾಗಿತ್ತು. ಇದು ನಿರ್ದಿಷ್ಟವಾಗಿ ಭಾರತೀಯ ಕ್ರಿಶ್ಚಿಯನ್ನರನ್ನು ದಮನಕ್ಕೆ ಒಳಗಾದ ವರ್ಗಗಳ (ಡಿಪ್ರೆಸ್ಡ್ ಕ್ಲಾಸ್) ಪಟ್ಟಿಯಿಂದ ಹೊರಗಿಟ್ಟಿದೆ. ಅಂದಿನ ಈ ಐತಿಹಾಸಿಕ ನಿರ್ಧಾರ ಇಂದಿಗೂ ಮುಂದುವರಿದಿದ್ದು ಅವರ ಸ್ಥಾನಮಾನದ ಮೇಲೆ ಪರಿಣಾಮ ಬೀರುತ್ತಿದೆ.



ಸಾಮಾಜಿಕ ಮತ್ತು ಆರ್ಥಿಕ ದಮನ, ತಾರತಮ್ಯಗಳು, ದಬ್ಬಾಳಿಕೆಗಳಂತಹ ಗಂಭೀರ ಪ್ರಶ್ನೆಗಳಿಂದ ದಲಿತರು, ಆದಿವಾಸಿಗಳಲ್ಲಿನ ಕೆಲವು ಜನರು ಮತಾಂತರವಾಗುತ್ತಿದ್ದಾರೆ. ಇದು ಕೇವಲ ಆಮಿಷಗಳಿಂದಲೇ ಆಗುತ್ತಿದ್ದಾರೆ ಎನ್ನುವುದು ಅರ್ಥಹೀನ ಹಾಗೂ ವಾಸ್ತವವನ್ನು ಮರೆಸುವ ಹಾದಿ ತಪ್ಪಿಸುವ ತಂತ್ರ. ಹಾಗೆಯೇ ಕ್ರಿಶ್ಚಿಯನ್, ಇಸ್ಲಾಂ ಮತಧರ್ಮಗಳಿಗೆ ಮತಾಂತರಗೊಂಡವರ ಸ್ಥಿತಿಯೇನೂ ಧರ್ಮ ಬದಲಾಯಿಸಿದ ಕೂಡಲೇ ಮೂಲಭೂತವಾಗಿ ಭಾರೀ ಬದಲಾವಣೆಗಳು ಕಂಡು ಬರುವುದಿಲ್ಲ. ಮುಖ್ಯವಾಗಿ, ಅವರ ಸಾಮಾಜಿಕ, ಆರ್ಥಿಕ ಸ್ಥಾನಮಾನಗಳು. ಅಲ್ಲಿ ಅವರ 'ಐಡೆಂಟಿಟಿ' ಯಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಕಂಡರೂ ಅಲ್ಲಿಯೂ ಭಾರತೀಯ ಸಮಾಜದಲ್ಲಿನ ಶ್ರೇಣಿಕೃತ ಪರಿಸ್ಥಿತಿಯ ಪರಿಣಾಮ ಮೊದಲಿದ್ದ ಸನ್ನಿವೇಶಗಳಿಗಿಂತ ಬಹಳ ಭಿನ್ನವಿಲ್ಲ. ಜಾತಿ ವ್ಯವಸ್ಥೆಯ ಹಿಂದಿನ ಎಲ್ಲವುಗಳನ್ನು ಹೆಗಲ ಮೇಲೆ ಹೊತ್ತೇ ಅಲ್ಲಿಗೆ ಸಾಗಿರುತ್ತಾರೆ.

ಸರಕಾರಗಳ ನಿರ್ಲಕ್ಷ್ಯ

ಈ ಕಡು ವಾಸ್ತವದ ಸ್ಥಿತಿಯಿಂದಾಗಿಯೇ ಕ್ರಿಶ್ಚಿಯನ್, ಇಸ್ಲಾಂ ಮತದರ್ಮಗಳಿಗೆ ಮತಾಂತರ ಹೊಂದಿದ ದಲಿತರಿಗೂ ಎಸ್.ಸಿ. ಸ್ಥಾನಮಾನ ಮತ್ತು ಮೀಸಲಾತಿ ಮುಂದುವರೆಯಬೇಕು ಎಂಬ ಬೇಡಿಕೆ ನಿರಂತರ ಇದೆ. ಇದು ಸರಿಯಾದ ಬೇಡಿಕೆ. ಸಾಚಾರ್ ಆಯೋಗ, ರಂಗನಾಥ ಮಿಶ್ರಾ ಆಯೋಗ, ಕರ್ನಾಟಕದ ಹಿಂದುಳಿದ ವರ್ಗಗಳ ಆಯೋಗವೂ ಸಹ ತನ್ನ ಅದ್ಯಯನದ ವರದಿಗಳಲ್ಲಿ ಮತಾಂತರ ಹೊಂದಿದ ದಲಿತರ ಬದಲಾಗದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಧಾರುಣ ಸ್ಥಿತಿಗತಿ ದಾಖಲಿಸಿದ್ದಾರೆ. ಆದರೆ ಹಿಂದಿನಿಂದಲೂ ಕೇಂದ್ರದಲ್ಲಿ ಕಾಂಗ್ರೆಸ್ ಒಳಗೊಂಡ ಯಾವ ಸರಕಾರಗಳು ಯಾವುದೇ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳಲಿಲ್ಲ. ಭಾರತೀಯ ರಿಜಿಸ್ಟ್ರಾರ್ ಜನರಲ್ (ಆರ್.ಜಿ.ಐ) ಕಚೇರಿ ಹಿಂದೂ ಧರ್ಮ ಅಥವಾ ಸಿಖ್ ಧರ್ಮದ ಆಚೆಗೆ ಸಂವಿಧಾನದ ಆದೇಶದ ವ್ಯಾಪ್ತಿಯನ್ನು ವಿಸ್ತರಿಸುವ ಬಗ್ಗೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದೆ. 2001 ರಲ್ಲಿ, ಪ್ರಾಥಮಿಕವಾಗಿ ಹಿಂದೂ ಮತ್ತು ಸಿಖ್ ಸಮುದಾಯಗಳಲ್ಲಿ ಅಸ್ಪೃಶ್ಯತೆಯ ವ್ಯಾಪಕತೆಯನ್ನು ಉಲ್ಲೇಖಿಸಿದ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ (ಆರ್.ಜಿ.ಐ.) ದಲಿತ ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರನ್ನು ಎಸ್.ಸಿ.ಗಳಾಗಿ ಸೇರಿಸುವುದರ ವಿರುದ್ಧ ತನ್ನ ನಿಲುವನ್ನು ಪುನರುಚ್ಚರಿಸಿತು. ಆದರೆ ಬೇಡಿಕೆಯ ಕೂಗು ನಿಂತಿಲ್ಲ. ಈ ಬಗ್ಗೆ ಎತ್ತಲಾದ ಪ್ರಶ್ನೆಯ ಮೊಕದ್ದಮೆ ಅಪೆಕ್ಸ್ ಕೋರ್ಟ್‌ನಲ್ಲಿ ಕಳೆದ 19 ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ.

ವಿರೋಧದ ಅರ್ಥವೇನು?

ಇತ್ತೀಚಿನ ವರ್ಷಗಳಲ್ಲಿ, ದಲಿತ ಕ್ರೈಸ್ತರು ಮತ್ತು ದಲಿತ ಮುಸ್ಲಿಮರಿಗೆ ಎಸ್.ಸಿ. ಸ್ಥಾನಮಾನ ನೀಡಬೇಕೇ ಎಂಬ ಬಗ್ಗೆ ಚರ್ಚೆಗಳು ಮತ್ತೇ ತೀವ್ರವಾಗಿ ನಡೆಯುತ್ತಿವೆ. ಈ ವಿಷಯವನ್ನು ಪರಿಶೀಲಿಸಲು 2022 ರಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್ ಅವರ ನೇತೃತ್ವದಲ್ಲಿ ತನಿಖಾ ಆಯೋಗವನ್ನು ರಚಿಸಿದೆ. ಈ ಆಯೋಗ ರಾಜ್ಯಗಳಿಗೆ ಭೇಟಿ ನೀಡಿ ಅಭಿಪ್ರಾಯಗಳನ್ನು ಸಂಗ್ರಹಿಸುತ್ತಿದೆ. ಹೀಗಿರುವಾಗ ಮತಾಂತರ ಹೊಂದಿರುವ ದಲಿತರಿಗೆ, ಆದಿವಾಸಿಗಳಿಗೆ ಎಸ್.ಸಿ. ಮತ್ತು ಎಸ್.ಟಿ. ಸ್ಥಾನಮಾನ ಮುಂದುವರಿಯಬಾರದು ಅದನ್ನು ರದ್ದುಪಡಿಸಬೇಕೆಂದು ಪ್ರಬಲ ಕೂಗು ಎದ್ದಿದೆ. ಅದರಲ್ಲೂ ಅಧಿಕಾರದಲ್ಲಿರುವ ಬಿಜೆಪಿ–ಒಟ್ಟಾರೆ ಸಂಘಪರಿವಾರವೇ ಮುಂಚೂಣಿಯಲ್ಲಿದೆ. ಪ್ರಸಕ್ತವಾಗಿ, ಮತಾಂತರಗೊಂಡ ಆದಿವಾಸಿ–ಬುಡಕಟ್ಟು ಜನರಿಗೆ ಎಸ್.ಟಿ. ಸೌಲಭ್ಯ ಇದೆ. ಅದನ್ನು ರದ್ದುಪಡಿಸಬೇಕೆಂದು ಒತ್ತಾಯವಿದೆ. 'ಅದನ್ನು ರದ್ದುಪಡಿಸುವುದಿಲ್ಲ, ಮತಾಂತರಗೊಂಡ ಆದಿವಾಸಿ ವ್ಯಕ್ತಿಗಳಿಗೆ ಮುಂದುವರಿಸಲಾಗುವುದು' ಎಂದು ಕೇಂದ್ರದ ಬುಡಕಟ್ಟು ಸಚಿವ ಜುಯೆಲ್ ಓರಮ್ ಸ್ಪಷ್ಟನೆ ನೀಡಿದ್ದಾರಾದರೂ, ಅದನ್ನು ಉಳಿಸಲಾಗುತ್ತದೆ ಎಂಬ ಯಾವ ಖಾತ್ರಿಯೂ ಇಲ್ಲ. ಯಾಕೆಂದರೆ ಎಸ್.ಟಿ. ಸೌಲಭ್ಯ ನೀಡುವುದರ ವಿರುದ್ಧ ಬಿಜೆಪಿ, ಸಂಘಪರಿವಾರ ದೇಶದಾದ್ಯಂತ ವ್ಯಾಪಕವಾದ ವಿರೋಧವನ್ನು ಸಂಘಟಿಸುತ್ತಿದೆ, ಪ್ರಚಾರಿಸುತ್ತಿದೆ.

ಮುಖ್ಯವಾಗಿ ಕ್ರಿಶ್ಚಿಯನ್, ಇಸ್ಲಾಂ ಮತಧರ್ಮಗಳಿಗೆ ಮತಾಂತರ ಹೊಂದಿದ ಪ.ಜಾತಿಗಳು ಮತ್ತು ಪ.ಪಂಗಡಗಳ ಜನಗಳ ವಿರುದ್ಧ ಸಂಘಪರಿವಾರ ಗುರಿ ಇಟ್ಟಿದೆ. ಪ್ರಚಾರ ಮಾತ್ರವಲ್ಲ, ಕೆಲವು ರಾಜ್ಯಗಳಲ್ಲಿ ಧಾಳಿಗಳನ್ನು, ತಿರುಚಿದ ಹಾಗೂ ದ್ವೇಷಪೂರಿತ ಅಪಪ್ರಚಾರ ನಡೆಸುತ್ತಾ ಆ ಸಮುದಾಯಗಳನ್ನು ಪರಸ್ಪರ ಎತ್ತಿ ಕಟ್ಟಿ ವಿಭಜಿಸುತ್ತಿದ್ದಾರೆ. ಒಂದೆಡೆ ದಲಿತ ಮತ್ತು ಆದಿವಾಸಿಗಳಲ್ಲಿರುವ ಐಕ್ಯತೆಯನ್ನು ಒಡೆಯುವುದು. ಇನ್ನೊಂದೆಡೆ, ವಂಚಿತ ಸಮುದಾಯಗಳಿಗೆ ಅವಕಾಶ ನೀಡುವ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವುದು. ಅವರನ್ನು ದಯನೀಯ ಸ್ಥಿತಿಯಲ್ಲೇ ಮುಂದುವರಿಯುವಂತೆ, ತೀವ್ರ ಶ್ರಮ ಶೋಷಣೆ ತಪ್ಪದಂತೆ ನೋಡಿಕೊಳ್ಳುತ್ತದೆ. ಈ ಮೂಲಕ ದಲಿತರು, ಆದಿವಾಸಿಗಳನ್ನು 'ಹಿಂದುತ್ವ'ದ ತಾತ್ವಿಕತೆ, ಮತಾಂಧ ರಾಜಕಾರಣದೊಳಕ್ಕೆ ಸೆಳೆದು ಹಿಡಿದಿಡುವುದು ನಡೆಯುತ್ತದೆ. ಈಗಾಗಲೇ ಉದ್ಯೋಗ, ಶಿಕ್ಷಣ, ಸಂಪನ್ಮೂಲಗಳಿಂದ ವಂಚಿತವಾದ ಸಮುದಾಯಗಳಿಗೆ ತಮ್ಮವರು ಬೇರೊಂದು ಮತಧರ್ಮವನ್ನು ಅನುಸರಿಸಿದರೆ ಅದನ್ನೇ ನೆಪವಾಗಿಸಿ ಅವರನ್ನು ನಿವಾರಿಸಿಕೊಳ್ಳುವ, ಹೊರಗಟ್ಟುವ ಅಮಾನವೀಯತೆ ಅರಿಯದೇ ಶತೃಗಳಾದರೆ ದುರಂತವೇ ಸರಿ.

ವಿಭಜನಾ ರಾಜಕಾರಣ

ಕರ್ನಾಟಕದಲ್ಲಿಯೂ ಸಂಘಪರಿವಾರ ತನ್ನ ವನವಾಸಿ ಕಲ್ಯಾಣ ಪರಿಷತ್ ಅಲ್ಲದೇ ಹೊಸ ವೇದಿಕೆಗಳ ಮೂಲಕ ಆದಿವಾಸಿಗಳನ್ನು ಹಲವು ವರ್ಷಗಳಿಂದ ಎತ್ತಿ ಕಟ್ಟುತ್ತಾ ಬರುತ್ತಿದೆ. ಕೆಲವು ತಿಂಗಳ ಹಿಂದೆ ಮೈಸೂರಿನಲ್ಲಿ

ಪುಟ 14 ಕ್ಕೆ

ಅನಿಯಂತ್ರಿತ ದೌರ್ಜನ್ಯಗಳು.... ಬದಲಾಗದ ಧೋರಣೆಗಳು ಬದಲಿಸಬೇಕು ಮನೋಭಾವ

ವಿಮಲಾ ಕೆ.ಎಸ್.

'ಅತ್ಯಾಚಾರಿಗಳ ಪುರುಷತ್ವ ಹರಣ ಮಾಡಿಬಿಡಬೇಕು, ಗಲ್ಲು ಶಿಕ್ಷೆ ವಿಧಿಸಬೇಕು, ಕಾನೂನು ಬಿಗಿಯಾಗಬೇಕು'.

ರೋಷಾವೇಶದಲ್ಲಿ ಈ ಮಾತುಗಳು ನಿರ್ಭಯಾ ಸಂದರ್ಭದಿಂದ ಬಹಳ ಸಾಮಾನ್ಯವಾಗಿ ಕೇಳಿಬರುತ್ತಿವೆ.

ಈಗ ಮತ್ತೆ ಕೊಲ್ಕತ್ತಾದ ಆರ್.ಜಿ.ಕರ್ ಆಸ್ಪತ್ರೆಯಲ್ಲಿ ಕಿರಿಯ ವೈದ್ಯಕೀಯ ಟ್ರೈನಿಯೊಬ್ಬಳ ಮೇಲೆ ನಡೆದ ಬರ್ಭರವಾದ ಆಕ್ರಮಣ ಮತ್ತು ಕೊಲೆಯ ನಂತರವೂ ಅದೇ ಮಾತುಗಳು ಕಿವಿಗೆ ಬೀಳುತ್ತಿವೆ. ಹೆಣ್ಣಿಗೆ ವಿಧಿಸುವ ಎಲ್ಲ ನಿರ್ಬಂಧಗಳ ಬಗ್ಗೆಯೂ ಮಾತೇ ಮಾತು.

> **ರಾಷ್ಟ್ರೀಯ ಮಟ್ಟದಲ್ಲಿ ಜಾರಿಗೆ ತರಬೇಕಾಗಿರುವ ನಿಯಮಗಳನ್ನು ಮತ್ತು ವೈದ್ಯಕೀಯ ವಲಯ ಮತ್ತು ಆರೋಗ್ಯ ಪಾಲನಾ ಸಿಬ್ಬಂದಿಗಳ ಸುರಕ್ಷತೆಗೆ ಕಾರ್ಯಪಡೆ ರಚನೆ ಮಾಡಿದೆ. ಇವೆಲ್ಲವನ್ನೂ ಸ್ವಾಗತಿಸೋಣ, ಆದರೆ ಇವು ನಿಜವಾದ ಅರ್ಥದಲ್ಲಿ ಮಹಿಳೆಯರ ಸುರಕ್ಷತೆ ಮತ್ತು ಘನತೆಯ ಬದುಕಿನ ಹಕ್ಕನ್ನು ಖಾತ್ರಿ ಮಾಡಬಲ್ಲವೇ?**

ಆರ್.ಜಿ.ಕರ್ ಆಸ್ಪತ್ರೆಯ ಘಟನೆಯನ್ನೇ ತೆಗೆದುಕೊಂಡರೆ, ದೇಶದ ಸರ್ವೋಚ್ಚ ನ್ಯಾಯಾಲಯವೂ ಗಮನಿಸಿದಂತೆ ದುಷ್ಕೃತ್ಯ ನಡೆದ ಆ ಸರಕಾರಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರತ ಸಿಬ್ಬಂದಿಗಳಿಗೆ ಕನಿಷ್ಟ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವವರಿಗೂ ವಿಶ್ರಾಂತಿಗೆ ಸ್ಥಳವಿಲ್ಲ. ವ್ಯಕ್ತಿಯೊಬ್ಬರಿಗೆ 8 ಘಂಟೆಗಳ ಕೆಲಸ ಎನ್ನುವ ವೈಜ್ಞಾನಿಕ ಅವಧಿಯನ್ನು ಮೀರಿ ವೈದ್ಯಕೀಯ ವಲಯದಲ್ಲಿ ತರಬೇತಿಯಲ್ಲಿ ಇರುವ ವೈದ್ಯರು 30–36 ಘಂಟೆ ನಿರಂತರ ಕೆಲಸ ಮಾಡುತ್ತಾರೆ. ಅಂತಹ ದುಷ್ಕೃತ್ಯಕ್ಕೆ ಒಳಗಾಗಿ ಕೊಲೆಯಾದ ಯುವತಿಯ ಪೋಷಕರಿಗೆ ಮಗಳು ಅತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಆಸ್ಪತ್ರೆಯ ಕಡೆಯಿಂದ ಕರೆ ಮಾಡಿದ್ದು, ಘಟನೆಯ ನಂತರದ ಹಲವು ಬೆಳವಣಿಗೆಗಳು ನೂರಾರು ಪ್ರಶ್ನೆಗಳಿಗೆ ಹಾದಿ ಮಾಡಿಕೊಟ್ಟಿದೆ. ಈ ಘೋರ ಘಟನೆ ಮತ್ತು ಅದರ ಸುತ್ತಮುತ್ತಲಿನ ಪರಿಸ್ಥಿತಿಗಳನ್ನು ನೋಡಿದರೆ ಹಲವು ಸಡಿಲ ಗಂಟುಗಳು ಗೋಚರಿಸುತ್ತವೆ.

ಪ್ರಾಂಶುಪಾಲರು ರಾಜಿನಾಮೆ ಕೊಡುತ್ತಾರೆ. ಕೊಟ್ಟ ಮರುಕ್ಷಣವೇ ಇನ್ನೊಂದು ಅಂತಹುದೇ ಹುದ್ದೆಗೆ ನೇಮಕವಾಗುತ್ತದೆ!!.

ವೈದ್ಯರು ಆಸ್ಪತ್ರೆಯ ಮುಂದೆ ಪ್ರತಿಭಟನೆ ನಡೆಸುತ್ತಿರುತ್ತಾರೆ, ಅದೇ ಹೊತ್ತಿಗೆ ದುಷ್ಕರ್ಮಿಗಳು ಆಸ್ಪತ್ರೆಗೆ ನುಗ್ಗಿ ದಾಂದಲೆ ಎಬ್ಬಿಸುತ್ತಾರೆ. ಪೋಲೀಸರ ಸಮ್ಮುಖದಲ್ಲಿಯೇ ಇದು ನಡೆಯುತ್ತದೆ.

ನವೀಕರಣದ ಕಾರಣ ಕೊಟ್ಟು ದುಷ್ಕೃತ್ಯ ನಡೆದ ಆಸುಪಾಸಿನ ಗೋಡೆಗಳನ್ನು ಕೆಡವಲಾಯಿತು. ದುರ್ಘಟನೆ, ದುಷ್ಕೃತ್ಯ ನಡೆದುದು ಮೊದಲ ಅಪರಾಧವಾದರೆ, ಅದನ್ನು ನಿಷ್ಪಕ್ಷಪಾತ ತನಿಖೆಗೆ ಒಳಪಡಿಸುವ ಬದಲು ಅದನ್ನು ಮುಚ್ಚಿ ಹಾಕಲು ನಡೆಸಿದ ಪ್ರಯತ್ನ ಮತ್ತು ಈಗಾಗಲೇ ಆರೋಪಿ ಎಂದು ಬಂಧಿಸಲ್ಪಟ್ಟ ವ್ಯಕ್ತಿಯಲ್ಲದೆಯೂ ಇತರರೂ ಇರಬಹುದಾದ ಅಂಶಗಳನ್ನು ಮರೆ ಮಾಚಲು ನಡೆಸಿದ ಪ್ರಯತ್ನಗಳು ಉದ್ದೇಶಪೂರ್ವಕ ಘೋರ ಅಪರಾಧವೇ ಆಗುತ್ತದೆ. ಇದನ್ನು ಪುಷ್ಟೀಕರಿಸಲು ಮತ್ತೊಂದು ಸಾಕ್ಷ್ಯ ಕೊಲ್ಕತ್ತಾದಲ್ಲಿ ನಾಲ್ಕೈದು ಸರಕಾರೀ ವೈದ್ಯಕೀಯ ಮಹಾ ವಿದ್ಯಾಲಯಗಳು+ ಆಸ್ಪತ್ರೆಗಳಿದ್ದಾಗಲೂ ಯಾವ ಆಸ್ಪತ್ರೆಯಲ್ಲಿ ಇಂತಹ ಘಟನೆ ನಡೆದಿದೆಯೋ ಮತ್ತು ಸಹಜವಾಗಿಯೇ ಹಲವು ಅನುಮಾನಗಳನ್ನೂ ಹುಟ್ಟು ಹಾಕಿದೆಯೋ ಅದೇ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಯುತ್ತದೆ. ಸ್ವತಃ ಸರಕಾರ ನಡೆಸುತ್ತಿರುವ ಪಕ್ಷ, ಮುಖ್ಯಮಂತ್ರಿಯೂ ಆಗಿರುವ ಮೇಡಂ ಮಮತಾ ಬ್ಯಾನರ್ಜಿಯವರ ನೇತೃತ್ವದಲ್ಲಿ ಕೊಲ್ಕತ್ತಾ ನಗರದಲ್ಲೊಂದು ಪ್ರತಿಭಟನಾ ಮೆರವಣಿಗೆಯೂ ನಡೆಯುತ್ತದೆ! ಅದು ಯಾರ ವಿರುದ್ಧ ಅಥವಾ ಯಾವ ಬೇಡಿಕೆ ಇಟ್ಟು?

> **ದಲಿತ ದಮನಿತ ವಿಭಾಗದ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ವಿರುದ್ಧ ನಡೆಯುವ ಪ್ರತಿಭಟನೆಗಳಿಗೆ ಹೆಚ್ಚು ಸ್ಪಂದಿಸುವುದಕ್ಕಿಂತ, ಮೇಲ್ ಸ್ಥರದ ಸಂದರ್ಭಕ್ಕೆ ಪ್ರತಿರೋಧ, ಪ್ರತಿಕ್ರಿಯೆಗಳು ವ್ಯಕ್ತವಾಗುತ್ತವೆ ಎಂಬುದು ಕೂಡಾ ಯೋಚಿಸಬೇಕಾದ ಸಂಗತಿಯೇ ಆಗಿದೆ.**

ಅದರ ಬೆನ್ನಲ್ಲೇ, ಪ.ಬಂಗಾಲ ಸರಕಾರದ ಕಾರ್ಯದರ್ಶಿಯವರು 17 ಅಂಶಗಳ ರಕ್ಷಣಾ ಸೂತ್ರಗಳ ಸಲಹೆ ಪ್ರಕಟವಾಗಿದೆ..

ಆರ್.ಜಿ.ಕರ್ ಆಸ್ಪತ್ರೆಯ ಘಟನೆಯ ಬೆನ್ನಲ್ಲೇ ಎದ್ದ ಘೋಷಣೆ 'ವಿಮೆನ್ ರೀ ಕ್ಲೈಮ್ ಅವರ್ ನೈಟ್ಸ್' ಎಂದರೆ 'ಮಹಿಳೆಯರ ನಿರ್ಭೀತ ಸ್ವಾತಂತ್ರ್ಯದ ಅಧಿಕಾರದ ಭಾಗವಾಗಿ ನಮ್ಮ ರಾತ್ರಿಗಳನ್ನು ನಾವು ಮರಳಿ ಪಡೆಯುತ್ತೇವೆ' ಎಂದಾಗಿತ್ತು. ಆದರೆ ಕೇವಲ ಕಾರ್ಯದರ್ಶಿಯವರ ಮೂಲಕ ಸಲಹೆಯಂತೆ ಪ್ರಕಟವಾದ 17 ಅಂಶಗಳು ಈ ಘೋಷಣೆಯನ್ನೇ ಅವಮಾನಿಸುವಂತೆ ಇರುವ ಅಂಶಗಳನ್ನು ಒಳಗೊಂಡಿದೆ, ವ್ಯಾಪಕವಾಗಿ ಎದ್ದ ಪ್ರತಿಭಟನೆಗಳನ್ನು ಶಮನಗೊಳಿಸಲು ಪ.ಬಂಗಾಲದ ಮುಖ್ಯಮಂತ್ರಿಗಳು ರಚಿಸಿದ ಒಂದು ಸ್ಟ್ರಾಟೆಜಿ ಎನ್ನುತ್ತಿವೆ ಅದರ ಕುರಿತಾದ ವಿಮರ್ಶೆಗಳು. ಖಚಿತ ನಿರ್ಧಾರಗಳನ್ನಾಗಲಿ, ಪ್ರಸ್ತಾಪಗಳನ್ನಾಗಲಿ ಹೊಂದಿಲ್ಲದ ಈ 17 ಅಂಶಗಳು ಮಹಿಳೆಯರ ಸ್ವಾತಂತ್ರ್ಯ ಮತ್ತು ಘನತೆಯಿಂದ ಉದ್ಯೋಗದಲ್ಲಿ ತೊಡಗಿಕೊಳ್ಳುವ ಸುರಕ್ಷಿತ ವಾತಾವರಣ ನಿರ್ಮಾಣದತ್ತ ಬದ್ಧತೆಯನ್ನು ಹೊಂದುವ ಬದಲು, ಅವರ ಉದ್ಯೋಗದ ಹಕ್ಕಿಗೇ ಅಡ್ಡಿ ಪಡಿಸುವಂತಿದೆ. ರಾತ್ರಿಪಾಳಿಯಲ್ಲಿ ಕೆಲಸ ಮಾಡಲು ಅಗತ್ಯವಾದ ಸುರಕ್ಷಿತ ವಾತಾವರಣ ನಿರ್ಮಿಸುವ ಬದಲು ಕಣ್ಗಾವಲಿನ ನಿಗಾವಣೆ, ರಾತ್ರಿ ಕೆಲಸದ ಸಮಯದ ಕಡಿತ ಇತ್ಯಾದಿಗಳು ಏನನ್ನು ಸೂಚಿಸುತ್ತಿವೆ ಎಂದು ಯೋಚಿಸಬೇಕಲ್ಲವೇ?

ವೈದ್ಯಕೀಯ ವಲಯದಲ್ಲಿ ಆಯಾಗಳು, ನರ್ಸ್‌ಗಳು, ವೈದ್ಯರು ಅನಿವಾರ್ಯವಾಗಿ ರಾತ್ರಿ ಪಾಳಿ ಮಾಡಲೇಬೇಕಾದ ಅಗತ್ಯವೂ ಇದೆ ಎಂಬುದು ನಿರ್ವಿವಾದದ ಸಂಗತಿ. ರಾತ್ರಿಯಲ್ಲಿ ಪೊಲೀಸ್ ಗಸ್ತು ಹೆಚ್ಚಿಸುವ, ಮಹಿಳಾ ರಕ್ಷಣಾ ಪಡೆಯನ್ನು/ಪೊಲೀಸರನ್ನು ನಿಯೋಜಿಸುವ ಪ್ರಸ್ತಾಪವೂ ಅದರಲ್ಲಿದ್ದು ಅವರ ಸುರಕ್ಷತೆಗೇನು ಮಾಡುವಿರಿ ಎಂದೂ ಪ್ರಶ್ನಿಸಲಾಗುತ್ತಿದೆ.

ವಿಶ್ರಾಂತಿ ಕೊಠಡಿಗಳಿರಬೇಕು, ಸಿಸಿ ಕ್ಯಾಮರಾಗಳಿರಬೇಕು, ವಿಶಾಖಾ ಕಾನೂನಿನ ಅಡಿ ದೂರು ನಿರ್ವಹಣಾ ಸಮಿತಿಗಳಿರಬೇಕು ಎಂಬಿತ್ಯಾದಿ ಸದಾಶಯದ ಅಂಶಗಳನ್ನು ಹೊಂದಿದ ಹೇಳಿಕೆಯನ್ನು ಹಂಚುವ ಮೂಲಕ ಜನರ ಆಕ್ರೋಶ ಕಡಿಮೆ ಮಾಡಲು ಹೊರಟ ನಡೆಯಷ್ಟೆ ಅದು ಎನ್ನಬಹುದು.ಆರ್.ಜಿ.ಕರ್ ಆಸ್ಪತ್ರೆಯಲ್ಲಿ ಘಟನೆ ನಡೆದ ಸ್ಥಳ ಸಿಸಿ ಕ್ಯಾಮರಾವನ್ನು ಹೊಂದಿದ ಸೋಕಾಲ್ಡ್ ಸುಸಜ್ಜಿತ ಕೊಠಡಿಯೇ ಆಗಿತ್ತು. ಕೊಲ್ಕತ್ತಾದ ವೈದ್ಯಕೀಯ ವಲಯದಲ್ಲಿ ವ್ಯಾಸಂಗ ಮಾಡುತ್ತಿರುವ, ಈ ಘಟನೆಯಿಂದ ತತ್ತರಿಸಿಹೋಗಿ, ಅಪರಾಧಿಗಳಿಗೆ ರಕ್ಷಣೆ ನೀಡದೆ ಸೂಕ್ತ ಕಾನೂನಿನ ಕ್ರಮಕ್ಕಾಗಿ ಒತ್ತಾಯಿಸಿ ಪ್ರತಿಭಟನಾ ನಿರತ ಕಿರಿಯ ವೈದ್ಯರನೇಕರು ತಮ್ಮ ಅಭಿಪ್ರಾಯಗಳನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ನಿರಂತರವಾಗಿ ಹಂಚಿಕೊಳ್ಳುತ್ತಿದ್ದಾರೆ. ಎಲ್ಲರ ಅನುಮಾನಗಳೂ, ಅಭಿಪ್ರಾಯಗಳು ಆರೋಪಿಗಳನ್ನು ರಕ್ಷಿಸಲು ಪ್ರಭಾವ ಬೀರಲಾಗುತ್ತಿದೆ ಎಂಬುದೇ ಆಗಿದೆ.

ಇಂತಹ ಘಟನೆಗಳು ನಡೆದಾಗೆಲ್ಲ ಹೀಗೊಂದು ತಿಪ್ಪೆ ಸಾರಿಸುವ ಅಥವಾ ಮಹಿಳೆಯರ ಸಹಜ ಬದುಕಿನ ನಡೆಗಳನ್ನು ನಿಯಂತ್ರಿಸುವ ಧೋರಣೆಗಳು ಢಾಳಾಗಿ ಕಾಣುತ್ತವೆ. ನೆನಪಿಸಿಕೊಳ್ಳಬಹುದು, ಬೆಂಗಳೂರು ವಿಶ್ವವಿದ್ಯಾಲಯದ ಪ್ರದೇಶದಲ್ಲಿ ಯುವತಿಯೋರ್ವಳ ಮೇಲೆ ಅತ್ಯಾಚಾರ ನಡೆದಾಗ ಜ್ಞಾನಭಾರತಿ ರಸ್ತೆಗಳನ್ನು ರಾತ್ರಿ ಎಂಟರ ನಂತರ ಸಂಚಾರಕ್ಕೆ ನಿರ್ಬಂಧಿಸಲಾಗಿತ್ತು. ಅಸಲಿಗೆ ಅಲ್ಲಿ ಹೇರಳವಾಗಿರುವ ಶ್ರೀಗಂಧದ ಮರಗಳನ್ನು ಕದ್ದು ಸಾಗಿಸುವ ದಂಧೆ ಮಾಡುವವರಿಂದ ಯುವತಿಯ ಮೇಲೆ ಅತ್ಯಾಚಾರ ನಡೆದದ್ದು ಎಂಬುದು ಸತ್ಯವಲ್ಲವೇ?

> **ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳನ್ನು ಕಾನೂನು ಸುವ್ಯವಸ್ಥೆ ಎಂದು ನೋಡದೇ, ಮಹಿಳೆಯರ ಘನತೆಯ ಬದುಕಿನ ಹಕ್ಕಿನ ಉಲ್ಲಂಘನೆ ಎಂದು ಪರಿಗಣಿಸಬೇಕು. ಮತ್ತು ಪುರುಷ ಪ್ರಧಾನ ಆಲೋಚನೆಯ ಪಾಳೆಯಗಾರಿ ಮೌಲ್ಯಗಳ ಮುಂದುವರೆದ ಭಾಷೆಯಾಗಿ ಮಹಿಳೆಯರ ರಕ್ಷಣೆ ಎಂಬ ಶಬ್ದ ಕಿವಿಗೆ ಬೀಳುತ್ತಲೇ ಇರುತ್ತದೆ. ಇಲ್ಲ ಸಮಾಜ ತನ್ನ ಭಾಷೆ, ಭಾವ ಎಲ್ಲವನ್ನೂ ಬದಲಿಸಿಕೊಳ್ಳಬೇಕು.**

ಪ್ರಕರಣ ಮುಚ್ಚಿ ಹಾಕಲು ಸರ್ವ ಪ್ರಯತ್ನಗಳೂ ನಡೆಯುತ್ತಿವೆ ಮತ್ತು ರಕ್ಷಣೆಯ ಮಾತುಗಳನ್ನು ಬದಿಗಿಟ್ಟು ಸುರಕ್ಷೆಯ ವಾತಾವರಣ ನಿರ್ಮಾಣ ಮಾಡಲು ಆದ್ಯತೆ ನೀಡಿ ಎಂಬುದೇ ಆಗಿದೆ.

ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದೆ. ಜೊತೆಗೇ ವೈದ್ಯಕೀಯ ವಲಯದಲ್ಲಿ ಕೆಲಸ ಮಾಡುವವರ ಸುರಕ್ಷತೆಗಾಗಿ ಸಮಿತಿಯೊಂದನ್ನು ನೇಮಕ ಮಾಡಿ ಹಲವು ಸುಧಾರಣಾ ಕ್ರಮಗಳಿಗೂ ಆದೇಶ ನೀಡಿದೆ. ರಾಷ್ಟ್ರೀಯ ಮಟ್ಟದಲ್ಲಿ ಜಾರಿಗೆ ತರಬೇಕಾಗಿರುವ ನಿಯಮಗಳನ್ನು ಮತ್ತು ವೈದ್ಯಕೀಯ ವಲಯ ಮತ್ತು ಆರೋಗ್ಯ ಪಾಲನಾ ಸಿಬ್ಬಂದಿಗಳ ಸುರಕ್ಷತೆಗೆ ಕಾರ್ಯಪಡೆ ರಚನೆ ಮಾಡಿದೆ. ಇವೆಲ್ಲವನ್ನೂ ಸ್ವಾಗತಿಸೋಣ, ಆದರೆ ಇವು ನಿಜವಾದ ಅರ್ಥದಲ್ಲಿ ಮಹಿಳೆಯರ ಸುರಕ್ಷತೆ ಮತ್ತು ಘನತೆಯ ಬದುಕಿನ ಹಕ್ಕನ್ನು ಖಾತ್ರಿ ಮಾಡಬಲ್ಲವೇ?

ಮೇಲಿನ ಪ್ರಶ್ನೆಯ ಜೊತೆಯೇ ಈ ಸಮಾಜ ಕೇಳಿಕೊಳ್ಳಬೇಕಾದ ಮತ್ತೊಂದು ಪ್ರಶ್ನೆ ದಿನವೊಂದಕ್ಕೆ ದಾಖಲಾಗುತ್ತಿರುವ 86–90 ಅತ್ಯಾಚಾರದ ಪ್ರಕರಣಗಳು, ದಾಖಲಾಗದೇ ಮರೆಯಾಗುವ ಇನ್ನಷ್ಟೋ ಅಸಂಖ್ಯ ಪ್ರಕರಣಗಳನ್ನು ಎದುರಿಟ್ಟುಕೊಂಡು ಈ ಸಮಾಜ, ಆಡಳಿತ, ನ್ಯಾಯದಾನ ವ್ಯವಸ್ಥೆ ತನ್ನನ್ನು ಪ್ರಶ್ನೆ ಮಾಡಿಕೊಳ್ಳುವುದೇ? ಅಂದಿನ ನಿರ್ಭಯಾ ಪ್ರಕರಣ, ಅದರ ಹಿಂದೆ ಮುಂದೆ ಮತ್ತು ಇಂದೂ ಕೂಡ ನಡೆಯುತ್ತಿರುವ ಅದೆಷ್ಟು ಪ್ರಕರಣಗಳು ಕೇವಲ ಸುದ್ದಿಯಾಗಿ ಮರೆಯಾಗುತ್ತಿವೆ. ಆರ್.ಜಿ.ಕರ್ ಜೊತೆಯೇ ವರದಿಯಾದ ಕೊಯಮತ್ತೂರು, ಉತ್ತರಾಖಾಂಡದ ವೈದ್ಯಕೀಯ ವಲಯದ ಮಹಿಳೆಯರ ಮೇಲೆ ನಡೆದ ಲೈಂಗಿಕ ದೌರ್ಜನ್ಯಗಳು, ಬಿಹಾರದಲ್ಲಿ ದಲಿತ ಸಮುದಾಯದ ಅಪ್ರಾಪ್ತ ಬಾಲಕಿಯ ಮೇಲಿನ ಅತ್ಯಾಚಾರ, ಉತ್ತರ ಪ್ರದೇಶದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಮರಕ್ಕೆ ನೇತಾಡಿದ ಇಬ್ಬರು ದಲಿತ ಬಾಲಕಿಯರ ದೇಹ. ಅಪರಾಧ ತಡೆಗಟ್ಟಲು ದೇಶದಲ್ಲಿರುವ ಕಾನೂನುಗಳನ್ನು ಮತ್ತು ನಿಯಂತ್ರಣಕ್ಕೆ ಸಾಂವಿಧಾನಿಕ ಕ್ರಮಗಳಿಗೆ ಬದಲು ಬುಲ್ಡೋಜರ್ ರಾಜಕಾರಣವನ್ನು ಜಾರಿಗೆ ತಂದ ಉತ್ತರಪ್ರದೇಶ ಅಥವಾ ಮಧ್ಯಪ್ರದೇಶಗಳಲ್ಲಿ ಅವು ಕೋಮು ರಾಜಕಾರಣಕ್ಕಾಗಿ ವ್ಯಾತ್ರವೀ ಬಳಕೆಯಾಗುತ್ತಿವೆ ಎಂಬುದೂ ಸತ್ಯವಲ್ಲವೇ? ಮತ್ತು ಯಾವ ವರ್ಗದ ಧ್ವನಿ ಗಟ್ಟಿಯಾದರೆ ಪ್ರಭುತ್ವದ ನಿದ್ದೆ ಕೆಡಬಲ್ಲುದೋ ಆ ವರ್ಗ ಎಂದರೆ ಮಧ್ಯಮ ವರ್ಗ ಬಹಳ ಎಚ್ಚರಿಕೆಯ ನಡೆಗಳನ್ನೇ ಇಡುತ್ತದೆ.

ದಲಿತ ದಮನಿತ ವಿಭಾಗದ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ವಿರುದ್ಧ ನಡೆಯುವ ಪ್ರತಿಭಟನೆಗಳಿಗೆ ಹೆಚ್ಚು ಸ್ಪಂದಿಸುವುದಕ್ಕಿಂತ, ಮೇಲ್ ಸ್ಥರದ ಸಂದರ್ಭಕ್ಕೆ ಪ್ರತಿರೋಧ, ಪ್ರತಿಕ್ರಿಯೆಗಳು ವ್ಯಕ್ತವಾಗುತ್ತವೆ ಎಂಬುದು ಕೂಡಾ ಯೋಚಿಸಬೇಕಾದ ಸಂಗತಿಯೇ ಆಗಿದೆ. ಇಲ್ಲೊಂದು ಪುಟ 10 ಕ್ಕೆ



ಏಕೀಕೃತ ಪಿಂಚಣಿ ಯೋಜನೆ (UPS)... ಪುಟ 5 ರಿಂದ

2016ರಿಂದ ಲೆಕ್ಕ ಹಾಕಲಾಗುತ್ತದೆ. ಈಗ ಜುಲೈ 2024ರಲ್ಲಿ ಶೇ. 53ರಷ್ಟು ಸವಕಳಿಯಾಗಿದೆ. 1–1–2025 ರಂದು ಇದು ಶೇ. 57ರಷ್ಟು ಇರುತ್ತದೆ. ಹಾಗಾದರೆ 1–4–2025 ರಲ್ಲಿ ಈ 57 ಶೇಕಡಾ ಪಿಂಚಣಿಯಲ್ಲಿ ಅಥವಾ ಕುಟುಂಬ ಪಿಂಚಣಿಯಲ್ಲಿ ಸೇರಿಸುತ್ತಾರೆಯೇ ಎಂಬುದು ಅನುಮಾನವಾಗಿದೆ. 1–4–2025 ರಂದು ತುಟ್ಟಿಭತ್ಯೆಯನ್ನು ಹೊಸ ಆಧಾರದಲ್ಲಿ ರಚಿಸಿ ಮೊದಲಿನಿಂದ ಪ್ರಾರಂಭಿಸುತ್ತಾರೆ ಎಂದು ತೋರುತ್ತದೆ. ಇಲ್ಲದಿದ್ದಲ್ಲಿ ಕನಿಷ್ಠ ಪಿಂಚಣಿಯನ್ನು ಕೇಂದ್ರ ಸರ್ಕಾರದಲ್ಲಿ ಇರುವ 9000 ರೂ.ಗಳಿಂದ ಹೆಚ್ಚುವರಿಯಾಗಿ 10,000 ರೂ.ಗಳನ್ನು ನಿಗದಿ ಮಾಡಿದ್ದೇಕೆ ಎಂಬ ಪ್ರಶ್ನೆ ಮೂಡುತ್ತದೆ. ಹಾಗಾದರೆ ಪಿಂಚಣಿ, ಕನಿಷ್ಠ ಪಿಂಚಣಿ ಅಲ್ಲದೆ ಕುಟುಂಬ ಪಿಂಚಣಿ 1–4–2024 ರಲ್ಲಿ ಜಾರಿಗೆ ಬಂದಾಗ ತುಟ್ಟಿಭತ್ಯೆ ಇಲ್ಲದೆ ಪಿಂಚಣಿ ಮಾತ್ರವೇ ಸಿಗುತ್ತದೆ. ಆದ್ದರಿಂದ, ನಾವು ನೋಡಿದ ಉದಾಹರಣೆಯಲ್ಲಿ, ಮುಂದೆ ಬರುವ ಪಿಂಚಣಿಯಲ್ಲಿ ಶೇ.57 ಹೆಚ್ಚುವರಿಯಾಗಿ ಸಿಗುವುದಿಲ್ಲ. ಕನಿಷ್ಠ ಕುಟುಂಬ ಪಿಂಚಣಿ ಕೇವಲ ರೂ.6000 ಮಾತ್ರ ಸಿಗುತ್ತದೆ. ಅದಕ್ಕಾಗಿಯೇ ನಾವು ಏಕೀಕೃತ ಪಿಂಚಣಿ ಯೋಜನೆ(ಯುಪಿಎಸ್)ಯು ಉತ್ತಮವಾದ ಪಿಂಚಣಿ ಅಲ್ಲ ಎಂದು ಹೇಳುತ್ತೇವೆ. ಹಳೆಯ ಪಿಂಚಣಿ ಯೋಜನೆ (OPS) ಉತ್ತಮವಾಗಿದೆ ಎಂದು ಹೇಳುತ್ತೇವೆ.

ಗ್ರಾಚ್ಯುಟಿ

ಗ್ರಾಚ್ಯುಟಿಯು ಒಪಿಎಸ್ ನಲ್ಲಿರುವಂತೆಯೇ ಎನ್‌ಪಿಎಸ್ ಮತ್ತು ಯುಪಿಎಸ್ ನಲ್ಲಿಯೂ ಸಹ ಗ್ರಾಚ್ಯುಟಿ ನಿಯಮಗಳ ಪ್ರಕಾರ ಲಭ್ಯವಿದೆ. 5 ವರ್ಷಗಳ ಸೇವೆ ಪೂರ್ಣಗೊಂಡ ನಂತರ, ಪ್ರತಿ ವರ್ಷದ ಸೇವೆಗೆ ಅರ್ಧ ತಿಂಗಳ ಮೂಲ ವೇತನ ಮತ್ತು ತುಟ್ಟಿಭತ್ಯೆ ಸೇರಿಸಿ ಲೆಕ್ಕಹಾಕಲಾಗುತ್ತದೆ. ಗರಿಷ್ಠ 16.5 ತಿಂಗಳ ವೇತನ ಗ್ರಾಚ್ಯುಟಿಯಾಗಿ ಸಿಗುತ್ತದೆ. ಈಗ ಗರಿಷ್ಠ 25 ಲಕ್ಷ ರೂ.

ಲಂಬ್ಸಮ್ (ಸಗಟು) ಎಂಬ ಒಟ್ಟು ಮೊತ್ತ

ನೀವು ನಿವೃತ್ತಿ ವಯಸ್ಸನ್ನು ತಲುಪಿದಾಗ ನಿವೃತ್ತಿ ಹೊಂದಿದರೆ, ನಿಮ್ಮ ವೈಯಕ್ತಿಕ ಖಾತೆಯಲ್ಲಿ ಇರುವ 100 ಪ್ರತಿಶತದ ಪಿಂಚಣಿ ಮೊತ್ತವನ್ನು ಬಿಟ್ಟುಕೊಟ್ಟರೆ ಮಾತ್ರ ನೀವು ಈ ಮೊತ್ತವನ್ನು ಪಡೆಯುತ್ತೀರಿ. 6 ತಿಂಗಳ ಸೇವಾವಧಿಗೆ, ನಿಮ್ಮ ಕೊನೆಯ ತಿಂಗಳ ಮತ್ತು ತುಟ್ಟಿಭತ್ಯೆ ಸೇರಿಸಿ ಬರುವ ಮೊತ್ತದ ಹತ್ತನೇ ಒಂದು ಭಾಗ ಅಂದರೆ, ಶೇ. 10ರಷ್ಟು ಸಗಟು ಮೊತ್ತವನ್ನು ನೀಡಲಾಗುತ್ತದೆ. ಇದು ಗ್ರಾಚ್ಯುಟಿ ಅಲ್ಲ. ಒಂದು ವರ್ಷಕ್ಕೆ ಶೇ.20 ಎಂಬ ಲೆಕ್ಕದಲ್ಲಿ 25 ವರ್ಷಗಳ ಸೇವಾವಧಿ ಮುಗಿಸಿದವರಿಗೆ 5 ತಿಂಗಳ ವೇತನ ಸಿಗುತ್ತದೆ. 10 ವರ್ಷ ಪೂರೈಸಿದರೆ 2 ತಿಂಗಳ ವೇತನ ಸಿಗುತ್ತದೆ. ಇದು ಮೀನು ಹಿಡಿಯುವ ಗಾಳಕ್ಕೆ ಹುಳು ಸಿಕ್ಕಿಸಿದಂತೆ.

ಕಮ್ಯುಟೇಶನ್

ಹಳೆಯ ಪಿಂಚಣಿ ಯೋಜನೆ(OPS)ಯ ಮಾಸಿಕ ಪಿಂಚಣಿಯಲ್ಲಿ ಶೇ. 40ರಂತೆ 12 ವರ್ಷಗಳಿಗೆ ಲೆಕ್ಕ ಹಾಕಿ ನಿವೃತ್ತಿಯ ಮೊದಲು ಪಡೆಯಬೇಕಾದ ಕಮ್ಯುಟೇಶನ್ ಇದೆ. 15 ವರ್ಷಗಳ ನಂತರ ಆ 40 ಶೇಕಡಾ ಮೊತ್ತ ಹಿಂತಿರುಗಿ ಬರುತ್ತದೆ. ಇದು ಎನ್‌ಪಿಎಸ್ ನಲ್ಲಿಯೋ ಅಥವಾ ಯುಪಿಎಸ್ ನಲ್ಲಿಯೋ ಸಿಗುವುದಿಲ್ಲ.

ಹೆಚ್ಚುವರಿ ಪಿಂಚಣಿ (Additional pension)

ಹಳೆಯ ಯೋಜನೆಯಲ್ಲಿ (OPS) 80 ವರ್ಷಕ್ಕಿಂತ ಹೆಚ್ಚು ಬದುಕಿದರೆ ಹೆಚ್ಚುವರಿ ಪಿಂಚಣಿ ಇದೆ. 80 ವರ್ಷ ದಾಟಿದರೆ ಶೇ.20 ಕೊಡಬಹುದು; 85 ವರ್ಷ ದಾಟಿದರೆ ಶೇ.30 ಕೊಡಬಹುದು; 90 ವರ್ಷ ದಾಟಿದರೆ ಶೇ.40 ಕೊಡಬಹುದು; 95 ವರ್ಷ ದಾಟಿದರೆ ಶೇ.50 ಕೊಡಬಹುದು; 100 ವರ್ಷ ದಾಟಿದರೆ ಶೇ.100 ರಷ್ಟು ಕೊಡಬಹುದು; ಹೆಚ್ಚುವರಿ ಪಿಂಚಣಿಗೆ ಕೂಡ ಅದೇ ಶೇಕಡಾವಾರು ತುಟ್ಟಿಭತ್ಯೆ ಅನ್ವಹಿಸುತ್ತದೆ. ಇದು ಎನ್‌ಪಿಎಸ್‌ನಲ್ಲಿ ಅಥವಾ ಯುಪಿಎಸ್ ನಲ್ಲಿ ಇಲ್ಲ.

ವೇತನ ಆಯೋಗದಲ್ಲಿ ಹೆಚ್ಚಳ

ಒಪಿಎಸ್ ನಲ್ಲಿ ಪ್ರತಿ ವೇತನ ಆಯೋಗವು ಜಾರಿಗೆ ಬಂದಾಗಲೂ ಪಿಂಚಣಿ ಮತ್ತು ಕನಿಷ್ಠ ಪಿಂಚಣಿ ಹೆಚ್ಚಾಗುತ್ತದೆ. ಎನ್‌ಪಿಎಸ್ ಅಥವಾ ಯುಪಿಎಸ್ ನಲ್ಲಿ ಇಂತಹ ಯಾವುದೇ ಖಾತರಿ ಇಲ್ಲ. ಯುಪಿಎಸ್ ನಲ್ಲಿಯೂ ನಮ್ಮ ಪಿಂಚಣಿ ಖಾತೆಯ ಹಣವನ್ನು ಮಾರುಕಟ್ಟೆಯಲ್ಲಿ ವಿವಿಧ ರೀತಿಯಲ್ಲಿ ಹೂಡಿಕೆ ಮಾಡಲಾಗುತ್ತದೆ. ಮಾರುಕಟ್ಟೆಯಲ್ಲಿ ಎಷ್ಟೇ ಕುಸಿತ ಕಂಡರೂ, ಒಪ್ಪಿತ ಪಿಂಚಣಿ ಖಚಿತವಾಗಿದ್ದರೂ ಪಿಂಚಣಿ ಸಾಕಷ್ಟು ಇರುವುದಿಲ್ಲ ಎಂಬುದು ನಿಜವೇ ಆಗಿರುತ್ತದೆ. ಹಾಗೆಯೇ ಹಲವು ಚಳುವಳಿ, ಹೋರಾಟಗಳ ಫಲವಾಗಿ ಒಪಿಎಸ್ ಸೌಲಭ್ಯಗಳನ್ನು ಪಡೆದುಕೊಳ್ಳಲಾಗಿದೆ. ಆದ್ದರಿಂದ, ಹಳೆಯ ಪಿಂಚಣಿ ಯೋಜನೆ ಸಾಕು, ಅದು ಉತ್ತಮವಾಗಿದೆ. ಇದರಲ್ಲಿ ತುಟ್ಟಿಭತ್ಯೆಯನ್ನು ಸಂಪೂರ್ಣವಾಗಿ ಸಂಯೋಜಿಸಲಾಗಿದೆ. ಖಾತರಿಪಡಿಸಲಾಗಿದೆ. ಕುಟುಂಬ ಪಿಂಚಣಿಯೂ ಇದೆ. ವಾರಸುದಾರರಿಗೂ ಇದೆ. ಕನಿಷ್ಠ ಪಿಂಚಣಿ ನ್ಯಾಯಯುತವಾಗಿದೆ. ಕಮ್ಯುಟೇಶನ್ ಇದೆ. ವಯಸ್ಸಿನೊಂದಿಗೆ ಹೆಚ್ಚಾಗುತ್ತದೆ. ವೇತನ ಆಯೋಗದಲ್ಲಿ ಹೆಚ್ಚಳವಾಗುತ್ತದೆ.

ಮುಂಚಿತವಾಗಿ ನಿವೃತ್ತಿ ಪಡೆದವರು

1–1–2004 ರ ನಂತರ ಮತ್ತು 1–4–2025 ರ ಮೊದಲು ನಿವೃತ್ತರಾದರೆ, ಅವರು 10 ವರ್ಷಗಳ ಸೇವಾವಧಿಯನ್ನು ಪೂರ್ಣಗೊಳಿಸಿದ್ದರೆ ಅವರಿಗೆ ಯುಪಿಎಸ್ ಅನ್ವಯಿಸುತ್ತದೆ. ಅವರು ಪಡೆದ ಪಿಂಚಣಿ ಖಾತೆಯಲ್ಲಿರುವ ಮೊತ್ತವನ್ನು ಅವರಿಗೆ ಪಾವತಿಸಬೇಕಾದ ಬಾಕಿ ಮೊತ್ತದಿಂದ ಕಡಿತ ಮಾಡಲಾಗುವುದು ಎನ್ನುತ್ತದೆ ಕೇಂದ್ರ ಸರ್ಕಾರದ ವೆಚ್ಚ ಇಲಾಖೆಯ ಸಂದೇಶ. ಅವರುಗಳಿಗೂ ಒಪಿಎಸ್ ಜಾರಿಯಾಗಬೇಕು ಎಂಬುದೇ ನ್ಯಾಯ.

ಷೇರು ಮಾರುಕಟ್ಟೆ ಹೂಡಿಕೆ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ 99 ಲಕ್ಷ ಉದ್ಯೋಗಿಗಳು ಹೊಸ ಪಿಂಚಣಿಯಲ್ಲಿದ್ದಾರೆ. ಅವರ ಹಣ ರೂ. 10.5 ಲಕ್ಷ ಕೋಟಿ ಷೇರು ಮಾರುಕಟ್ಟೆ ಆಟದಲ್ಲಿ ತೊಡಗಿಸಬೇಕು; ಕಾರ್ಪೊರೇಟ್‌ಗಳೂ ಲಾಭ ಪಡೆಯಬೇಕು; ಖಾತರಿ ಪಿಂಚಣಿ ಕೊಟ್ಟ ಹಾಗೆಯೂ ಇರಬೇಕು. ಅದೇ ಕೇಂದ್ರ ಸರ್ಕಾರದ 'ಏಕೀಕೃತ ಪಿಂಚಣಿ ಯೋಜನೆ' ನಾಯಿಯ ಬಾಲ ಕತ್ತರಿಸಿ ನಾಯಿಗೆ ಸೂಪ್ ಮಾಡಿಕೊಟ್ಟಂತೆ ನಮ್ಮ ಹಣದಲ್ಲಿ 100 ಪರ್ಸೆಂಟ್ ತೆಗೆದುಕೊಂಡು ನಮಗೇ ಪಿಂಚಣಿ ಕೊಡುತ್ತಾರೆ! ಇದನ್ನು ಒಪ್ಪಲು ಸಾಧ್ಯವಿಲ್ಲ.

ಕಾರ್ಪೊರೇಟ್‌ಗಳಿಗೆ ಹಣ ಮತ್ತು ವಿತ್ತೀಯ ಕೊರತೆ

"ಸರ್ಕಾರದಿಂದ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲು ಸಾಧ್ಯವಿಲ್ಲ, ಏಕೆಂದರೆ ವಿತ್ತೀಯ ಕೊರತೆ ಇದೆ" ಎಂದು ಕೆಲವು ತಜ್ಞರು ವಾದಿಸುತ್ತಾರೆ. ಅದೂ ಸರಿಯೇ. ವಿತ್ತೀಯ ಕೊರತೆಯು ಶೇ.3 ರಷ್ಟಿರಬೇಕು ಎಂದು ನಿರ್ಧರಿಸಿದ ನಂತರ ಈಗ ಅದನ್ನು ಶೇ. 5.9ಕ್ಕೆ ಏಕೆ ಏರಿಸಲಾಗಿದೆ? ಹೇಗೆ?

ವಿತ್ತೀಯ ಕೊರತೆ ಇರುವಾಗಲೇ, ಕಾರ್ಪೊರೇಟ್ ತೆರಿಗೆಯನ್ನು ಶೇ. 30ರಿಂದ ಶೇ. 22ಕ್ಕೆ ಮತ್ತು ಹೊಸ ಉದ್ಯಮಿಗಳಿಗೆ ಶೇ. 15ಕ್ಕೆ ಇಳಿಸುವ ಮೂಲಕ, 1.5 ಲಕ್ಷ ಕೋಟಿ ರೂ.ಗಳ ತೆರಿಗೆ ಆದಾಯವನ್ನು ಏಕೆ ಕಳೆದುಕೊಂಡಿತು? 17 ಲಕ್ಷ ಕೋಟಿ ರೂಪಾಯಿಗಳ ಕಾರ್ಪೊರೇಟ್ ಗಳ ಸಾಲ ಮನ್ನಾ ಮಾಡಿದ್ದೇಕೆ? ಜನರ ತೆರಿಗೆ ಹಣದಿಂದ ವಿತ್ತೀಯ ಕೊರತೆಯನ್ನು ಸರಿದೂಗಿಸಿದವರು ಯಾರು?

ಉತ್ಪಾದನೆಯ ಉತ್ತೇಜನದ ಹೆಸರಿನಲ್ಲಿ ಕಾರ್ಪೊರೇಟ್‌ಗಳಿಗೆ 2 ಲಕ್ಷ ಕೋಟಿ ರೂಪಾಯಿ ನೀಡಿದವರು ಯಾರು? 500 ಕಾರ್ಪೊರೇಟ್ ಗಳಿಗೆ ಹೊಸ ಉದ್ಯೋಗಿಗಳನ್ನು ನೇಮಿಸಿಕೊಳ್ಳಲು, ಅವರ ಸಂಬಳ 5000 ರೂ.ಗಳನ್ನು ನಾವೇ ಕೊಡುತ್ತೇವೆ ಎಂದು 2 ಲಕ್ಷ ಕೋಟಿ ರೂಪಾಯಿಗಳನ್ನು ಈ ಬಜೆಟ್ ನಲ್ಲಿ ಮೀಸಲಿಟ್ಟವರು ಯಾರು? "5 ಲಕ್ಷ ಕೋಟಿ ಡಾಲರ್ ಆರ್ಥಿಕತೆ" "ಸುವರ್ಣ ಭಾರತ" ಎಂಬುದು ಕಾರ್ಪೊರೇಟ್ ಗಳಿಗೆ ಮಾತ್ರವಲ್ಲವೇ? ತಮ್ಮ ಜೀವಿತಾವಧಿಯ ಕಾಲದಲ್ಲಿ ರಾಷ್ಟ್ರಕ್ಕಾಗಿ ದುಡಿದವರಿಗೆ ಇಲ್ಲವೇ? ದುಡಿಯುವ ಜನರಿಗಾಗಿ ಅಲ್ಲವೇ?

ಯಾವುದೇ ಪಿಂಚಣಿ ಇಲ್ಲದ 10 ಕೋಟಿ ಹಿರಿಯ ನಾಗರಿಕರಿಗೆ ತಿಂಗಳಿಗೆ ರೂ. 3000 ಪಿಂಚಣಿ ಏಕೆ ನೀಡಬಾರದು? ಇದಕ್ಕೆ ಒಟ್ಟು ಕೇವಲ 3 ಲಕ್ಷ ಕೋಟಿ ರೂ. ವೆಚ್ಚವಾಗಲಿದೆ. ಇದು ಒಟ್ಟು ದೇಶೀಯ ಉತ್ಪನ್ನದ (ಜಿಡಿಪಿ) ಶೇಕಡಾ 1.8 ಮಾತ್ರ. ಇಪಿಎಸ್ ಪಿಂಚಣಿದಾರರಿಗೆ ಯಾವುದೇ ಕನಿಷ್ಠ ಪಿಂಚಣಿ 9000 ರೂಪಾಯಿ ಏಕೆ ನೀಡಬಾರದು?

ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ದೇಶವ್ಯಾಪಿ ಮುಷ್ಕರ ನಡೆಸಬೇಕು. ಪಂಜಾಬ್ ಮತ್ತು ಹರಿಯಾಣ ಕಾರ್ಮಿಕರು ಬೃಹತ್ ಮುಷ್ಕರ ಆರಂಭಿಸಿದ್ದಾರೆ. ಹೋರಾಡಿದರೆ ಗೆಲುವು ಅಸಾಧ್ಯವೇನಲ್ಲ. ಎಲ್ಲರೂ ಬೀದಿಗಿಳಿದು ಸತತ ಹೋರಾಟ ನಡೆಸಿದರೆ ಗೆಲುವು ನಿಶ್ಚಿತ.

ಕೃಪೆ: ತೀಕದಿರ್ (ಕನ್ನಡಕ್ಕೆ: ಸಿ.ಸಿದ್ದಯ್ಯ)

ಅನಿಯಂತ್ರಿತ ದೌರ್ಜನ್ಯಗಳು.... ಬದಲಾಗದ ಧೋರಣೆಗಳು ಬದಲಿಸಬೇಕು ಮನೋಭಾವ... ಪುಟ 9 ರಿಂದ

ವರ್ಗ ರಾಜಕಾರಣವೂ ಇರುವುದನ್ನು ನಾವು ಗಂಭೀರವಾಗಿ ಪರಿಗಣಿಸಬೇಕು. ನಿರ್ಭಯಾ, ಅಭಯಾ ಮುಂತಾದ ಪ್ರಕರಣಗಳಿಗೆ ಕಿತ್ತೆದ್ದು ಪ್ರತಿಭಟಿಸಿದ ಆಕ್ರೋಶಕ್ಕೆ ತಲೆಬಾಗುತ್ತಲೇ ನನ್ನೊಳಗೆ ಒಂದು ಗಂಭೀರ ಪ್ರಶ್ನೆ ಎದ್ದಿದೆ. ಅದೆಂದರೆ ಒಂದೊಮ್ಮೆ ಅದೇ ಆರ್.ಜಿ.ಕರ್ ಆಸ್ಪತ್ರೆಯಲ್ಲಿ ಆಯಾ ಒಬ್ಬಳು ಅಥವಾ ಅಲ್ಲಿನ ಕಸ ಗುಡಿಸುವ ಒಬ್ಬ ಮಹಿಳೆಯ ಮೇಲೆ ಇಂಥಹ ಆಕ್ರಮಣ ನಡೆದಿದ್ದರೆ ಆಗಲೂ ಮಧ್ಯಮವರ್ಗ ಇಷ್ಟೇ ತೀವ್ರವಾದ ಪ್ರತಿರೋಧ ಅಥವಾ ಪ್ರತಿಕ್ರಿಯೆ ವ್ಯಕ್ತಪಡಿಸುವುದೇ? ಅಥವಾ ಮಧ್ಯಮ, ಮೇಲ್ಮಧ್ಯಮ ವರ್ಗದ ಸಂದರ್ಭಕ್ಕೆ ಸ್ಪಂದಿಸುವ ರೀತಿಯಲ್ಲಿ ಅಂಚಿಗೆ ತಳ್ಳಲ್ಪಟ್ಟ ಸಮೂಹದ ಮೇಲೆ ನಡೆಯುವ ಅತ್ಯಂತ ಬರ್ಭರ ಕ್ರೌರ್ಯ, ದೌರ್ಜನ್ಯಗಳಿಗೆ ಯಾಕೆ ಪ್ರತಿಕ್ರಿಯೆ ಸಿಗುವುದಿಲ್ಲ? ಅವು ಕೇವಲ ಮಹಿಳಾ ಮತ್ತು ಮಹಿಳಾ ಪರ ಸಂಘಟನೆಗಳು, ವ್ಯಕ್ತಿಗಳ ಕರ್ತವ್ಯವೆಂಬಂತೆ ಕಾಣ ಸಿಗುತ್ತವೆ. ಇದೂ ಈ ಸಮಾಜದ ಪ್ರಜ್ಞೆಗೆ ದಕ್ಕಲೇ ಬೇಕಾದ ಅತಿ ಮುಖ್ಯ ಅಂಶ. ಪುರುಷ ಪ್ರಧಾನ ಮೌಲ್ಯಗಳನ್ನು ಪೋಷಿಸುವ, ಹೆಣ್ಣಿನ ಮೇಲೆ ತನ್ನ ಅಧಿಕಾರದ ಮುದ್ರೆಯನ್ನು ಗಟ್ಟಿಗೊಳಿಸಲು ಅತ್ಯಾಚಾರವನ್ನು ಶಸ್ತ್ರವನ್ನಾಗಿ ಬಳಸುವ ಗಂಡಾಳ್ವಿಕೆಯ ಮನೋಭಾವಕ್ಕೆ ಅಂತ್ಯ ಹಾಡುವುದು ಯಾವಾಗ?

ಇದೇ ಹೊತ್ತಿಗೆ ಚಿತ್ರರಂಗದ ಒಳಗೊಂದು ಮತ್ತೆ ಸುನಾಮಿಯೆದ್ದಿದೆ ಎಂಬಂತೆ ಚರ್ಚೆ ಪ್ರಾರಂಭವಾಗಿದೆ. ಮಲೆಯಾಳಂ ಚಿತ್ರರಂಗದಲ್ಲಿ 2017 ರಲ್ಲಿ ನಡೆದ ಒಂದು ಘಟನೆ ಮತ್ತು ಅದರ ಬೆನ್ನಲ್ಲೇ 'ವಿಮೆನ್ ಇನ್ ಸಿನೆಮಾ ಕಲೆಕ್ಟೀವ್' ಹೆಸರಿನ ಸಂಘಟನೆಯ ಬೇಡಿಕೆಯೂ ಸೇರಿದಂತೆ ಜಸ್ಟೀಸ್ ಹೇಮಾ ಸಮಿತಿಯ ರಚನೆಯಾಗಿತ್ತು. ಮೂವರು ಸದಸ್ಯರ ಸಮಿತಿ ವಿಸ್ತಾರವಾದ ಮಾಹಿತಿ ಸಂಗ್ರಹಿಸಿ 2019ರಲ್ಲಿಯೇ ವರದಿ ಸಲ್ಲಿಸಿದೆ. ವರದಿಯ ವಿವರಗಳು ಈಗ ಸಾರ್ವಜನಿಕ ಚರ್ಚೆಗೆ ಒಳಪಟ್ಟಿದೆ. ಹಲವು ಸತ್ಯಗಳು ಹೊರಬರುತ್ತಿವೆ. 'ಅಮ್ಮ' (ಅಸೋಸಿಯೇಷನ್ ಆಫ್ ಮಲೆಯಾಳಂ ಮೂವಿ ಆರ್ಕ್ಟಸ್)ದ ಎಲ್ಲ ಪದಾಧಿಕಾರಿಗಳು ನೈತಿಕ ಹೊಣೆ ಹೊತ್ತು ರಾಜಿನಾಮೆಯೂ ಕೊಟ್ಟಾಯ್ತು. ಅದರ ಮುಖ್ಯ ಪದಾಧಿಕಾರಿಗಳ ಮೇಲೆಯೇ ಆರೋಪಗಳು, ದೂರುಗಳು ದಾಖಲಾಗಿವೆ. ಜನಪ್ರತಿನಿಧಿಗಳಾಗಿ ಆಯ್ಕೆಯಾದ ಸಿನಿಮಾ ನಟರೊಬ್ಬರ ಮೇಲೆಯೂ ದೂರು ದಾಖಲಾಗಿದೆ. ಕೇರಳ ಸರಕಾರ ವಿಶೇಷ ತನಿಖಾ ದಳವೊಂದನ್ನು ರಚಿಸಿ ಸೂಕ್ತ ತನಿಖೆಗೆ ಆದೇಶಿಸಿದೆ.

ಅದನ್ನು ಸ್ವಾಗತಿಸೋಣ. ಆದರೆ ಅದೇ ವೇಳೆಗೆ 2017–18ರಲ್ಲಿ ದೇಶದ ಹಲವೆಡೆ ಎದ್ದ #ಮೀಟೂಗೆ ಪ್ರತಿಧ್ವನಿಯಾಗಿ ಕರ್ನಾಟಕದಲ್ಲಿಯೂ ಧ್ವನಿ ಸೇರಿಸಿದವರ ಪರಿಸ್ಥಿತಿ ಏನಾಯಿತು. ಸಿನಿಮೋದ್ಯಮದಲ್ಲಿ ಇರುವ ಎಷ್ಟು ಜನ ಬೆಂಬಲಿಸಿದರು ಅಥವಾ ಅಂದಿನ, ಇಂದಿನ, ನಾಳಿನ ಸರಕಾರಗಳ ಪ್ರತಿಕ್ರಿಯೆ?? ಈಗ ತೆಲಂಗಾಣದಿಂದ ಸದ್ದು ಕೇಳುತ್ತಿದೆ. 2019ರಲ್ಲಿ ಅಸ್ತಿತ್ವಕ್ಕೆ ಬಂದ 'ವಾಯ್ಸ್ ಆಫ್ ವಿಮೆನ್' ಹೆಸರಿನ ವೇದಿಕೆ ಆ ವರ್ಷವೇ ರಚನೆಯಾದ ಉಪ ಸಮಿತಿಯೊಂದರ ವರದಿಯನ್ನು ಬಹಿರಂಗಗೊಳಿಸಿ ಕ್ರಮ ಕೈಗೊಳ್ಳಲು ಮುಂದಾಗಲು ಒತ್ತಾಯಿಸಿದ್ದಾರೆ. ಕರ್ನಾಟಕದಲ್ಲಿ ಮತ್ತೆ ಫೈರ್–ಸಿನಿಮಾರಂಗದಲ್ಲಿ ಇರುವವರ ಹಕ್ಕುಗಳ ಮತ್ತು ಸಮಾನತೆಗಾಗಿ ಒತ್ತಾಯಿಸಲು ಅಸ್ತಿತ್ವಕ್ಕೆ ಬಂದ ವೇದಿಕೆಯು ರಾಜ್ಯದ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಸಮಿತಿಯೊಂದರ ರಚನೆಗೆ ಒತ್ತಾಯಿಸಿದ್ದಾರೆ. ಸಿನಿಮಾ ರಂಗವೂ ಒಳಗೊಂಡಂತೆ ಎಲ್ಲ ಕ್ಷೇತ್ರಗಳಲ್ಲಿ ಅತ್ಯಂತ ಸಹಜವೆಂಬಂತೆ ನಡೆದುಬಿಡುವ ಅಥವಾ, ಮಹಿಳೆಯರು ಅಸಹನೀಯ ಎನಿಸಿದರೂ ಮೌನವಾಗಿರುವ ಒತ್ತಡಕ್ಕೆ ಒಳಗಾಗುವ ಪರಿಸರವೇ ಸುತ್ತ ಇರುವಾಗ, ಯಾರನ್ನು ಹದ್ದುಬಸ್ತಿಗೆ ಒಳಪಡಿಸಬೇಕು. ಅಧಿಕಾರದಲ್ಲಿದ್ದು ಅಂತಹ ಕ್ರಮಕ್ಕೆ ಮುಂದಾಗಬಹುದಾದವರೇ ಬಹುತೇಕ ಅಪರಾಧ ಎಸಗುವ, ಎಸಗಿದವರೂ ಆಗಿರುವವರೇ ಇರುವುದೂ ಕೂಡ ನಿಯಂತ್ರಣದ ಅಥವಾ ಸೂಕ್ತ ಕ್ರಮದ ದಾರಿಗೆ ಅಡ್ಡಗೋಡೆಗಳಾಗುತ್ತವೆ.

ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳನ್ನು ಕಾನೂನು ಸುವ್ಯವಸ್ಥೆ ಎಂದು ನೋಡದೇ, ಮಹಿಳೆಯರ ಘನತೆಯ ಬದುಕಿನ ಹಕ್ಕಿನ ಉಲ್ಲಂಘನೆ ಎಂದು ಪರಿಗಣಿಸಬೇಕು. ಮತ್ತು ಪುರುಷ ಪ್ರಧಾನ ಆಲೋಚನೆಯ ಪಾಳೆಯಗಾರಿ ಮೌಲ್ಯಗಳ ಮುಂದುವರೆದ ಭಾಷೆಯಾಗಿ ಮಹಿಳೆಯರ ರಕ್ಷಣೆ ಎಂಬ ಶಬ್ದ ಕಿವಿಗೆ ಬೀಳುತ್ತಲೇ ಇರುತ್ತದೆ. ಇಲ್ಲ ಸಮಾಜ ತನ್ನ ಭಾಷೆ, ಭಾವ ಎಲ್ಲವನ್ನೂ ಬದಲಿಸಿಕೊಳ್ಳಬೇಕು. ಅದೆಂದರೆ ಮಹಿಳೆಯರಿಗೆ ಬೇಕಿರುವುದು ಸುರಕ್ಷತೆಯ ವಾತಾವರಣ, ಯಾರ ರಕ್ಷಣೆಯಲ್ಲ. ಕಟ್ಟುಪಾಡಿಗೆ ಅಥವಾ ನಿಯಂತ್ರಣಕ್ಕೆ ಒಳಪಡಿಸಬೇಕು ಅಪರಾಧ ಎಸಗುವವರನ್ನು, ಅತ್ಯಾಚಾರ ನಡೆದರೆ, ದೌರ್ಜನ್ಯ ನಡೆದರೆ ಮಹಿಳೆಯ ಮೇಲೆ, ಬಾಲಕಿಯ ಮೇಲೆ ಇತ್ಯಾದಿ ಭಾಷೆಯ ಬದಲು ಇಂತಹ ಪುರುಷ/ರು ಅತ್ಯಾಚಾರವೆಸಗಿದ್ದಾನೆ/ರೆ ಎಂದು ಪ್ರಚಾರ ಮಾಡುವುದೂ ಒಂದು ಹೆಜ್ಜೆ. ಈ ನಿಟ್ಟಿನಲ್ಲಿ ಸಮಾಜ ಗಂಭೀರವಾಗಿ ಹೆಜ್ಜೆ ಇಡಬೇಕು. ಅಧಿಕಾಸ್ಥರನ್ನು, ನ್ಯಾಯಾಂಗ ವ್ಯವಸ್ಥೆಯನ್ನು ಈ ಎಚ್ಚರಕ್ಕೆ ತರುವ ಹೊಣೆ ಇಡೀ ಸಮಾಜದ್ದಾಗಬೇಕು. ●




ರಕ್ತ ಪಿಪಾಸು ಪಶ್ಚಿಮದ ಉದಯ–ಭಾಗ 2

ಪಶ್ಚಿಮದ ಉದಯದ ಕಥನ: ಬೆಳ್ಳಿ, ಗುಲಾಮರು ಮತ್ತು ಸಕ್ಕರೆ

ಪ್ರಬೀರ್ ಪುರಕಾಯಸ್ಥ

ಕತ್ತಲ ಯುಗದಲ್ಲಿದ್ದ ಯುರೋಪಿನ ಕೇವಲ ಎಂಟು ದೇಶಗಳು ಕಳೆದ ಐದು ನೂರು ವರ್ಷಗಳಲ್ಲಿ ವಿಶ್ವದ ಶೇ. 68ರಷ್ಟು ಭಾಗವನ್ನು ಹೇಗೆ ತಮ್ಮ ವಸಾಹತುವನ್ನಾಗಿ ಮಾಡಿಕೊಂಡವು? ಅವರು ನಮ್ಮನ್ನು ನಂಬಿಸಿರುವ ಹಾಗೆ ಯುರೋಪಿನಲ್ಲಿ ಬಂಡವಾಳಶಾಹಿಯ ಇತಿಹಾಸವು ಬಂದದ್ದು ಅಲ್ಲಿಯ ಸಾಮಾಜಿಕ ಜ್ಞಾನೋದಯದಿಂದ, ವೈಜ್ಞಾನಿಕ ಕ್ರಾಂತಿಯಿಂದ ಅಥವ ಕೈಗಾರಿಕಾ ಕ್ರಾಂತಿಯಿಂದ ಅಲ್ಲ. ಮಾರ್ಕ್ಸ್ ಹೇಳುವಂತೆ, ಆ ಇತಿಹಾಸವು ಅದರ ಪ್ರತಿ ರಂಧ್ರದಿಂದ ತೊಟ್ಟಿಕ್ಕುವ ರಕ್ತದಿಂದ ಮತ್ತು ಬೆವರಿನಿಂದ ಬಂದಿದೆ. ಇದುವೇ ನಾವು ಮರೆತುಬಿಡಬೇಕೆಂದು ಅವರು ಬಯಸುವ ಇತಿಹಾಸ. ಈ ರಕ್ತಸಿಕ್ತ ಇತಿಹಾಸವನ್ನು ತಿಳಿಯಬೇಕಾಗಿರುವುದು, ಯುರೋಪಿನ ಕೇವಲ ಬೆರಳೆಣಿಕೆಯ ದೇಶಗಳು ಇಡೀ ಜಗತ್ತಿನ ಮೇಲೆ ಪ್ರಾಬಲ್ಯ ಹೊಂದಿದ ವಿದ್ಯಮಾನದ ಹಿಂದಿರುವ ಕಾರಣವೇನು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿರುವುದು ಕೇವಲ ಚಾರಿತ್ರಿಕ ಕಾರಣಗಳಿಗಾಗಿ ಮಾತ್ರವಲ್ಲ, ವಸಾಹತುಶಾಹಿಗೆ ನಾವು ಮರು–ವಶವಾಗದಂತೆ ನೋಡಿಕೊಳ್ಳುವ ಸಲುವಾಗಿಯೂ ಇದು ಅಗತ್ಯ ಎನ್ನುತ್ತಾರೆ 'ನ್ಯೂಸ್‌ಕ್ಲಿಕ್'ನ ಮುಖ್ಯ ಸಂಪಾದಕರಾಗಿರುವ ಪ್ರಬೀರ್ ಪುರಕಾಯಸ್ಥ, ಯುರೋಪಿಯನ್ ವಸಾಹತುಶಾಹಿಯ ಮೂಲದ ಅನ್ವೇಷಣೆ ನಡೆಸಿರುವ ಈ ಲೇಖನದ ಮೊದಲ ಭಾಗ 'ಜನಶಕ್ತಿ' ಸಂಚಿಕೆ 35 ರಲ್ಲಿ ಪ್ರಕಟವಾಗಿತ್ತು. ಅದರ ಮುಂದುವರೆದ ಭಾಗ ಇಲ್ಲಿದೆ.

ಅಮೆರಿಕಗಳೊಂದಿಗಿನ ಪಶ್ಚಿಮದ ಮುಖಾಮುಖಿಯ ಪರಿಣಾಮವು ಅಲ್ಲಿದ್ದ ಮೂಲ ನಿವಾಸಿಗಳಿಗೆ ವಿನಾಶಕಾರಿಯಾಗಿತ್ತು. "ಅನ್ವೇಷಣೆ"ಯ ಮೊದಲು ಅಮೆರಿಕ ಖಂಡಗಳ ಜನಸಂಖ್ಯೆಯು 20 ಲಕ್ಷದಿಂದ 10 ಕೋಟಿ ನಡುವೆ ಇದ್ದಿರಬಹುದೆಂದು ಬೇರೆ ಬೇರೆ ಅಂದಾಜುಗಳು ಹೇಳುತ್ತವೆ. ನರಮೇಧದ ಅಂಕಿಅಂಶಗಳು, ಆಗಿನ ಅಮೆರಿಕಗಳ ಸ್ಥಳೀಯ ಜನಸಂಖ್ಯೆಯ ಬಗ್ಗೆ ಮಾಡಲಾದ ಬೇರೆ ಬೇರೆ ಅಂದಾಜುಗಳ ಮೇಲೆ ಮಾತ್ರವಲ್ಲದೆ, ನರಮೇಧದಲ್ಲಿ ಬಲಿಯಾದ ಎಷ್ಟು ಸಂಖ್ಯೆಯ ಜನರನ್ನು ಎಣಿಕೆಯಿಂದ ಹೊರಗಿಡಬೇಕು ಎಂಬುದರ ಮೇಲೆ ಅವಲಂಬಿತವಾಗಿದೆ. ಈ ಲೆಕ್ಕಾಚಾರದಲ್ಲಿ, ಸ್ಥಳೀಯ ಸಮಾಜಗಳನ್ನು ಮತ್ತು ಅವರ ಉತ್ಪಾದನಾ ಆಧಾರವನ್ನು ನಾಶಪಡಿಸಿದುದರಿಂದ, ರೋಗಗಳಿಂದ ಸತ್ತವರನ್ನು ಸೇರಿಸುತ್ತೇವೆಯೇ? ಪೋಟೋಸಿಯ ಬೆಳ್ಳಿ ಗಣಿಗಳಲ್ಲಿ ಮರಣಹೊಂದಿದ (ಗಮನಾರ್ಹ ಸಂಖ್ಯೆಯ ಸ್ಥಳೀಯರು) ಅಂದಾಜು 2–8 ಮಿಲಿಯನ್ ಜನರನ್ನು ನಾವು ಹೇಗೆ ಲೆಕ್ಕ ಹಾಕುತ್ತೇವೆ?

ಈ ವಿಷಯಗಳನ್ನು ಇತರರಿಗೆ ಬಿಟ್ಟು, ಬೊಲಿವಿಯಾದ ಪೊಟೋಸಿಯಿಂದ ಪ್ರಾರಂಭವಾಗುವ ಗಣಿಗಳಿಂದ ಮೊದಲ ಜಾಗತಿಕ ಸರಕು ಎನಿಸಿದ ಬೆಳ್ಳಿಯನ್ನು ಹೇಗೆ ಗಣಿಗಾರಿಕೆ ಮಾಡಲಾಯಿತು ಎಂಬುದಕ್ಕೆ ನಾವು ಹಿಂತಿರುಗೋಣ. ಪೊಟೋಸಿ ಗಣಿಯನ್ನು, ಪುರುಷರನ್ನು ತಿನ್ನುವ ಪರ್ವತ ಎಂದು ಕರೆಯಲಾಗುತ್ತಿತ್ತು. ಗುಲಾಮಗಿರಿಗೆ ಒಳಗಾದ ಸ್ಥಳೀಯ ಜನರನ್ನು ಗಣಿಗಾರಿಕೆಯ ಕ್ರೂರ ಪರಿಸ್ಥಿತಿಗಳು, ಗಂಟೆ ಗಂಟೆಗಟ್ಟಲೆ ನೆಲದಡಿಯಲ್ಲಿ ಕಳೆದ ಸಮಯ, 14,000 ಅಡಿ ಎತ್ತರದಲ್ಲಿ ಅಗೆಯುವ ಕಷ್ಟ ಕೋಟಲೆಗಳು ಗಣಿಗಾರರನ್ನು ಹೇಳಲಾಗದ ಹಾನಿಗಳಿಗೆ ಒಳಪಡಿಸಿದವು. ಸ್ಪೇನಿಗರಿಗೆ ತೋಚಿದ ಪರಿಹಾರವೆಂದರೆ, ಆಫ್ರಿಕಾದಿಂದ ಗುಲಾಮರನ್ನು ಆಮದು ಮಾಡಿಕೊಳ್ಳುವುದು. ಟೋರ್ಡೆಸಿಲ್ಲಾಸ್ ಒಪ್ಪಂದದ ಪ್ರಕಾರ ಪೋರ್ಚುಗೀಸರಿಗೆ ಆಫ್ರಿಕಾವನ್ನು "ಹಂಚಿಕೆ" ಮಾಡಲಾಗಿತ್ತು. ಹಾಗಾಗಿ ಸ್ಪೇನ್, ಆಫ್ರಿಕಾದಿಂದ ಗುಲಾಮರನ್ನು ಪೂರೈಸುವ ಒಪ್ಪಂದವನ್ನು ಪೋರ್ಚುಗೀಸರಿಗೆ ನೀಡಿತು. ಇದನ್ನು ಕರಿಯರ ಒಪ್ಪಂದ (ಅಸಿಂಟೋ ಡಿ ನೀಗ್ರೋಸ್) ಎಂದು ಕರೆಯಲಾಯಿತು. ನಂತರ ಇದರ ಪ್ರಯೋಜನವನ್ನು ಜಿನೋವಾದ ವ್ಯಾಪಾರಿಗಳು, ಡಚ್ಚರು, ಫ್ರೆಂಚರು ಮತ್ತು ಬ್ರಿಟಿಷರು ಪಡೆದುಕೊಂಡರು.

ಪೋರ್ಚುಗೀಸರು ಘಾನಾದಲ್ಲಿ ಎಲ್ ಮಿನಾ ಕೋಟೆಯನ್ನು ನಿರ್ಮಿಸಿದರು. ಈ ಕೋಟೆಯನ್ನು, ಅಮೆರಿಕಾದ ಬೆಳ್ಳಿ ಮತ್ತು ಚಿನ್ನದ ಗಣಿಗಳಲ್ಲಿ ಕೆಲಸ ಮಾಡಲು ಆಫ್ರಿಕದಿಂದ ಗುಲಾಮರನ್ನು ಹಡಗುಗಳಲ್ಲಿ ಸಾಗಿಸುವ ಪ್ರಯಾಣದ ನಡುವೆ ಹಿಡಿದಿಟ್ಟುಕೊಳ್ಳಲು ಬಳಸಲಾಗುತ್ತಿತ್ತು. ಎಲ್ ಮಿನಾ ಕೋಟೆಯನ್ನು ಡಚ್ಚರು ವಶಪಡಿಸಿಕೊಂಡ ನಂತರ, ಪೋರ್ಚುಗೀಸರು ತಮಗೆ ಬೇಕಾಗುವ ಗುಲಾಮರನ್ನು ಎಳೆದೊಯ್ಯಲು ಅಂಗೋಲಾಕ್ಕೆ ಸ್ಥಳಾಂತರಗೊಂಡರು. ಬ್ರೆಜಿಲ್ ಮತ್ತು ಕೆರಿಬಿಯನ್ ಪ್ರದೇಶಗಳಲ್ಲಿ, ಸಕ್ಕರೆ, ಕಾಫಿ, ತಂಬಾಕು ಮತ್ತು ಕೋಕಾ, ಮುಂತಾದ ತೋಟದ ಬೆಳೆಗಳ ಪರಿಚಯದೊಂದಿಗೆ ಗುಲಾಮ ಕೆಲಸಗಾರರಿಗಾಗಿ ಬೇಡಿಕೆ ಹುಚ್ಚಾಪಟ್ಟೆ ಏರಿತು. ಗಣಿಗಳಲ್ಲಿ ದುಡಿಯಲು ಕೆಲವು ಮಂದಿ ಗುಲಾಮ ಕೆಲಸಗಾರರ ಅಗತ್ಯವಿತ್ತು. ಆದರೆ ಸಕ್ಕರೆ, ಕಾಫಿ, ತಂಬಾಕು ಮುಂತಾದ ತೋಟದ ಬೆಳೆಗಳನ್ನು ತೆಗೆಯಲು ಅಪಾರ ಸಂಖ್ಯೆಯ ಕೆಲಸಗಾರರ (ಗುಲಾಮರ) ಅಗತ್ಯ ಬೀಳುತ್ತದೆ. ಹಾಗಾಗಿ, ತೋಟಗಳು (plantations) ಗುಲಾಮರಿಗೆ ಪ್ರಮುಖ "ಮಾರುಕಟ್ಟೆ" ಆದವು. ಮೊಟ್ಟ ಮೊದಲ ಜಾಗತಿಕ ಸರಕು ಎನಿಸಿದ ಬೆಳ್ಳಿ, ಪಶ್ಚಿಮದ ಉದಯದ ಕಥನದ ಮೊದಲ ಭಾಗವಾದರೆ, ಗುಲಾಮರು ಮತ್ತು ಸಕ್ಕರೆ, ಇವು ಪಶ್ಚಿಮದ ಉದಯದ ಕಥನದ ಎರಡನೇಯ ಭಾಗವಾದವು. ಈ ವಿದ್ಯಮಾನವು, ಕೈಗಾರಿಕಾ ಕ್ರಾಂತಿಗಿಂತಲೂ ಎರಡೂವರೆ ಶತಮಾನಗಳ ಹಿಂದಿನದು ಎಂಬುದನ್ನು ಮತ್ತೊಮ್ಮೆ ಗಮನಿಸಬಹುದು.

ಗುಲಾಮರ ಉತ್ಪಾದನೆ!

ಆಫ್ರಿಕಾದಲ್ಲಿ ಗುಲಾಮಗಿರಿಗೆ ಒಳಪಡಿಸಿದ ಮತ್ತು ತೋಟಗಳಿಗೆ ಸಾಗಿಸಲಾದ ಗುಲಾಮರ ಸಂಖ್ಯೆಯು ಹದಿನಾರನೆಯ ಶತಮಾನದಲ್ಲಿ 30 ಲಕ್ಷ, ಹದಿನೇಳನೆಯ ಶತಮಾನದಲ್ಲಿ 60 ಲಕ್ಷ ಮತ್ತು ಹದಿನೆಂಟನೆಯ ಶತಮಾನದಲ್ಲಿ 30 ಲಕ್ಷ ಮಿಲಿಯನ್, ಹೀಗೆ ಒಟ್ಟು 1.2 ಕೋಟಿ ಎಂದು ಅಂದಾಜಿಸಲಾಗಿದೆ. ಗುಲಾಮಗಿರಿಯನ್ನು ರದ್ದುಮಾಡಿದ ನಂತರ ವೆಸ್ಟ್ ಮತ್ತು ಈಸ್ಟ್ ಇಂಡೀಸ್ ತೋಟಗಳಲ್ಲಿ ದುಡಿಯಲು ಭಾರತ ಮತ್ತು ಚೀನಾದ ಕರಾರುಬಂಧಿ(indentured) ಶ್ರಮಿಕರನ್ನು ಈ ಲೆಕ್ಕದಲ್ಲಿ ಗಣನೆಗೆ ತೆಗೆದುಕೊಂಡಿಲ್ಲ. ಯುವಕರನ್ನು ಮತ್ತು ಯುವತಿಯರನ್ನು ದೊಡ್ಡ ಪ್ರಮಾಣದಲ್ಲಿ "ಎಳೆದೊಯ್ದ" ಪರಿಣಾಮವಾಗಿ ಆಫ್ರಿಕಾದಲ್ಲಿ ಉಂಟಾದ ಜನಸಂಖ್ಯಾ–ಸಂರಚನಾ ಕುಸಿತವನ್ನು ಮತ್ತು ಆ ಕುಸಿತವು ಆ ಸಮಾಜಗಳ ಸುಸ್ಥಿರತೆಯ ಮೇಲೆ ಉಂಟುಮಾಡಿದ ಹಾನಿಯನ್ನು ಇದು ತಿಳಿಸುವುದಿಲ್ಲ. ಆಫ್ರಿಕದಲ್ಲಿ ಉಂಟಾದ ಜನಸಂಖ್ಯಾ–ಸಂರಚನಾ ಕುಸಿತವು ಅಮೆರಿಕದಷ್ಟು ತೀವ್ರವಾಗಿರಲಿಲ್ಲ. ಆದರೆ, ಏಷ್ಯಾ ಮತ್ತು ಯುರೋಪ್ ಖಂಡಗಳು ತಮ್ಮ ಜನಸಂಖ್ಯೆಯ ತ್ವರಿತ ಬೆಳವಣಿಗೆಯನ್ನು ತೋರಿಸಿದ ಸಮಯದಲ್ಲಿ ಆಫ್ರಿಕಾದ ಜನಸಂಖ್ಯೆಯು ಬೆಳೆಯದಿರಲು ಗುಲಾಮಗಿರಿ ಕಾರಣವಾಯಿತು.

ಗುಲಾಮ ಕೆಲಸಗಾರರು ಅಮೆರಿಕಗಳಲ್ಲಿ ತೋಟಗಾರಿಕಾ ಅರ್ಥವ್ಯವಸ್ಥೆಯ ಬೆನ್ನೆಲುಬಾಗಿದ್ದರು. ತೋಟಗಾರಿಕೆಯ ಮೊದಲ ಪ್ರಮುಖ ಬೆಳೆ ಸಕ್ಕರೆ. ಬೆಳ್ಳಿಯ ನಂತರದ ಎರಡನೇಯ ಜಾಗತಿಕ ಸರಕು ಎನಿಸಿದ ಈ ಸಕ್ಕರೆಯನ್ನು ಕೆರಿಬಿಯನ್ ತೋಟಗಳು ಉತ್ಪಾದಿಸಿದವು. 'ಕ್ರುಸೇಡ್' ('ಧರ್ಮಯುದ್ಧ')ಗಳ ಸಮಯದಲ್ಲಿ ಅರಬ್ಬರಿಂದ ಸಕ್ಕರೆಯ ಉತ್ಪಾದನೆಯನ್ನು ಕಲಿತ ಪಶ್ಚಿಮವು ಅದರ ಉತ್ಪಾದನೆಯನ್ನು ಮೊದಲು ಮೆಡಿಟರೇನಿಯನ್ ದ್ವೀಪಗಳಲ್ಲಿ ಪ್ರಯೋಗಿಸಿತು. ನಂತರ, ಸ್ಪೇನ್ ಮತ್ತು ಪೋರ್ಚುಗಲ್‌ನ ಕರಾವಳಿಯ ಅಟ್ಲಾಂಟಿಕ್ ದ್ವೀಪಗಳಲ್ಲಿ ಮತ್ತು ನಂತರ ಆಫ್ರಿಕಾದ ಕರಾವಳಿಯ ಸಾವೊ ಟೋಮ್‌ನಲ್ಲಿ ತೋಟ–ಆಧಾರಿತ ಸಕ್ಕರೆ ಉತ್ಪಾದನೆಯಲ್ಲಿ ತೊಡಗಿದವು. ಈ ಪ್ರಯೋಗವನ್ನು ಪೋರ್ಚುಗೀಸರು ತಮ್ಮ ನಿಯಂತ್ರಣದಲ್ಲಿದ್ದ ಸಾವೊ ಟೋಮ್‌ನಿಂದ ಬ್ರೆಜಿಲ್‌ಗೆ ತೆಗೆದುಕೊಂಡು ಹೋದರು. ಬ್ರೆಜಿಲ್‌ನಲ್ಲಿ ಸಕ್ಕರೆ ಬೆಳೆಯುವ ಪ್ರದೇಶಗಳ ಮೇಲೆ ಕೆಲ ವರ್ಷಗಳ ಕಾಲ ನಿಯಂತ್ರಣ ಹೊಂದಿದ್ದ ಡಚ್ಚರು ಅದನ್ನು ಡಚ್ ಗಯಾನಾಕ್ಕೆ ಕೊಂಡೊಯ್ದರು. ಅಲ್ಲಿಂದ ಅದು ಬ್ರಿಟಿಷ್ ಕೆರಿಬಿಯನ್ ದ್ವೀಪಗಳಾದ ಬಾರ್ಬಡೋಸ್, ಜಮೈಕಾ ಮತ್ತು ಫ್ರೆಂಚ್ ಕೆರಿಬಿಯನ್ ದ್ವೀಪವಾದ ಸೇಂಟ್ ಡೊಮಿಂಗ್ಯೂ (ಈಗ ಹೈಟಿ) ದೇಶಗಳಿಗೆ ಹರಡಿತು.

ವೈಜ್ಞಾನಿಕ ಕ್ರಾಂತಿಯು ಕೈಗಾರಿಕಾ ಕ್ರಾಂತಿಗೆ ಕಾರಣವಾಯಿತು ಎಂಬುದಾಗಿ ಜ್ಞಾನೋದಯದಿಂದ ಹರಿಯುವ ಬಂಡವಾಳಶಾಹಿಯ ಜನನದ ಕುರಿತ ಪಾರಂಪರಿಕ ಕಥನವು, ತೋಟಗಾರಿಕಾ ಅರ್ಥವ್ಯವಸ್ಥೆಯು ಸಕ್ಕರೆಯನ್ನು ಜಾಗತಿಕ ಸರಕು ಎಂದು ಸ್ಥಾಪಿಸಿತು ಎಂಬ ಇತಿಹಾಸವನ್ನು ತಿಪ್ಪೆ ಸಾರಿಸುತ್ತದೆ. ಸಕ್ಕರೆಯನ್ನು ಅನುಸರಿಸಿ ಹತ್ತಿ ಉತ್ಪಾದನೆ ಬಂತು. ಅದನ್ನೂ ಸಹ, ಅಮೆರಿಕದ ದಕ್ಷಿಣದಲ್ಲಿ ಗುಲಾಮರು ಉತ್ಪಾದಿಸಿದರು. ಇದು ಇಂಗ್ಲೆಂಡ್‌ನ ಜವಳಿ ಕ್ರಾಂತಿಗೆ ಆಧಾರವಾಯಿತು. ಈ ಕಥನದಲ್ಲಿ, ಇನ್ನೊಂದು ಜಾಗತಿಕ ಸರಕಿನ, ಅಂದರೆ ಆಫ್ರಿಕಾದ ಗುಲಾಮರ ಪ್ರಸ್ತಾಪವನ್ನು ಬಿಟ್ಟುಬಿಡಲಾಗಿದೆ. ಏನೇ ಆಗಲಿ, ಮನುಷ್ಯರನ್ನು ಸರಕು ಎಂದು ಪರಿಗಣಿಸಲಾಗುವುದಿಲ್ಲವಲ್ಲ, ಗುಲಾಮರ ವ್ಯಾಪಾರದಲ್ಲಿ ತೊಡಗಿರುವವರನ್ನು ಹೊರತುಪಡಿಸಿದರೆ, ಲಂಡನ್, ಬ್ರಿಸ್ಟಲ್ ಮತ್ತು ಲಿವರ್‌ಪೂಲ್‌ನ ವ್ಯಾಪಾರಿಗಳು–ಇಂಗ್ಲೆಂಡ್‌ನ ಶೇ. 90ರಷ್ಟು ಗುಲಾಮ–ಹಡಗುಗಳ ಜವಾಬ್ದಾರರು– ಬೇರೆ ರೀತಿಯಲ್ಲಿ ಯೋಚಿಸಿದರು. ಅವರಿಗೆ ಮಾನವ ಕಳ್ಳಸಾಗಣೆಯು ಕೇವಲ ಒಂದು ವ್ಯಾಪಾರವಾಗಿತ್ತು. ಮನುಷ್ಯರು ಲೆಕ್ಕ ಪುಸ್ತಕದ ಲಾಭ ಮತ್ತು ನಷ್ಟದ ಕಾಲಂಗಳಲ್ಲಿ ಕೇವಲ ನಮೂದುಗಳಾಗಿದ್ದರು.

ಯುರೋಪಿಯನ್ ರಾಷ್ಟ್ರಗಳು ಆಫ್ರಿಕಾದಿಂದ ಗುಲಾಮರನ್ನು ಹೇಗೆ ಎಳೆದೊಯ್ದರು? ಸಂಕ್ಷಿಪ್ತವಾಗಿ ಹೇಳುವುದಾದರೆ, ಬಂದೂಕುಗಳು ಮತ್ತು ಸಿಡಿಮದ್ದುಗಳನ್ನು ಪ್ರಮುಖ ದಬ್ಬಾಳಿಕೆಯ ಅಂಶವಾಗಿ ಬಳಸಿಕೊಂಡುದುದರ ಜೊತೆಗೆ, ಗುಲಾಮರನ್ನು ಕೊಳ್ಳಲು ಸ್ಪಾನಿಷ್–ಅಮೆರಿಕನ್ ಗಣಿಗಳಿಂದ ಹೊಸದಾಗಿ ದೊರೆತ ಬೆಳ್ಳಿಯು, ಹಣ ಒದಗಿಸಿತು. ಬೆಳ್ಳಿ, ಬಂದೂಕುಗಳು, ಸಿಡಿಮದ್ದು, ಜವಳಿ, ಮಸಾಲೆಗಳು, ಇವೆಲ್ಲವೂ ಗುಲಾಮರ ವ್ಯಾಪಾರದಲ್ಲಿ ಮಾತ್ರವಲ್ಲದೆ ಆಫ್ರಿಕಾದಿಂದ ಗುಲಾಮರ "ಉತ್ಪಾದನೆ"ಯಲ್ಲೂ ಒದಗಿಬಂದವು. ಇದುವೇ ಸ್ವತಂತ್ರ ಪುರುಷರು ಮತ್ತು ಮಹಿಳೆಯರನ್ನು ಗುಲಾಮಗಿರಿಗೆ ಇಳಿಸಿದ ವಿದ್ಯಮಾನ. ಇದನ್ನು ಫ್ರೆಂಚ್ ಮಾನವಶಾಸ್ತ್ರಜ್ಞ ಮೈಲ್ಲಾಸೌಕ್ಸ್, ಚಿನ್ನದ (ಹಣ) ಮತ್ತು ಕಬ್ಬಿಣದ (ಬಂದೂಕುಗಳು ಮತ್ತು ಗುಂಡುಗಳು) "ಗರ್ಭ" ದಿಂದ ಗುಲಾಮರ ಉತ್ಪಾದನೆ ಎಂದು ಕರೆದಿದ್ದಾರೆ.

ಪ್ಲಾಂಟೇಶನ್ ಅರ್ಥವ್ಯವಸ್ಥೆಯ ಕ್ರೌರ್ಯ

ಸಕ್ಕರೆಯು ಬಂಡವಾಳಶಾಹಿ ಮಾರುಕಟ್ಟೆಯನ್ನು ಮಾತ್ರ ಸೃಷ್ಟಿಸಲಿಲ್ಲ. ಅದು ಸ್ಪಾನಿಷ್ ಬೆಳ್ಳಿಯೊಂದಿಗೆ ಜಾಗತಿಕ ಹಣಕಾಸು ವ್ಯವಸ್ಥೆಯ ಅಡಿಪಾಯವನ್ನು ಹಾಕಿತು. ಅದರೊಂದಿಗೆ ಇನ್ನೊಂದು 'ಸರಕನ್ನು' (ಅಂದರೆ, ಆಫ್ರಿಕಾದಲ್ಲಿ ಸೆರೆಹಿಡಿದ ಗುಲಾಮರನ್ನು) ಕೆರಿಬಿಯನ್ ಮತ್ತು ಅಮೆರಿಕಗಳಲ್ಲಿ ಮಾರಾಟ ಮಾಡಲಾಯಿತು. ಬ್ರಿಟಿಷ್, ಡಚ್ ಮತ್ತು ಫ್ರೆಂಚ್ ದೇಶಗಳ ಬಂಡವಾಳದ ಅಭಿವೃದ್ಧಿಯ ಕಥನವು,

ಪುಟ 15 ಕ್ಕೆ

ಆರ್ಯನ್ ಮಿಶ್ರ ಹತ್ಯೆ ಗಂಭೀರ ಪ್ರಶ್ನೆಗಳನ್ನೆತ್ತಿದೆ



ಪೊಲಿಟ್‌ಬ್ಯೂರೋ ಸದಸ್ಯೆ ಬೃಂದಾ ಕಾರಟ್ ನೇತೃತ್ವದ ಸಿಪಿಐ(ಎಂ)ನ ತಂಡ ಸೆಪ್ಟೆಂಬರ್ 5 ರಂದು ದುಃಖತಪ್ತ ಆರ್ಯನ್ ಮಿಶ್ರಾ ಕುಟುಂಬವನ್ನು ಫರಿದಾಬಾದ್‌ನ ಅವರ ಮನೆಯಲ್ಲಿ ಭೇಟಿ ಮಾಡಿತು. ಆರ್ಯನ್ ಮಿಶ್ರಾನನ್ನು ಆಗಸ್ಟ್ 23 ರಂದು ಒಂದು ಗ್ಯಾಂಗ್ ಗುಂಡಿಕ್ಕಿ ಕೊಂದಿತು, ನಂತರ ಅದನ್ನು ಗೋರಕ್ಷಕ ಗ್ಯಾಂಗ್ ಎಂದು ಗುರುತಿಸಲಾಗಿದೆ. ಕುಟುಂಬದೊಂದಿಗೆ ವಿವರವಾಗಿ ಮಾತನಾಡಿದ ಸಿಪಿಐ(ಎಂ) ತಂಡವು ಹರಿಯಾಣ ಸರ್ಕಾರ, ಆಡಳಿತ ಮತ್ತು ಹರಿಯಾಣ ಪೊಲೀಸರ ಬಗ್ಗೆ ಗಂಭೀರ ವಿಷಯಗಳನ್ನು ಎತ್ತಿದೆ. ಬೃಂದಾ ಕಾರಟ್ ರಲ್ಲದೆ, ಈ ತಂಡದ ಇತರ ಸದಸ್ಯರು ರಾಜೀವ್ ಕುಂವರ್ (ದಿಲ್ಲಿ ರಾಜ್ಯ ಕಾರ್ಯದರ್ಶಿ), ಶಿವಪ್ರಸಾದ್ (ಫರಿದಾಬಾದ್ ಜಿಲ್ಲಾ ಕಾರ್ಯದರ್ಶಿ), ವಿರಿಂದರ್ ದಂಗಿಯಾಲ್, ವಿಜಯ್ ಝಾ (ಜಿಲ್ಲಾ ಸಮಿತಿ ಸದಸ್ಯರು) ಮತ್ತು ಇತರರು. ಭೇಟಿಯ ನಂತರ ನೀಡಿರುವ ಹೇಳಿಕೆಯನ್ನು ಈ ಮುಂದೆ ಕೊಡಲಾಗಿದೆ:



ಆರ್ಯನ್ ಮಿಶ್ರಾ ಕುಟುಂಬವು ಒಂದು ಬಡ ಕುಟುಂಬ. ಅದು ಒಬ್ಬನೇ ಸದಸ್ಯನ ಆದಾಯವನ್ನು ಅವಲಂಬಿಸಿದೆ. ಆರ್ಯನ್ ತಂದೆ ಸಿಯಾನಂದ್, ತಾಯಿ ಉಮಾ ಮತ್ತು ಸಹೋದರ ಅಜಯ್ ಅವರನ್ನು ಸಿಪಿಐ(ಎಂ) ತಂಡ ಭೇಟಿ ಮಾಡಿತು. ಆರ್ಯನ್ 12 ನೇ ತರಗತಿಯಲ್ಲಿ ಓದುತ್ತಲೇ, ಗಾಜಿಯಾಬಾದ್‌ನ ಸಾಮಾಜಿಕ ಮಾಧ್ಯಮ ಬ್ರ್ಯಾಂಡಿಂಗ್‌ನ ಒಂದು ಸಣ್ಣ ಕಂಪನಿಯಲ್ಲಿ ತರಬೇತಿ ಪಡೆಯುತ್ತಿದ್ದ. ಆತ ಬಹಳ ಧಾರ್ಮಿಕನಾಗಿದ್ದು, ಇತ್ತೀಚೆಗೆ ಅಯೋಧ್ಯೆ ದೇವಸ್ಥಾನ ಸೇರಿದಂತೆ ಇತರ ದೇವಾಲಯಗಳಿಗೆ ಭೇಟಿ ನೀಡಿದ್ದ, ಉತ್ಸಾಹಿ ಬಾಡಿ–ಬಿಲ್ಡರ್ ಆಗಿದ್ದ ಆರ್ಯನ್ ಇತ್ತೀಚೆಗಷ್ಟೇ ವೇಟ್‌ಲಿಫ್ಟಿಂಗ್‌ನಲ್ಲಿ ಬಹುಮಾನ ಗೆದ್ದಿದ್ದ. ತನ್ನ ಮಗನಿಗೆ ಬೇಕಾದ ಪೌಷ್ಟಿಕಾಂಶವನ್ನು ಖಚಿತಪಡಿಸಲು ಅವನ ತಾಯಿ ಕೆಲವೊಮ್ಮೆ ಉಪವಾಸ ಕೂಡ ಇರುತ್ತಿದ್ದಳು. ಆತನ ಸಾವಿನಿಂದ ಆ ತಾಯಿ ತೀವ್ರ ಆಘಾತಕ್ಕೊಳಗಾಗಿದ್ದಾರೆ. ಆಗಾಗ್ಗೆ ಮೂರ್ಛೆ ಬೀಳುತ್ತಿದ್ದ ಕಾರಣ ಆಕೆಯನ್ನು ಆಸ್ಪತ್ರೆಗೆ ಸೇರಿಸಬೇಕಾಯಿತು. ಈ ಕುಟುಂಬ ಆರ್ಥಿಕ ಸಂಕಷ್ಟದಲ್ಲಿದೆ. ಸಿಪಿಐ(ಎಂ) ತಂಡವು ಆರ್ಯನ್ ಅವರ ಬೋಧಕರನ್ನು ಕೂಡ ಭೇಟಿ ಮಾಡಿತು. ಪರೀಕ್ಷೆಗಳಲ್ಲಿ ಉತ್ತಮ ಅಂಕ ಗಳಿಸಲು ಆರ್ಯನ್ ಸಂಕಲ್ಪ ಮಾಡಿದ್ದ ಎಂದು ಬೋಧಕರು ಹೇಳಿದರು.

1. ಮಿಶ್ರಾ ಕುಟುಂಬವು ಫರಿದಾಬಾದಿನಲ್ಲಿ ವಾಸಿಸುವ ಎರಡು ಕೋಣೆಗಳ ಸಣ್ಣ ಫ್ಲಾಟನ್ನು ದೀರ್ಘಾವಧಿ ಲೀಸ್‌ಗೆ ಪಡೆದಿದೆ. ಅದಕ್ಕಾಗಿ ಸಾಲ ತೆಗೆದುಕೊಂಡಿದೆ. ಕೆಲವು ತಿಂಗಳುಗಳ ನಂತರ ಫ್ಲಾಟ್ ಒಡೆಯರ ಕುಟುಂಬವು ಕ್ರಿಮಿನಲ್‌ಗಳನ್ನು ಒಳಗೊಂಡಿದೆ ಎಂದು ತಿಳಿಯುತ್ತದೆ. ನಂತರ ಅವರು ಆ ಮನೆಯನ್ನು ಬಿಡಲು ಬಯಸಿದರು, ಆದರೆ ಮನೆಯ ಮಾಲಿಕ ಹಣವನ್ನು ಹಿಂದಿರುಗಿಸಲು ತನಗೆ ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದರಿಂದ ಅದು ಸಾಧ್ಯವಾಗಲಿಲ್ಲ. ಅಲ್ಲೇ ಉಳಿಯಲೇ ಬೇಕಾದ ಅನಿವಾರ್ಯ ಸ್ಥಿತಿಗೆ ಆ ಕುಟುಂಬ ಸಿಲುಕಿತು. ಕುಟುಂಬ ಸದಸ್ಯರ ಹೇಳಿಕೆಗಳ ಪ್ರಕಾರ, ಫ್ಲಾಟ್ ಮಾಲಿಕನ ಕುಟುಂಬದ ಪಾತ್ರದ ಬಗ್ಗೆ ಬಹಳ ಶಂಕೆಗಳಿವೆ. ಆದರೆ ಪೊಲೀಸರು ಅವರನ್ನು ರಕ್ಷಿಸುತ್ತಿದ್ದಾರೆ. ಅಂದು ರಾತ್ರಿ ಮಲಗಲು ತಯಾರಿ ನಡೆಸುತ್ತಿದ್ದ 19ರ ಹರೆಯದ ಆರ್ಯನ್ ಗೆ ರಾತ್ರಿ 11 ಗಂಟೆ ಸುಮಾರಿಗೆ ಆ ಮಾಲೀಕರು ಇದ್ದಕ್ಕಿದ್ದಂತೆ ಕರೆ ಮಾಡಿದ್ದಾರೆ. ಅದರಂತೆ ಅವನು ಕೆಳಗೆ ಹೋದವನು ಮತ್ತೆ ಹಿಂತಿರುಗಲಿಲ್ಲ. ನಂತರ ಫ್ಲಾಟ್ ಮಾಲಿಕ ಮತ್ತು ಆತನ ಪತ್ನಿ ಒಂದು "ಅಪಘಾತ" ವಾಗಿದೆ ಎಂದು ಕುಟುಂಬಕ್ಕೆ ತಿಳಿಸಿದರು, ಮತ್ತೊಮ್ಮೆ ಆರ್ಯನ್ ಗುಂಡಿಗೆ ಗುರಿಯಾಗಿದ್ದಾನೆ ಎಂದು ತಿಳಿಸಿದರು. ಆಶ್ಚರ್ಯವೆಂದರೆ ಆ ರಾತ್ರಿ ಆರ್ಯನ್‌ನನ್ನು ತಮ್ಮೊಂದಿಗೆ ಏಕೆ ಕರೆದೊಯ್ದರು ಎಂದು ಫ್ಲಾಟ್ ಮಾಲಿಕ ಮತ್ತು ಅವನ ಹೆಂಡತಿ ಮತ್ತು ಪುತ್ರರನ್ನು ಪ್ರಶ್ನಿಸಲು ಪೊಲೀಸರು ಯಾವುದೇ ಪ್ರಯತ್ನ ಮಾಡಲಿಲ್ಲ. ಮಾಲೀಕನ ಪುತ್ರರಲ್ಲಿ ಒಬ್ಬ ಕ್ರಿಮಿನಲ್ ಎಂದು ಕುಪ್ರಸಿದ್ಧಿ ಪಡೆದವನು. ಇದಲ್ಲದೆ, ಅಪರಾಧದ ನೇರ ಪ್ರತ್ಯಕ್ಷ ಸಾಕ್ಷಿಗಳಲ್ಲಿ ಒಬ್ಬಾಕೆ, ಕ್ರಿಮಿನಲ್ ಗ್ಯಾಂಗ್‌ಗಳೊಂದಿಗೆ ಸಂಪರ್ಕವನ್ನು ಹೊಂದಿರುವ ಶಂಕೆಯಿರುವಾಕೆ, ಫ್ಲಾಟ್ ಮಾಲಿಕನ ಆಪ್ತ ಸ್ನೇಹಿತೆ ಮಹಿಳೆ ಕೂಡ ಕಾರಿನಲ್ಲಿದ್ದಳು. ಆಕೆ ಉದ್ದೇಶಪೂರ್ವಕವಾಗಿಯೇ ಕೆಲವು ಪ್ರತಿಸ್ಪರ್ಧಿ ಗ್ಯಾಂಗ್ ಸದಸ್ಯರನ್ನು ಹೆಸರಿಸಿ ನಿಜವಾಗಿಯೂ ಕೊಲೆಯಲ್ಲಿ ಭಾಗಿಯಾಗಿರುವ ಜನರ ಬಗ್ಗೆ ಪೊಲೀಸರಿಗೆ ತಪ್ಪು ಮಾಹಿತಿಯನ್ನು ನೀಡಿದಳು. ಆಕೆ ಉದ್ದೇಶಪೂರ್ವಕವಾಗಿ ಪೊಲೀಸರನ್ನು ಏಕೆ ದಾರಿ ತಪ್ಪಿಸಿದ್ದಾಳೆ ಎಂಬುದು ಆರ್ಯನ್ ಕುಟುಂಬದವರ ಪ್ರಶ್ನೆ. ಇದು ಗೋರಕ್ಷಕರನ್ನು ರಕ್ಷಿಸಲಿಕ್ಕಾಗಿಯೋ ಅಥವಾ ಪ್ರತಿಸ್ಪರ್ಧಿ ಗ್ಯಾಂಗಿನ ಮೇಲೆ ಆರೋಪ ಹೊರಿಸಲು ಈ ಕೊಲೆಯನ್ನು ಬಳಸಿದಳೇ? ಆರ್ಯನ್ ಮೇಲೆ ಎರಡನೇ ಬಾರಿ ಗುಂಡು ಹಾರಿಸಲಾಯಿತು. ಈ ಕೊಲೆ ಪೂರ್ವ ಯೋಜಿತವೇ? ಈ ಪ್ರಶ್ನೆಗಳು ಕುಟುಂಬವನ್ನು ಕಾಡುತ್ತಿವೆ. ಏನೇ ಇರಲಿ, ಆ ರಾತ್ರಿ ಕಾರಿನಲ್ಲಿದ್ದವರನ್ನು ಪೊಲೀಸರು ಕಸ್ಟಡಿ ವಿಚಾರಣೆಗೆ ಏಕೆ ಕರೆದುಕೊಂಡು ಹೋಗುತ್ತಿಲ್ಲ ಎಂಬುದು ಪ್ರಶ್ನೆ.

2. ಪೊಲೀಸರ ಪಾತ್ರ ಅತ್ಯಂತ ಸಂಶಯಾಸ್ಪದವಾಗಿದೆ. ರಾಷ್ಟ್ರೀಯ ಹೆದ್ದಾರಿಯಲ್ಲಿ 30 ಕಿ.ಮೀ.ವರೆಗೆ ಕಾರ್ ಚೇಸ್ ನಡೆದಿದೆ, ಹೆದ್ದಾರಿ ಪೊಲೀಸರು ಅದನ್ನು ತಡೆಯಲಿಲ್ಲ ಎಂದು ಯೋಚಿಸಲು ಸಾಧ್ಯವಿಲ್ಲ. ಇದು ಪೊಲೀಸರು ತಡೆಯದ ಗೋರಕ್ಷಕರ ಒಂದು ಸುಪರಿಚಿತ ಘಟನೆಯೇ? ಅಷ್ಟೊಂದು ಸಿಸಿಟಿವಿಗಳನ್ನು ಅಳವಡಿಸಿದ್ದರೂ, ತಕ್ಷಣವೇ ತಡೆಯಲು ಪೊಲೀಸ್ ಕೇಂದ್ರಗಳಲ್ಲಿ ಅದರ ನೇರ ಪ್ರದರ್ಶನವಿಲ್ಲದಿದ್ದರೆ ಅವುಗಳನ್ನು ಅಳವಡಿಸಿದ್ದಾದರೂ ಏಕೆ? ಇದು ರಾಜಧಾನಿಯಿಂದ ಕೂಗಳತೆಯಲ್ಲಿರುವ ಸ್ಥಳದಲ್ಲಿ ಘಟಿಸಿದೆ ಎಂಬುದು ಕಾನೂನು ಮತ್ತು ಸುವ್ಯವಸ್ಥೆಯ ಸಂಪೂರ್ಣ ಅಭಾವ ಮತ್ತು ಜಂಗುಳಿ ಕಾನೂನಿನ ಇರವನ್ನು ತೋರಿಸುತ್ತದೆ. ಇದಕ್ಕೆ ಯಾರು ಹೊಣೆಗಾರರು?

3. ಅವರ ಮಗನಿಗೆ ಗುಂಡು ಹಾರಿಸಿದ ವ್ಯಕ್ತಿ "ನೇಕ್ ಆದ್ಮಿ" ಅಂದರೆ ಒಳ್ಳೆಯ ವ್ಯಕ್ತಿ – ಮತ್ತು "ತಪ್ಪಾಗಿ" ಗುಂಡು ಹಾರಿಸಲಾಗಿದೆ ಎಂದು ಪೊಲೀಸರು ಕುಟುಂಬಕ್ಕೆ ತಿಳಿಸಿದರು. ಈ ಮೂಲಕ ಏನು ಸಂದೇಶ ನೀಡಲಾಗುತ್ತಿದೆ? ಅವರು ಆ "ಒಳ್ಳೆಯ ಮನುಷ್ಯ"ನೊಂದಿಗೆ ರಾಜಿ ಮಾಡಿಕೊಳ್ಳಬೇಕೆ? ಇದಲ್ಲದೆ ಪೊಲೀಸರು "ನೇಕ್ ಆದ್ಮಿ" ಎಂದು ಪ್ರಮಾಣೀಕರಿಸಿದ ಪ್ರಮುಖ ಆರೋಪಿ ಅನಿಲ್ ಕೌಶಿಕ್ ಸರ್ಕಾರದ ಮಾನ್ಯತೆ ಪಡೆದ ಗೋರಕ್ಷಕ ಜಿಲ್ಲಾ ಸಮಿತಿಯ ಸದಸ್ಯ ಮತ್ತು ಪೊಲೀಸರೊಂದಿಗೆ ನಿಕಟ ಸಂಪರ್ಕದಲ್ಲಿರುವಾತ. ಪೊಲೀಸರು ಈ ವ್ಯಕ್ತಿಗಳನ್ನು ಇರಿಸಿದ್ದ ಪೋಲೀಸ್ ಠಾಣೆಗೆ ತಂದೆಯನ್ನು ಕರೆದೊಯ್ದರು. ತಂದೆಯ ಪ್ರಕಾರ ಮಗನ ಹಂತಕ ಅವನ ಕಾಲಿಗೆ ಬಿದ್ದು ತಪ್ಪಾಗಿದೆ ಕ್ಷಮಿಸಿ ಎಂದು ಬೇಡಿಕೊಂಡ. ಇದು ಕೂಡ ಕುಟುಂಬದ ಮೇಲಿನ ಒತ್ತಡದ ರೂಪವಲ್ಲವೇ? ಹಂತಕನನ್ನು ಭೇಟಿಯಾಗಲು ತಂದೆಯನ್ನು ಪೊಲೀಸರು ಠಾಣಾಗೆ ಏಕೆ ಕರೆದೊಯ್ದರು? ಗೋರಕ್ಷಕರನ್ನು ಉಳಿಸಲು ಪ್ರಕರಣವನ್ನು ದುರ್ಬಲಗೊಳಿಸುವ ಕಸರತ್ತು ಮಾಡಲಾಗುತ್ತಿದೆ ಎಂಬ ನ್ಯಾಯಬದ್ಧ ಆತಂಕವಿದೆ. ಪ್ರಕರಣವನ್ನು ದುರ್ಬಲಗೊಳಿಸುವ ಈ ನಗ್ನ ಯತ್ನ ಮಾಡಿರುವ ಪೊಲೀಸರ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳಬೇಕು ಎಂಬ ಆಗ್ರಹ ಬಂದಿದೆ.

4. ಈ ಹತ್ಯೆಯು ಗೋರಕ್ಷಕರ ಅಪರಾಧೀ ಚಟುವಟಿಕೆಗಳಿಗೆ ಕಾನೂನು ಅನುಮತಿ ನೀಡುವ ಹರಿಯಾಣ ಸರ್ಕಾರದ ನೀತಿಯು ನೇರ ಪರಿಣಾಮವಾಗಿದೆ. ಅಲ್ಲದೆ ಪೊಲೀಸರು ಈ ಗ್ಯಾಂಗ್‌ಗಳೊಂದಿಗೆ ಸಂಪೂರ್ಣ ಶಾಮೀಲಾಗಿದ್ದಾರೆ ಎಂಬುದು ಬಹಿರಂಗ ರಹಸ್ಯ. ಬಂಧನಕ್ಕೊಳಗಾದ ವ್ಯಕ್ತಿಗಳು ಗೋರಕ್ಷಕ ಗ್ಯಾಂಗ್‌ಗಳ ಭಾಗವಾಗಿದ್ದಾರೆ ಎಂಬ ಬಗ್ಗೆ ಏನೂ ತಿಳಿದಿಲ್ಲ ಎಂದು ನಿರಾಕರಿಸುವ ಪೊಲೀಸರ ಹೇಳಿಕೆಗಳು ಪಕ್ಷಪಾತಕ್ಕೆ ಸಾಕ್ಷಿಯಾಗಿವೆ. ಯಾವುದೇ ಸ್ವತಂತ್ರ ಮತ್ತು ನಿಷ್ಪಕ್ಷಪಾತ ತನಿಖೆ ನಡೆಯಬಲ್ಲುದೇ? ಈ ಹತ್ಯೆಗೆ ಸರಕಾರ ಮತ್ತು ಪೊಲೀಸರು ಉತ್ತರದಾಯಿಯಾಗಬೇಕಾಗಿದೆ.

5. ಬಿಜೆಪಿ–ಆರ್‌ಎಸ್‌ಎಸ್ ವ್ಯವಸ್ಥೆಯಲ್ಲಿ ಗೋರಕ್ಷಕರ ರಕ್ಷಣೆಯ ರಾಜಕೀಯ ಈ ಪ್ರಕರಣದಲ್ಲಿ ಸಂಪೂರ್ಣವಾಗಿ ಬಯಲಾಗಿದೆ. ಕುಟುಂಬವನ್ನು ಸಂಪೂರ್ಣವಾಗಿ ಏಕಾಂಗಿಯಾಗಿ ಮಾಡಲಾಗಿದೆ. ಅವರು ಬಡವರು ಮತ್ತು ಯಾವುದೇ ಪ್ರಭಾವ ಇಲ್ಲದವರು. ಬಿಜೆಪಿಯ ಯಾವೊಬ್ಬ ನಾಯಕನಂತೂ ಬಿಡಿ, ಪದಾಧಿಕಾರಿಯೂ ಈ ಕುಟುಂಬವನ್ನು ಭೇಟಿ ಮಾಡಿಲ್ಲ. ಕುಟುಂಬದವರನ್ನು ಭೇಟಿ ಮಾಡುವ ಬಗ್ಗೆ ಯಾವೊಬ್ಬ ಸರ್ಕಾರಿ ಅಧಿಕಾರಿಯೂ ತಲೆಕೆಡಿಸಿಕೊಂಡಿಲ್ಲ. ಆರ್ಯನ್ ತಂದೆ ಹೇಳಿದರು– "ಒಬ್ಬ ಬಜರಂಗಿಯ ಸಂಬಂಧಿ ಸತ್ತಾಗ ದೊಡ್ಡ ನಾಯಕರು ಹೋಗಿ ಲಕ್ಷಗಟ್ಟಲೆ ರೂಪಾಯಿ ಕೊಟ್ಟರು ಅಂತ ಕೇಳಿದ್ದೆ. ಅವರಲ್ಲಿ ಒಬ್ಬರೂ ನನ್ನನ್ನು ನೋಡಲು ಬಂದಿಲ್ಲ, ಸಾಂತ್ವನ ಹೇಳಲೂ ಬಂದಿಲ್ಲ. ಏಕೆ? ಏಕೆಂದರೆ ಅವರಿಗೆ ಕೊಲ್ಲಲು ಪರವಾನಗಿ ನೀಡಿದವರು ಯಾರು ಎಂದು ನಾನು ಪ್ರಶ್ನಿಸಿದ್ದೇನೆ" ಅವರು ಇಲ್ಲಿ ಉಲ್ಲೇಖಿಸಿದ್ದು ಈ ವರ್ಷದ ಜನವರಿಯಲ್ಲಿ ಹಿಂದುತ್ವ ಕಾರ್ಯಕರ್ತ ಮತ್ತು ಗೋರಕ್ಷಕ ನಾಯಕ ಬಿಟ್ಟು ಬಜರಂಗಿಯ ಸಹೋದರ ಮಹೇಶ್ ಸುಟ್ಟಗಾಯಗಳಿಂದ ಸಾವನ್ನಪ್ಪಿದ ಘಟನೆಯನ್ನು. ಆ ಸಮಯದಲ್ಲಿ ಹರಿಯಾಣ ಮುಖ್ಯಮಂತ್ರಿ ಖಟ್ಟರ್, ಸಾರಿಗೆ ಸಚಿವರು ಮತ್ತು ಸ್ಥಳೀಯ ಶಾಸಕರೊಂದಿಗೆ ಕುಟುಂಬವನ್ನು ಭೇಟಿ ಮಾಡಿದ್ದರು. ಇಂದು ಆರ್ಯನ್‌ನ ತಂದೆ ಮತ್ತು ತಾಯಿ ಏಕಾಂಗಿಯಾಗಿ ಕಂಡಿದ್ದರೆ ಅದಕ್ಕೆ ಬಿಜೆಪಿ–ಆರ್‌ಎಸ್‌ಎಸ್ ವ್ಯವಸ್ಥೆಯ ವಿಷಕಾರಿ ರಾಜಕೀಯವೇ ಕಾರಣ. ಹಿಂದೂ ಧರ್ಮದ ಯುವಕನೊಬ್ಬ ಹಿಂದುತ್ವದ ಗೋರಕ್ಷಕರ ಗುಂಡಿಗೆ ಬಲಿಯಾದಾಗ, ಈ ವ್ಯವಸ್ಥೆಯು ಹಿಂದುತ್ವ ಗೋರಕ್ಷಕರ ಪರ ನಿಂತಿದೆ. ಇದು ಹಿಂದೂಗಳ ಹೆಸರಿನಲ್ಲಿ ಮಾತನಾಡುವವರ ವಾಸ್ತವ.

6. ಕುಟುಂಬಕ್ಕೆ ಆರ್ಥಿಕ ಪರಿಹಾರ, ಸಹೋದರ ಅಜಯ್ ಮಿಶ್ರಾಗೆ ಸರ್ಕಾರಿ ನೌಕರಿ; ಆರೋಪಿಗಳನ್ನು ರಕ್ಷಿಸಲು ಸಹಕರಿಸಿದ ಪೊಲೀಸರ ವಿರುದ್ಧ ಕ್ರಮ; ನ್ಯಾಯಾಲಯದ ತನಿಖೆಯ ಮೇಲ್ವಿಚಾರಣೆ ನಡೆಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ. ಈ ಕ್ರಿಮಿನಲ್ ಗೋರಕ್ಷಕ ಗ್ಯಾಂಗ್‌ಗಳನ್ನು ವಿಸರ್ಜಿಸಬೇಕು ಮತ್ತು ಸರ್ಕಾರದ ಮಾನ್ಯತೆ, ಮಂಜೂರಾತಿ ಮತ್ತು ರಕ್ಷಣೆಯನ್ನು ಕೊನೆಗೊಳಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ತಪ್ಪಾಗಿ ಸಾಯಿಸಿದ್ದು–ವ್ಯಂಗ್ಯಚಿತ್ರಕಾರರು ಕಂಡಂತೆ

ನನ್ನನ್ನೇ ಏಕೆ? ಯಾರನ್ನೇ ಆಗಲಿ, ಯಾಕೆ?



ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಫೇಸ್‌ಬುಕ್

"ನಮ್ಮನ್ನು ಕ್ಷಮಿಸು ತಾಯಿ, ಮುಂದಿನ ಬಾರಿ ಸರಿಯಾದ ವ್ಯಕ್ತಿಯನ್ನೇ ಕೊಲ್ಲುವಂತೆ ಖಾತ್ರಿ ಮಾಡಿಕೊಳ್ಳುತ್ತೇವೆ"



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್



"ತಪ್ಪಾಗಿ!.. ಅವರನ್ನು ಅವರ ಬಟ್ಟೆಗಳಿಂದ ಸುಲಭವಾಗಿ ಗುರುತಿಸಬಹುದು ಎಂದು ನಾನಂದುಕೊಂಡಿದ್ದೆ"

ವ್ಯಂಗ್ಯಚಿತ್ರ : ಸಂದೀಪ್ ಅದ್ವರ್ಯು, ಫೇಸ್‌ಬುಕ್



ನಾಲ್ಕನೇ ಜಿನೀವಾ ಸಮಾವೇಶದ ಕಲಮು 33ರ ಪ್ರಕಾರ, ಜನರು ಮಾಡದ ತಪ್ಪುಗಳಿಗೆ ಅವರ ಮೇಲೆ ಹೇರುವ ಪ್ರತೀಕಾರದ ಸಾಮೂಹಿಕ ಶಿಕ್ಷೆಯ ಕ್ರಮವು, ಒಂದು ಯುದ್ಧಾಪರಾಧವಾಗುತ್ತದೆ. ಅಂದರೆ ಸಾಮ್ರಾಜ್ಯಶಾಹಿಯು ಒಂದು ದೇಶದ ಮೇಲೆ ಹೇರುವ ಏಕಪಕ್ಷೀಯ ನಿರ್ಬಂಧಗಳು ಯುದ್ಧಾಪರಾಧಕ್ಕಿಂತ ಕಡಿಮೆಯಲ್ಲ ಎಂಬುದು ಸ್ಪಷ್ಟವಾಗುತ್ತದೆ. ವಾಸ್ತವವಾಗಿ ಅದು ನಾಗರಿಕರ ಮೇಲೆ ಬಾಂಬ್ ದಾಳಿಗಿಂತಲೂ ಹೆಚ್ಚು ಅಪಾಯಕಾರಿ. ಉಕ್ರೇನಿನ ಅಧ್ಯಕ್ಷ ಝೆಲೆನ್ಸ್ಕಿ, ಭಾರತ ಇಂತಹ ಯುದ್ಧಾಪರಾಧದಲ್ಲಿ ಭಾಗಿಯಾಗಬೇಕು ಎಂದು 'ಸಲಹೆ' ನೀಡಿದ್ದಾರೆ! ಮೂರನೆಯ ಜಗತ್ತಿನ ಜನರ ವಿರುದ್ಧವಾಗಿ ಬಳಸುವ ಈ ನಿರ್ಬಂಧಗಳು, ಸಾಮ್ರಾಜ್ಯಶಾಹಿಯ ಕೈಯಲ್ಲಿರುವ ಒಂದು ಮಾರಕ ಅಸ್ತ್ರವಾಗಿವೆ. ಆದುದರಿಂದ ವಿಶ್ವಸಂಸ್ಥೆಯು ಈ ನಿರ್ಬಂಧಗಳನ್ನೇ ನಿಷೇಧಿಸಬೇಕು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಏಕಪಕ್ಷೀಯ ಆರ್ಥಿಕ ನಿರ್ಬಂಧವನ್ನು ಹೇರುವುದು ಅಪರಾಧ



ಪ್ರಧಾನ ಮಂತ್ರಿ ಮೋದಿಯವರು ಉಕ್ರೇನ್‌ಗೆ ಭೇಟಿ ನೀಡಿದ ಸಮಯದಲ್ಲಿ (ಇಂಥ ಒಂದು ಸಲ್ಲದ ಸಮಯದಲ್ಲಿ ಅವರು ಅಲ್ಲಿಗೆ ಏಕೆ ಹೋದರು ಎಂಬುದೇ ಒಂದು ನಿಗೂಢ ವಿಷಯ), ಆ ದೇಶದ ಅಧ್ಯಕ್ಷ ಝೆಲೆನ್ಸ್ಕಿ, ಪಾಶ್ಚಾತ್ಯ ನಿರ್ಬಂಧಗಳನ್ನು ಉಲ್ಲಂಘಿಸಿ ರಷ್ಯಾದಿಂದ ತೈಲವನ್ನು ಖರೀದಿಸದಂತೆ ಅವರನ್ನು ಕೇಳಿಕೊಂಡರು. ಝೆಲೆನ್ಸ್ಕಿ ಕೋರಿಕೆಯ ಅರ್ಥವೆಂದರೆ, "ಏಕಪಕ್ಷೀಯ"ವಾಗಿ ಪಾಶ್ಚಾತ್ಯರು ವಿಧಿಸಿದ ನಿರ್ಬಂಧಗಳನ್ನು ಭಾರತವು ಕಟ್ಟುನಿಟ್ಟಾಗಿ ಅನುಸರಿಸಬೇಕು ಎಂಬುದು.

ಈ ಸಲಹೆಯನ್ನು ನೀಡಿದ ಈ ಮಹಾನುಭಾವ, ಎರಡನೆಯ ಮಹಾಯುದ್ಧದ ಸಮಯದಲ್ಲಿ ಕುಖ್ಯಾತ ನಾಜಿ ಸಹಯೋಗಿ ಸ್ಟೆಪನ್ ಬಂಡೇರಾ ಅವರ ಅನುಯಾಯಿಗಳ ಸಹಾಯದಿಂದ ಉಕ್ರೇನ್ ಆಡಳಿತ ನಡೆಸುತ್ತಿದ್ದಾರೆ ಎಂಬ ಅಂಶವನ್ನು ಒಂದು ಕ್ಷಣ ಮರೆತುಬಿಡೋಣ. ಅಲ್ಲಿ ಇಂದು ಉದ್ಭವಿಸಿರುವ ಸಂದರ್ಭವನ್ನೂ ಸಹ ಮರೆಯೋಣ: ಸೋವಿಯತ್ ಒಕ್ಕೂಟದ ವಿಘಟನೆಯ ಸಮಯದಲ್ಲಿ ಅಮೆರಿಕದ ಅಧ್ಯಕ್ಷ ಜಾರ್ಜ್‌ಬುಷ್, ನ್ಯಾಟೋದ ಗಡಿಯನ್ನು ಆಗ ನ್ಯಾಟೋ ಹೊಂದಿದ್ದ ಸದಸ್ಯ ದೇಶಗಳ ಆಚೆಗೆ ವಿಸ್ತರಿಸುವುದಿಲ್ಲವೆಂದು ಗೋರ್ಬಚೇವ್‌ಗೆ ನೀಡಿದ ಭರವಸೆಯನ್ನು ಉಲ್ಲಂಘಿಸಿ, ಪೂರ್ವ ದಿಕ್ಕಿನಲ್ಲಿ ರಷ್ಯಾದ ಗಡಿಯವರೆಗೂ ನ್ಯಾಟೋದ ವ್ಯಾಪ್ತಿಯನ್ನು ವಿಸ್ತರಿಸುವ ಅಮೆರಿಕದ ಹಠದಿಂದಾಗಿ ರಷ್ಯಾ–ಉಕ್ರೇನ್ ಯುದ್ಧ ನಡೆಯುತ್ತಿದೆ. ಮೇಲಾಗಿ, ರಷ್ಯಾ ಮತ್ತು ಉಕ್ರೇನ್ ದೇಶಗಳ ನಡುವೆ ಮಾತುಕತೆಗಳ ಮೂಲಕ ತಲುಪಿದ ಮಿನ್ಸ್ಕ್ ಒಪ್ಪಂದಗಳನ್ನು ಆಂಗ್ಲೋ–ಯುಎಸ್ "ಸಲಹೆ"ಯ ಮೇರೆಗೆ ಉಕ್ರೇನ್ ಧಿಕ್ಕರಿಸದೇ ಇದ್ದಿದ್ದರೆ, ಈ ಯುದ್ಧವು ನಡೆಯುತ್ತಲೇ ಇರಲಿಲ್ಲ. ಭಾರತವು ತನ್ನ "ಸ್ವ–ಹಿತಾಸಕ್ತಿ"ಯ ಕಾರಣದಿಂದಾಗಿ ರಷ್ಯಾದ ತೈಲವನ್ನು ಖರೀದಿಸುವ ಮೂಲಕ ನಿರ್ಬಂಧಗಳನ್ನು ಮುರಿಯಿತು ಎಂಬುದನ್ನೂ ನಾವು ಮರೆತುಬಿಡೋಣ. "ಏಕಪಕ್ಷೀಯ" ನಿರ್ಬಂಧಗಳ ನೈತಿಕತೆಯ ಬಗ್ಗೆ ಮಾತ್ರ ಮಾತನಾಡೋಣ.

ಕೆಲವು ಪಾಶ್ಚಾತ್ಯ ಸಾಮ್ರಾಜ್ಯಶಾಹಿ ದೇಶಗಳು, ತಮ್ಮ ಆದೇಶವನ್ನು ಉಲ್ಲಂಘಿಸುವ ದೇಶಗಳ ವಿರುದ್ಧ, ಏಕಪಕ್ಷೀಯವಾಗಿ, ನಿರ್ಬಂಧಗಳನ್ನು ಹೇರುತ್ತವೆ. ಈ ಸಾಮ್ರಾಜ್ಯಶಾಹಿ ನಿರ್ಬಂಧಗಳನ್ನು, ವಿಶ್ವಸಂಸ್ಥೆಯ ಅನುಮೋದನೆಯೊಂದಿಗೆ ವಿಧಿಸುವ ನಿರ್ಬಂಧಗಳಿಂದ ಪ್ರತ್ಯೇಕಿಸಿ ನೋಡಬೇಕಾಗುತ್ತದೆ. ಅಂದರೆ, ವಿಶ್ವ ಸಂಸ್ಥೆಯ ಸದಸ್ಯ ದೇಶಗಳ ಅನುಮತಿಯೊಂದಿಗೆ ಸಾಮಾನ್ಯವಾಗಿ ನಿರ್ಬಂಧಗಳನ್ನು ವಿಧಿಸಲಾಗುತ್ತದೆ. ಈ ನಿರ್ಬಂಧಗಳ ಸ್ಥಾನಮಾನವೇ ಬೇರೆ ಮತ್ತು ಸಾಮ್ರಾಜ್ಯಶಾಹಿ ದೇಶಗಳು ಹೇರುವ ನಿರ್ಬಂಧಗಳ ಸ್ಥಾನಮಾನವೇ ಬೇರೆ. ಸಾಮ್ರಾಜ್ಯಶಾಹಿಯು ಹೇಳಿದಂತೆ ಕೇಳದೆ ಸೆಟೆದು ನಿಂತ ಕಾರಣಕ್ಕಾಗಿ ಮತ್ತು ಅದರ ಅಪೇಕ್ಷೆಗಳನ್ನು ಈಡೇರಿಸದ ಕಾರಣಕ್ಕಾಗಿ ಅದರ ಕೆಂಗಣ್ಣಿಗೆ ಗುರಿಯಾದ ಕ್ಯೂಬಾ, ಇರಾನ್, ವೆನೆಜುವೆಲಾ, ಸಿರಿಯಾ, ಲಿಬಿಯಾ ಮುಂತಾದ ಒಂದು ಬಹು ದೊಡ್ಡ ಸಂಖ್ಯೆಯ ದೇಶಗಳು ಇಂತಹ ಏಕಪಕ್ಷೀಯ ನಿರ್ಬಂಧಗಳಿಗೆ ಬಲಿಯಾಗಿವೆ. ಈ ಸಾಲಿಗೆ ರಷ್ಯಾ ಇತ್ತೀಚೆಗೆ ಸೇರ್ಪಡೆಯಾಗಿದೆ. ಆದ್ದರಿಂದ ಸಾಮ್ರಾಜ್ಯಶಾಹಿ ನಿರ್ಬಂಧಗಳನ್ನು ಒಪ್ಪಿಕೊಳ್ಳುವುದೆಂದರೆ, ಅದರ ಆಕ್ರಮಣಕಾರೀ ತಂತ್ರಗಳನ್ನು ಅನುಮೋದಿಸುವುದು ಎಂದಾಗುತ್ತದೆ.

ಯುದ್ಧಾಪರಾಧವಾಗುತ್ತದೆ

ಸಾಮ್ರಾಜ್ಯಶಾಹಿಯು ಹೇರುವ ಈ ನಿರ್ಬಂಧಗಳ ಒಂದು ವಿಶಿಷ್ಟ ಲಕ್ಷಣವೆಂದರೆ ಅವು ಜನರನ್ನು ನೋಯಿಸುತ್ತವೆ ಎಂಬುದು. ಹಾಗೆ ನೋಡಿದರೆ, ಜನರನ್ನು ನೋಯಿಸುವುದೇ ಈ ನಿರ್ಬಂಧಗಳ ಉದ್ದೇಶ. ಈ ನಿರ್ಬಂಧಗಳು ಎಷ್ಟು ಯಶಸ್ವಿಯಾಗಿದ್ದವು, ಅಂದರೆ ಅವು ಎಷ್ಟು ಹೆಚ್ಚು ಜನರನ್ನು ಎಷ್ಟು ಹೆಚ್ಚು ನೋಯಿಸಿದವು ಎಂಬುದರ ಮೂಲಕ ಅವುಗಳ ಕಾರ್ಯಕ್ಷಮತೆಯನ್ನು ತೀರ್ಮಾನಿಸಲಾಗುತ್ತದೆ. ಆದ್ದರಿಂದ, ಪರಿಣಾಮದ ದೃಷ್ಟಿಯಲ್ಲಿ ಅವು ನಾಗರಿಕ ಬಾಂಬ್‌ದಾಳಿಗೆ ಸಮನಾಗುತ್ತವೆ. ನಾಗರಿಕರ ಮೇಲೆ ನಡೆಸುವ ಬಾಂಬ್ ದಾಳಿ ನಡೆಸುವ ಉದ್ದೇಶವೂ ಸಹ ಜನರಿಗೆ ನೋವು ಉಂಟುಮಾಡುವ ಮೂಲಕ ಅವರನ್ನು ಸಾಮೂಹಿಕವಾಗಿ ಶಿಕ್ಷಿಸುವುದೇ ಆಗಿರುತ್ತದೆ.

ಆದರೆ, ನಾಲ್ಕನೇ ಜಿನೀವಾ ಸಮಾವೇಶದ (**Geneva Convention**) ಕಲಮು 33ರ ಪ್ರಕಾರ, ಜನರು ಮಾಡದ ತಪ್ಪುಗಳಿಗೆ ಅವರ ಮೇಲೆ ಹೇರುವ ಪ್ರತೀಕಾರದ ಸಾಮೂಹಿಕ ಶಿಕ್ಷೆಯ ಕ್ರಮವು, ಒಂದು ಯುದ್ಧಾಪರಾಧವಾಗುತ್ತದೆ. ಆದ್ದರಿಂದ, ಸಾಮ್ರಾಜ್ಯಶಾಹಿಯು ಹೇರುವ ಏಕಪಕ್ಷೀಯ ನಿರ್ಬಂಧಗಳು ಯುದ್ಧಾಪರಾಧಕ್ಕಿಂತ ಕಡಿಮೆಯಲ್ಲ ಎಂಬುದು ಸ್ಪಷ್ಟವಾಗುತ್ತದೆ ಮತ್ತು ಝೆಲೆನ್ಸ್ಕಿ, ಮೋದಿಯವರಿಗೆ ನೀಡಿರುವ ಸಲಹೆಯು ಭಾರತವನ್ನು ಯುದ್ಧಾಪರಾಧದಲ್ಲಿ ಭಾಗಿಯಾಗುವಂತೆ ಮಾಡುತ್ತದೆ. ನಿರ್ಬಂಧಗಳು ರಷ್ಯಾದ ಜನರನ್ನು ಹೆಚ್ಚು ನೋಯಿಸುವುದು ಸಾಧ್ಯವಾಗಿಲ್ಲ ಎಂಬುದು ಮುಖ್ಯವಾದ ಅಂಶವಲ್ಲ. ಮುಖ್ಯವಾದ ಅಂಶವೆಂದರೆ, ಈ ನಿರ್ಬಂಧಗಳ ಹಿಂದಿರುವ ಉದ್ದೇಶ. ಅವು ನಾಗರಿಕರ ಮೇಲೆ ನಡೆಯುವ ಬಾಂಬ್ ದಾಳಿಯನ್ನು ಹೋಲುತ್ತವೆ ಮತ್ತು ಯುದ್ಧಾಪರಾಧಕ್ಕೆ ಸಮಾನವಾಗುತ್ತವೆ.

ನಿರ್ಬಂಧಗಳನ್ನು ಹೇರುವ ಬಗ್ಗೆ ಸಾಮ್ರಾಜ್ಯಶಾಹಿಗಳು ಕೊಡುವ ಒಂದು ಸಮರ್ಥನೆ ಎಂದರೆ, ನಿರ್ಬಂಧಗಳಿಗೆ ಒಳಗಾದ ದೇಶದ ಸರ್ಕಾರವು ಏನೋ ಒಂದು ತಪ್ಪು ಮಾಡಿದೆ ಎಂಬುದು. ಆದರೆ, ನಿರ್ಬಂಧಗಳಿಗೆ ಒಳಗಾದ ದೇಶದ ಸರ್ಕಾರವು ಮಾಡಿದೆ ಎಂದು ಹೇಳಲಾದ ತಪ್ಪುಗಳನ್ನು ಪರಿಶೀಲನೆಗೆ ಒಳಪಡಿಸಿದಾಗ ಕಂಡುಬರುವ ಸಂಗತಿಯೆಂದರೆ, ನಿರ್ಬಂಧಗಳ ಹೇರಿಕೆಯ ಬಗ್ಗೆ ಸಾಮ್ರಾಜ್ಯಶಾಹಿಗಳು ಕೊಡುವ ಸಮರ್ಥನೆಗೆ ಆಧಾರವೇ ಇರುವುದಿಲ್ಲ. ನಿರ್ಬಂಧಗಳಿಗೆ ಒಳಗಾದ ದೇಶದ ಸರ್ಕಾರವು ಕೈಗೊಂಡ ಕ್ರಮಗಳು (ಸಾಮ್ರಾಜ್ಯಶಾಹಿಗಳ ಪ್ರಕಾರ ಇವು ತಪ್ಪು ಕ್ರಮಗಳು), ಒಂದು ವೇಳೆ ಆ ದೇಶದ ಜನರ ಬೆಂಬಲವನ್ನು ಹೊಂದಿದ್ದರೆ, ಆಗ, ನಿರ್ಬಂಧಗಳ ಹೇರಿಕೆಯು ಜನರು ಹೊಂದಿರುವ ಸಾರ್ವಭೌಮತೆಯ ಉಲ್ಲಂಘನೆಯಾಗುತ್ತದೆ. ಒಂದು ದೇಶದ ಸರ್ಕಾರವು ಕೈಗೊಂಡ ಕ್ರಮಗಳ ಸಂಬಂಧವಾಗಿ ಆ ದೇಶದ ಜನರು ಸಾಮೂಹಿಕವಾಗಿ ಹೊಂದಿದ ನಿಲುವು ಒಂದು ವೇಳೆ ತಪ್ಪಾಗಿದ್ದರೆ, ಆಗ, ಆ ದೇಶದ ವಿರುದ್ಧವಾಗಿ ಹೇರುವ ನಿರ್ಬಂಧಗಳು ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ಬೆಂಬಲವನ್ನು ಪಡೆದುಕೊಳ್ಳುವುದು ಸಾಧ್ಯವಾಗುತ್ತದೆ. ಆದ್ದರಿಂದ, ನಿರ್ಬಂಧಗಳು ಏಕಪಕ್ಷೀಯವಾಗಿರಬೇಕಾಗಿಲ್ಲ. ಮತ್ತೊಂದೆಡೆಯಲ್ಲಿ, ನಿರ್ಬಂಧಗಳಿಗೆ ಒಳಗಾದ ದೇಶದ ಸರ್ಕಾರವು ಕೈಗೊಂಡ ಕ್ರಮಗಳಿಗೆ ಒಂದು ವೇಳೆ ಆ ದೇಶದ ಜನರ ಬೆಂಬಲ ಇಲ್ಲದಿದ್ದರೆ, ಆಗ, ಜನರಿಗೆ ನೋವುಂಟುಮಾಡುವ ನಿರ್ಬಂಧಗಳ ಹೇರಿಕೆಯು ನಾಗರಿಕ ಬಾಂಬ್ ದಾಳಿಗೆ ಸಮಾನವಾದ ಸಾಮೂಹಿಕ ಶಿಕ್ಷೆಯ ರೂಪವನ್ನು ಪಡೆಯುತ್ತದೆ ಮತ್ತು ಅದು ಒಂದು ಯುದ್ಧ–ಅಪರಾಧವಾಗುತ್ತದೆ.

ಬಾಂಬ್ ದಾಳಿಗಿಂತಲೂ ಕೆಟ್ಟದು

ಒಂದು ವಾಸ್ತವಾಂಶವೆಂದರೆ, ನಿರ್ಬಂಧಗಳು ಬೀರುವ ಪರಿಣಾಮಗಳು ನಾಗರಿಕರ ಮೇಲೆ ನಡೆಸುವ ಬಾಂಬ್ ದಾಳಿಗಿಂತಲೂ ಕೆಟ್ಟದಾಗಿರುತ್ತವೆ. ಇದಕ್ಕೆ ಕನಿಷ್ಠ ನಾಲ್ಕು ಕಾರಣಗಳನ್ನು ಕೊಡಬಹುದು. ಮೊದಲನೆಯದು, ಬಾಂಬ್ ದಾಳಿಗಳು, ಮಿಲಿಟರಿ ದೃಷ್ಟಿಯಲ್ಲಿ ಯಾವ ಪ್ರಾಮುಖ್ಯತೆಯನ್ನೂ ಹೊಂದಿರದ ನಾಗರಿಕರ ಮೇಲೆ ನಿರ್ದೇಶಿತವಾಗಿದ್ದಾಗಲೂ ಸಹ, ಅವುಗಳ ಪರಿಣಾಮಗಳು ಕೊನೆಯ ಪಕ್ಷ ನಿರ್ದಿಷ್ಟ ಪ್ರದೇಶಗಳಿಗೆ/ಸ್ಥಳಗಳಿಗೆ ಸೀಮಿತಗೊಳ್ಳುತ್ತವೆ. ಆದರೆ, ನಿರ್ಬಂಧಗಳು ಒಟ್ಟಾರೆಯಾಗಿ ಇಡೀ ಅರ್ಥವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತವೆ ಮತ್ತು ಆ ಕಾರಣದಿಂದಾಗಿ ಇಡೀ ದೇಶದ ಜನರ ಮೇಲೆ ಪರಿಣಾಮ ಬೀರುತ್ತವೆ. ಹಾಗಾಗಿ, ದೇಶದೊಳಗೆ ಬೇರೆಡೆ ಹೋಗುವ ಮೂಲಕ ಯಾರೊಬ್ಬರೂ ಆರ್ಥಿಕ ಪರಿಣಾಮಗಳಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ.

ಎರಡನೆಯದು, ಯುದ್ಧವು ಒಂದು ನಿರ್ದಿಷ್ಟ ಸೀಮಿತ ಅವಧಿಯಲ್ಲಿ ಮುಗಿಯುವುದರಿಂದ, ಅದರ ಭಾಗವಾಗಿ ಸಂಭವಿಸುವ ನಾಗರಿಕ ಬಾಂಬ್ ದಾಳಿಯೂ ಕೊನೆಗೊಳ್ಳುತ್ತದೆ. ಆದರೆ, ನಿರ್ಬಂಧಗಳು ಕೊನೆಯೇ ಇಲ್ಲದೆ ಮುಂದುವರಿಯುತ್ತಲೇ ಹೋಗಬಹುದು. ಒಂದು ಉದಾಹರಣೆಯಾಗಿ ಹೇಳುವುದಾದರೆ, ಕ್ಯೂಬಾದ ವಿರುದ್ಧದ ಹೇರಿದ ನಿರ್ಬಂಧಗಳು ದಶಕ ದಶಕಗಳಿಂದಲೂ ಜಾರಿಯಲ್ಲಿವೆ. ಅದೇ ರೀತಿಯಲ್ಲಿ, ಇರಾನ್ ವಿರುದ್ಧ ಹೇರಿದ ನಿರ್ಬಂಧಗಳೂ ಮುಂದುವರಿಯುತ್ತಲೇ ಇವೆ.

ಮೂರನೆಯದಾಗಿ, ನಿರ್ಬಂಧಗಳು ಉಂಟುಮಾಡುವ ಕಷ್ಟ ನಷ್ಟಗಳಿಗಿಂತಲೂ ಹೆಚ್ಚು ಮಾರಕವಾಗಿ ಪರಿಣಮಿಸುತ್ತವೆ. ಕಷ್ಟ ನಷ್ಟಗಳ ನಿಖರ ಅಂದಾಜುಗಳು ತುಂಬಾ ಕಷ್ಟಕರವಾಗಿರುತ್ತವೆ ಎಂಬುದು ನಿಜವಾದರೂ ಅವು ಬಹು ದೊಡ್ಡ ಬಲಿ ತೆಗೆದುಕೊಳ್ಳುತ್ತವೆ ಎಂಬುದು ಒಂದು ಉತ್ಪ್ರೇಕ್ಷೆಯೇ ಅಲ್ಲ. ಇಂತಹ ಕಷ್ಟ ನಷ್ಟಗಳಿಗೆ ಮತ್ತು ಸಾವು ನೋವುಗಳಿಗೆ, ಜನಸಾಮಾನ್ಯರಿಗೆ ಅತ್ಯವಶ್ಯವಾದ ಆಹಾರ ಮತ್ತು ಪ್ರಾಥಮಿಕ ಔಷಧಿಗಳ ನಿರಾಕರಣೆಗಳು ಕಾರಣವಾಗಿವೆ ಮತ್ತು ಈ ಹಿಂದೆ ನಿರ್ಬಂಧಗಳಿಗೆ ಒಳಗಾದ ಪ್ರತಿಯೊಂದು ದೇಶವೂ ಅನುಭವಿಸಿದ ವಿನಾಶಕಾರಿ ಪರಿಣಾಮದ ಜೊತೆಯಲ್ಲಿ ಆಹಾರ ಮತ್ತು ಔಷಧಗಳ ಕೊರತೆಯನ್ನೂ ಅನುಭವಿಸಿದೆ.

ನಾಲ್ಕನೆಯದು, ನಿಖರವಾಗಿ ಈ ಕಾರಣಕ್ಕಾಗಿ, ನಿರ್ಬಂಧಗಳು ಒಂದು ಬಹು ದೊಡ್ಡ ಸಂಖ್ಯೆಯ ವಯಸ್ಸಾದವರು, ಮಕ್ಕಳು ಮತ್ತು ಗರ್ಭಿಣಿಯರು, ಔಷಧಿಗಳ ಅಗತ್ಯವಿರುವವರು, ಇವರಿಗೆ ಆದಷ್ಟು ಮಟ್ಟಿಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಒಂದು ಸಾಮಾನ್ಯ ಒಪ್ಪಿಗೆ ಇದ್ದರೂ ಸಹ, ಇವರನ್ನು ಯುದ್ಧಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿ ಬಲಿ ತೆಗೆದುಕೊಳ್ಳುತ್ತವೆ.

ಮಿಲಿಟರಿ ಸಂಘರ್ಷಕ್ಕಿಂತಲೂ ಹೆಚ್ಚು ಅಪಾಯಕಾರಿ

ನಿರ್ಬಂಧಗಳಿಗೆ ಒಳಗಾದ ಒಂದು ದೇಶವು, ಈ ನಿರ್ಬಂಧಗಳಿಗೆ ಹೆದರದ ದೇಶಗಳಿಂದ ಆಹಾರ ಮತ್ತು ಔಷಧಿಗಳ ನಿರ್ದಿಷ್ಟ ಪ್ರಮಾಣದ ಸರಬರಾಜುಗಳನ್ನು ಏರ್ಪಡಿಸಿಕೊಳ್ಳಬಹುದಾದರೂ ಸಹ, ಈ ರೀತಿಯ ತೊಂದರೆಗಳನ್ನು ಜನರು ಅನುಭವಿಸುತ್ತಿರುವುದಕ್ಕೆ ಒಂದು ಅಧಿಕ ಕಾರಣವೂ ಇದೆ. ಅದು ಯಾವುದು ಎಂದರೆ, ನಿರ್ಬಂಧಗಳಿಗೆ ಒಳಗಾದ ಎಲ್ಲ ದೇಶಗಳೂ ಅತಿ ಹೆಚ್ಚಿನ ಮಟ್ಟದ ಹಣದುಬ್ಬರದಿಂದ ಬಳಲುತ್ತವೆ ಎಂಬುದು. ಹಣದುಬ್ಬರದಿಂದಾಗಿ ಜೀವನದ ಮೂಲಭೂತ ಅವಶ್ಯಕತೆಗಳನ್ನು, ಅವು ಲಭ್ಯವಿರುವಾಗಲೂ ಸಹ, ಒದಗಿಸಿಕೊಳ್ಳುವುದು ಹೆಚ್ಚಿನ ಜನರಿಗೆ ಸಾಧ್ಯವಾಗುವುದಿಲ್ಲ. ಎರಡು ಸ್ಪಷ್ಟ ಕಾರಣಗಳಿಂದಾಗಿ ಹಣದುಬ್ಬರವು ವೇಗ

ಪುಟ 15 ಕ್ಕೆ

ಮತಾಂತರ ಹೊಂದಿದ ದಲಿತರಿಗೆ ಎಸ್.ಸಿ. ಸ್ಥಾನಮಾನ ಆಯೋಗದ ನಿರ್ಣಾಯಕ ಪಾತ್ರ.......

ಪುಟ 8 ರಿಂದ

ಆದಿವಾಸಿಗಳ ಪರಂಪರೆ ರಕ್ಷಣೆಯ ಹೆಸರಿನಲ್ಲಿ ಆದಿವಾಸಿಗಳ ಬೃಹತ್ ಸಮಾವೇಶವನ್ನು ನಡೆಸಿ ಅದನ್ನು ಮೀಸಲಾತಿಯ ವಿರುದ್ಧ ಎತ್ತಿಕಟ್ಟಲು ಬಳಸಲಾಯಿತು. ಶಾಂತರಾಮ ಸಿದ್ದಿ ಯವರನ್ನು ವಿಧಾನ ಪರಿಷತ್ತಿನ ಸದಸ್ಯರನ್ನಾಗಿ ಮಾಡಿರುವುದು ಇಂತಹ ಕೆಲಸಕ್ಕೆ ನೇಮಿಸಿದಂತೆ ಕಾಣುತ್ತದೆ. 'ಪ.ಜಾತಿ, ಪ.ಪಂಗಡಗಳ ಜನ ಕ್ರಿಶ್ಚಿಯನ್, ಇಸ್ಲಾಂ ಮತಧರ್ಮಗಳಿಗೆ ಹೋಗುವುದೆಂದರೆ ಹಿಂದೂ ಧರ್ಮವನ್ನು ತ್ಯಜಿಸಿದಂತೆ. ಅಂತಹವರಿಗೆ ಯಾಕೆ ಸೌಲಭ್ಯ ಕೊಡಬೇಕು' ಎನ್ನುವ ತರ್ಕವನ್ನು ಮುಂದಿಡುತ್ತದೆ. ಅವರಿಗೆ ದಲಿತರು, ಆದಿವಾಸಿಗಳು ಯಾಕೆ ಮತಾಂತರ ಆಗುತ್ತಿದ್ದಾರೆ ಎನ್ನುವ ಅಂಶ ಒಂದು ಪರಿಶೀಲಿಸಬೇಕಾದ ಗಹನವಾದ ಪ್ರಶ್ನೆಯಲ್ಲ, ಜನ ಜೀವನದ ಬಗ್ಗೆ ಜತನವಿಲ್ಲ.

ಪರಿಶೀಲಿಸಬೇಕಾದ ಒಂದು ಗಂಭೀರ ಪ್ರಶ್ನೆಯೊಂದಿದೆ. ಆದಿವಾಸಿಗಳು, ದಲಿತರು ಹಿಂದೂ ಮತಧರ್ಮದ ಭಾಗವೇ? ಇದರಲ್ಲಿ ದಲಿತರು–ಪ.ಜಾತಿಗಳಲ್ಲಿರುವವರು ಚಾತುರ್ವರ್ಣ ವ್ಯವಸ್ಥೆಯ ಹಿಂದೂ ಧರ್ಮ ಎನ್ನುವುದರ ಭಾಗವಾಗಿದ್ದಾರೆ. ಆದರೆ ಆದಿವಾಸಿಗಳು ಅಲ್ಲ. ಅವರಿಗೆ ಅವರದ್ದೇ ಆದ ಪ್ರಕೃತಿ ಧರ್ಮ ಇದೆ. ದಲಿತರು ಅಸ್ಪೃಶ್ಯತೆಯಂತಹ ಅಮಾನವೀಯ ವ್ಯವಸ್ಥೆಯ ಕಾರಣಕ್ಕೂ ಆರ್ಥಿಕ, ಸಾಮಾಜಿಕ ಕಾರಣದಲ್ಲೂ ಅತ್ಯಂತ ತುಳಿತಕ್ಕೆ ಒಳಗಾಗಿ ತಾರತಮ್ಯವನ್ನು ಅನುಭವಿಸುತ್ತಾ ಬಂದಿದ್ದಾರೆ. ಹುಟ್ಟಿನ ಕಾರಣಕ್ಕೆ ಒಂದು ಮತಧರ್ಮವನ್ನು ಅನುಸರಿಸಲೇ ಬೇಕು, ಸೇರಲೇಬೇಕು ಎನ್ನುವ ಒತ್ತಾಯವಾದರೂ ಏಕೆ? ಜನಗಣತಿಯಲ್ಲಿ ಹಿಂದೂ ಎಂದು ಬರೆಸಲು ಆದಿವಾಸಿಗಳನ್ನು ಒತ್ತಾಯಿಸಲಾಗುತ್ತಿದೆ.

ಮತಾಂತರಗೊಂಡ ಬುಡಕಟ್ಟು ವ್ಯಕ್ತಿಗಳು ತಮ್ಮ ಎಸ್.ಟಿ. ಸ್ಥಾನಮಾನವನ್ನು ಉಳಿಸಿಕೊಳ್ಳಬೇಕೇ ಎಂಬುದು ಚರ್ಚೆ ಮತ್ತು ನೀತಿ ಆಗಬೇಕು. ಐತಿಹಾಸಿಕವಾಗಿ, ಪ.ಪಂಗಡದ ಸ್ಥಾನಮಾನದ ಮಾನದಂಡಗಳು ಮೂಲಭೂತವಾಗಿ, ಸಾಂಪ್ರದಾಯಿಕ ಬುಡಕಟ್ಟು ಆಚರಣೆಗಳು, ಸಂಸ್ಕೃತಿ ಮತ್ತು ಸಾಮಾಜಿಕ ಗುರುತನ್ನು (ಐಡೆಂಟಿಟಿ) ಆಧರಿಸಿವೆ. ಆದಾಗ್ಯೂ, ಧಾರ್ಮಿಕ ಮತಾಂತರಗಳು ಸಂಭವಿಸಿದಂತೆ, ಮತಾಂತರಗೊಂಡ ಆದಿವಾಸಿಗಳ ಸ್ಥಿತಿಯನ್ನು ಹೇಗೆ ಪರಿಹರಿಸುವುದು ಎಂಬ ಪ್ರಶ್ನೆಗಳು ಉದ್ಭವಿಸಿದವು. ಅವನ್ನು ಪರಿಹರಿಸಬೇಕು.

ಈ ಎರಡು ವಿಭಾಗಗಳು ಯಾವುದೇ ಧರ್ಮಕ್ಕೆ ಮತಾಂತರ ಆದಾಗಲೂ ಅವರ ಆರ್ಥಿಕ, ಸಾಮಾಜಿಕ ಸ್ಥಾನಮಾನ ಸುಧಾರಿಸುವುದಿಲ್ಲ. ಇದನ್ನು ಹಲವು ಅಧ್ಯಯನಗಳು ತಿಳಿಸಿವೆ. ಆದ್ದರಿಂದ ಅವರಿಗೂ ಪ.ಜಾತಿ, ಪ.ಪಂಗಡದ ಸ್ಥಾನಮಾನ, ಸೌಲಭ್ಯಗಳು ಅನಿವಾರ್ಯ ಮತ್ತು ಅಗತ್ಯ.

ಬೇಕು ಪ್ರಬಲ ಪ್ರತಿಪಾದನೆ

ಆದರೆ ಈ ಪ್ರಶ್ನೆಗೆ ಸಂವಿಧಾನಾತ್ಮಕ, ಕಾನೂನಾತ್ಮಕ ಪರಿಹಾರದ ಅಗತ್ಯವೂ ಇದೆ. ಅಲ್ಲಿ ಅಡ್ಡಿಯಾಗಿರುವ ಅಂಶಗಳನ್ನು ಇಂದಿನ ವಾಸ್ತವಗಳ ಹಿನ್ನೆಲೆಯಲ್ಲಿ ಪುನರ್ ರೂಪಿಸಬೇಕು. ಮುಕ್ತವಾದ ಮನಸ್ಸಿನಿಂದ, ವಾಸ್ತವಿಕ ಸ್ಥಿತಿಗಳಿಂದ ಪಡೆಯಲಾದ, ನಡೆಸಲಾದ ಅಧ್ಯಯನದ ವರದಿ ಈ ದೆಸೆಯಲ್ಲಿ ಪರಿಹಾರ ನೀಡಬೇಕು. ಈ ಆಯೋಗಕ್ಕೆ ಸಂಬಂಧಿಸಿದ ಸಮುದಾಯಗಳು, ಸಂಘಟನೆಗಳು ವಿಪುಲವಾದ ಮಾಹಿತಿಗಳನ್ನು ಒದಗಿಸುವುದು ಮತ್ತು ಪ್ರಬಲ ಪ್ರತಿಪಾದನೆ ಮೂಲಕ ಸಕ್ರಿಯ ಪಾತ್ರವನ್ನು ವಹಿಸಬೇಕು. ಪ್ರತಿ ರಾಜ್ಯಗಳಿಂದ, ಪ್ರಾದೇಶಿಕವಾಗಿಯೂ ನೀಡುವ ಮಾಹಿತಿಗಳು, ಪ್ರತಿಪಾದನೆಗಳು ಮಹತ್ವದ್ದಾಗಿವೆ. (ಲಿಖಿತವಾಗಿ ಸಲ್ಲಿಸಲು ಅವಕಾಶ ಇದೆ) ಈ ದೃಷ್ಟಿಯಲ್ಲಿ ಈ ಆಯೋಗದ ವರದಿ ನಿರ್ಣಾಯಕವಾಗಲಿದೆ.

1990ರ ನಂತರ, ಈ ಉದ್ದೇಶಕ್ಕಾಗಿ ಹಲವಾರು ಖಾಸಗಿ ಸದಸ್ಯ ಮಸೂದೆಗಳನ್ನು ಸಂಸತ್ತಿನಲ್ಲಿ ತರಲಾಯಿತು.

1996 ರಲ್ಲಿ, ಸಂವಿಧಾನದ (ಪರಿಶಿಷ್ಟ ಜಾತಿಗಳು) ಆದೇಶಗಳ (ತಿದ್ದುಪಡಿ) ಮಸೂದೆಯನ್ನು ರಚಿಸಲಾಯಿತು, ಆದರೆ ಭಿನ್ನಾಭಿಪ್ರಾಯಗಳ ಹಿನ್ನೆಲೆಯಲ್ಲಿ, ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲಾಗಿಲ್ಲ.

ಪ್ರಧಾನಿ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರವು ಎರಡು ಪ್ರಮುಖ ಸಮಿತಿಗಳನ್ನು ಸ್ಥಾಪಿಸಿತು:

ಅಕ್ಟೋಬರ್ 2004 ರಲ್ಲಿ ರಂಗನಾಥ್ ಮಿಶ್ರಾ ಆಯೋಗ ಎಂದು ಜನಪ್ರಿಯವಾಗಿ ಕರೆಯಲ್ಪಡುವ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗ

ಇದು 2007 ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು, SC ಸ್ಥಾನಮಾನವನ್ನು "ಧರ್ಮದಿಂದ ಸಂಪೂರ್ಣವಾಗಿ ಡಿ–ಲಿಂಕ್ ಮಾಡಬೇಕು ಮತ್ತು ಪರಿಶಿಷ್ಟ ಪಂಗಡಗಳಂತೆ ಪರಿಶಿಷ್ಟ ಜಾತಿಗಳನ್ನು ಸಂಪೂರ್ಣವಾಗಿ ಧರ್ಮ–ತಟಸ್ಥಗೊಳಿಸಬೇಕು.

ಮಾರ್ಚ್ 2005 ರಲ್ಲಿ ಮುಸ್ಲಿಮರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಯನ್ನು ಅಧ್ಯಯನ ಮಾಡಲು ದೆಹಲಿ ಹೈಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿ ರಾಜಿಂದರ್ ಸಾಚಾರ್ ನೇತೃತ್ವದ ಏಳು ಸದಸ್ಯರ ಉನ್ನತ ಮಟ್ಟದ ಸಮಿತಿ.

ದಲಿತ ಮುಸ್ಲಿಮರು ಮತ್ತು ದಲಿತ ಕ್ರಿಶ್ಚಿಯನ್ನರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯು ಮತಾಂತರದ ನಂತರ ಸುಧಾರಿಸಲಿಲ್ಲ ಎಂದು ಸಾಚಾರ್ ಆಯೋಗದ ವರದಿ ಗಮನಿಸಿದೆ.

ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗ ಮತ್ತು ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗವು 2011 ರಲ್ಲಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಅಫಿಡವಿಟ್‌ಗಳಲ್ಲಿ ದಲಿತ ಮುಸ್ಲಿಮರು ಮತ್ತು ದಲಿತ ಕ್ರಿಶ್ಚಿಯನ್ನರಿಗೆ ಎಸ್ಸಿ ಸ್ಥಾನಮಾನವನ್ನು ನೀಡಲು ಶಿಫಾರಸು ಮಾಡಿತ್ತು. ❍

ಎಲ್‌ಐಸಿ: ಜನರ ಉಳಿತಾಯದ ಮೇಲೆ.......

ಪುಟ 4 ರಿಂದ

ಎಸ್ಟೇಟ್ ಆಸ್ತಿಗಳ ಮಾರಾಟ ಯೋಜನೆಯನ್ನು ರೂಪಿಸಲು ವಿಮಾ ಬೆಹೆಮೊಥ್ ಆಂತರಿಕ ತಂಡವನ್ನು ಒಟ್ಟುಗೂಡಿಸಿದೆ ಎಂದು ಕೆಲವು ಮೂಲಗಳನ್ನು ಉಲ್ಲೇಖಿಸಿ ವರದಿ ಮಾಡಿದೆ.

ಆದರೆ, ಎಲ್‌ಐಸಿ ಈ ವರದಿಯನ್ನು ನಿರಾಕರಿಸಿದೆ ಮತ್ತು ಅಂತಹ ಯಾವುದೇ ಯೋಜನೆ ಇಲ್ಲ ಎಂದು ಹೇಳಿದೆ. "ಮುಖ್ಯವಾಹಿನಿಯ ಮಾಧ್ಯಮಗಳಲ್ಲಿ ಪ್ರಕಟವಾದ ಸುದ್ದಿಯು ತಪ್ಪಾಗಿದೆ ಎಂದು ನಾವು ಈ ಮೂಲಕ ಸ್ಪಷ್ಟಪಡಿಸುತ್ತೇವೆ" ಎಂದು ಅದು ಹೇಳಿದೆ. ಲೈವ್‌ಮಿಂಟ್ ಮಾಡಿದ ವರದಿಯನ್ನು ಸಂಸ್ಥೆಯು ನಿರಾಕರಿಸಿದೆಯಾದರೂ, ಸರ್ಕಾರದ ನೀತಿ ನಿಲುವುಗಳನ್ನು ನೋಡಿದಾಗ ಇದನ್ನು ಅಲ್ಲಗಳೆಯಲಾಗದು.

ಎಲ್‌ಐಸಿ ಮೇಲೆ ಅಚಲವಾದ ನಂಬಿಕೆ

ಖಾಸಗಿ ವಿಮಾ ಸಂಸ್ಥೆಗಳಿಗೆ ಹೋಲಿಸಿದರೆ, ಪಾಲಿಸಿದಾರರಿಗೆ ಎಲ್‌ಐಸಿ ಮೇಲಿನ ನಂಬಿಕೆ ಅಚಲವಾದದ್ದು. 'ಅಚಲವಾದ ನಂಬಿಕೆ' ಎಂದರೇನು ಎಂಬುದಕ್ಕೆ ಖ್ಯಾತ ಲೇಖಕ ರಾಬಿನ್ ಶರ್ಮಾ ಅವರು ಹೀಗೆ ಉದಾಹರಿಸುತ್ತಾರೆ. ಒಂದು ವಿಮಾನವು ಗಾಳಿಯಲ್ಲಿ ಹಾರುತ್ತಿತ್ತು ಮತ್ತು ತೀವ್ರ ನಡುಕವನ್ನು ಅನುಭವಿಸಿತು. ಅದರಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರು ನಡುಗುತ್ತಿರುವಾಗ, ಒಬ್ಬ ಹುಡುಗಿ ತುಂಬಾ ಧೈರ್ಯದಿಂದ ಕುಳಿತಿದ್ದಾಳೆ. ಅವಳು ಹೇಗೆ ಧೈರ್ಯಶಾಲಿಯಾಗಿದ್ದಾಳೆ ಎಂದು ಅಲ್ಲಿದ್ದವರಿಗೆ ಆಶ್ಚರ್ಯ. ನಿನಗೆ ಇಷ್ಟೊಂದು ಧೈರ್ಯ ಯಾಕೆ ಎಂದು ಆಕೆಯನ್ನು ಕೇಳುತ್ತಾರೆ. ಆ ಹುಡುಗಿ ಹೇಳುತ್ತಾಳೆ 'ಈ ವಿಮಾನದ ಪೈಲಟ್ ನನ್ನ ತಂದೆ. ಎಂತಹ ಪರಿಸ್ಥಿತಿಯಲ್ಲೂ ನನ್ನನ್ನು ಕಾಪಾಡುತ್ತಾನೆ ಎಂಬ ನಂಬಿಕೆ ನನಗಿದೆ'. ವಿಮಾನದಲ್ಲಿದ್ದವರೆಲ್ಲರೂ ಚಪ್ಪಾಳೆ ತಟ್ಟಿತ್ತಾರೆ. ಈ ಕಥೆಯಲ್ಲಿ ಬರುವ ಹುಡುಗಿನಂತೆಯೇ ಕೋಟಿಗಟ್ಟಲೆ ಜನರಿಗೆ ಎಲ್‌ಐಸಿ ಮೇಲೆ ಅಚಲವಾದ ನಂಬಿಕೆ ಇದೆ. ಏನೇ ಏರಿಳಿತಗಳು ಸಂಭವಿಸಿದರೂ ಎಲ್‌ಐಸಿ ತನ್ನ ಬೆಂಬಲಕ್ಕೆ ನಿಲ್ಲುತ್ತದೆ ಎಂಬ ಭರವಸೆ ಇರುವುದರಿಂದ ಎಲ್‌ಐಸಿ ವಿಮಾ ವಲಯದಲ್ಲಿ ಬಹಳಷ್ಟು ಪ್ರಾಬಲ್ಯ ಸಾಧಿಸುತ್ತಿದೆ.

ಎಲ್‌ಐಸಿಯ ಖಾಸಗೀಕರಣವು ನಿಸ್ಸಂದೇಹವಾಗಿ ನೀತಿಗಳಿಗೆ ಸಾರ್ವಭೌಮ ಖಾತರಿಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಸಾಮಾನ್ಯ ಜನರ ಸಾಮಾನ್ಯ ಅಪಾಯದ ನಿವಾರಣೆಯನ್ನು ಗಮನಿಸಿದರೆ, LIC ಯಲ್ಲಿನ ಜನಪ್ರಿಯ ನಂಬಿಕೆಯ ಹಿಂದೆ ಖಾತರಿಯು ಒಂದು ಪ್ರಮುಖ ಅಂಶವಾಗಿದೆ. ಖಾಸಗೀಕರಣಗೊಂಡ ಎಲ್‌ಐಸಿ ಆಡಳಿತದಲ್ಲಿ, ಲಾಭವನ್ನು ಹೆಚ್ಚಿಸಲು ಮುಂದಾಗುತ್ತವೆ. ಅದಕ್ಕಾಗಿ ಷೇರು ಮಾರುಕಟ್ಟೆಗಳಲ್ಲಿ ಹೂಡಿಕೆ ಮಾಡುತ್ತವೆ. ಹೂಡಿಕೆಗಳು ಹೆಚ್ಚಿನ ಲಾಭಕ್ಕಾಗಿಯಾದರೂ, ಅಪಾಯಕಾರಿ ಷೇರು ಮತ್ತು ಬಾಂಡ್ ಮಾರುಕಟ್ಟೆಗಳಿಗೆ ಇದು ಬದಲಾಗುತ್ತವೆ. ಇದು ಅಪಾಯಕಾರಿ ವ್ಯವಹಾರವಾಗಬಹುದು. 1990 ಮತ್ತು 2020 ರ ನಡುವೆ, US ನಲ್ಲಿ 82 ವಿಮಾ ಕಂಪನಿಗಳು ಮುಚ್ಚಿಹೋಗಿವೆ ಎಂಬುದನ್ನು ನೆನಪಿಸಿಕೊಳ್ಳಬೇಕು.

ಕ್ಲೈಮ್ ಇತ್ಯರ್ಥದೊಂದಿಗೆ ವಿಶ್ವದಲ್ಲೇ ಮೊದಲ ಸ್ಥಾನ

ಎಲ್‌ಐಸಿ ಶೇ.99 ರಷ್ಟು ಕ್ಲೈಮ್ ಇತ್ಯರ್ಥದೊಂದಿಗೆ ವಿಶ್ವದಲ್ಲೇ ಮೊದಲ ಸ್ಥಾನದಲ್ಲಿದೆ. 2023–24 ರ ಹಣಕಾಸು ವರ್ಷದಲ್ಲಿ, LIC ಎರಡು ಕೋಟಿಗೂ ಹೆಚ್ಚು ಕ್ಲೈಮ್ ಗಳನ್ನು ಪಾವತಿಸಿದೆ ಮತ್ತು ಕ್ಲೈಮ್ ಗಳ ಸೆಟಲ್ಮೆಂಟ್ ನಲ್ಲಿ ವಿಶ್ವದ ಅತ್ಯುತ್ತಮ ವಿಮಾದಾರ ಎಂದು ಹೆಸರಾಗಿದೆ. ಕಳೆದ ಆರ್ಥಿಕ ವರ್ಷವೊಂದರಲ್ಲೇ 2,09,938.63 ಕೋಟಿ ಇತ್ಯರ್ಥವಾಗಿದ್ದು, 225.51 ಲಕ್ಷ ಕ್ಲೇಮ್ ಗಳನ್ನು ಇತ್ಯರ್ಥಪಡಿಸಲಾಗಿದೆ. ಸಾವಿನ ಹಕ್ಕುಗಳ 98.6 ಪ್ರತಿಶತ ಪರಿಹಾರ ಮತ್ತು ಪಾಲಿಸಿದಾರರ ನಂಬಿಕೆಯನ್ನು ಉಳಿಸಿಕೊಂಡಿದೆ. 27.74 ಕೋಟಿ ಪಾಲಿಸಿಗಳನ್ನು ಪೂರೈಸುತ್ತಿರುವ ಎಲ್‌ಐಸಿ ವಿಶ್ವದಲ್ಲೇ ಅತಿ ಹೆಚ್ಚು ಪಾಲಿಸಿದಾರರನ್ನು ಹೊಂದಿರುವ ಅತಿ ದೊಡ್ಡ ಕಂಪನಿಯಾಗಿ ಹೊರಹೊಮ್ಮಿದೆ.

2019–20 ರಲ್ಲಿ, ವಿಮಾ ವಲಯದಲ್ಲಿ ಭಾರತದಲ್ಲಿನ ಅನ್ಯಾಯದ ವ್ಯವಹಾರ ಅಭ್ಯಾಸದ ದೂರುಗಳ ಒಟ್ಟು ಸಂಖ್ಯೆ 43,444 ಆಗಿತ್ತು, ಅದರಲ್ಲಿ ಶೇ.90 ಖಾಸಗಿ ವಿಮಾದಾರರಿಗೆ ಸಂಬಂಧಿಸಿದೆ. ಒಟ್ಟು ವ್ಯವಹಾರದಲ್ಲಿ ಅವರ ಪಾಲು ಕೇವಲ ಶೇ.34 ಎಂದು ನೆನಪಿಸಿಕೊಳ್ಳಬಹುದು. 2021 ರಲ್ಲಿ, ಎಲ್‌ಐಸಿಯ ನಿರ್ವಹಣಾ ವೆಚ್ಚವು ಪ್ರೀಮಿಯಂನ ಕೇವಲ ಶೇ.8.68 ರಷ್ಟಿತ್ತು ಮತ್ತು ಖಾಸಗಿ ವಿಮಾ ಕಂಪನಿಗಳದು ಶೇ. 11.72 ಆಗಿತ್ತು.

ಶೇ.48 ಕ್ಕಿಂತ ಹೆಚ್ಚು ಪ್ರತಿನಿಧಿಗಳು ಗ್ರಾಮೀಣ ಪ್ರದೇಶದವರು

ಎಲ್‌ಐಸಿಯಲ್ಲಿ ಕೆಲಸ ಮಾಡುವ 14 ಲಕ್ಷ ಏಜೆಂಟರಲ್ಲಿ ಶೇ.48 ಕ್ಕಿಂತ ಹೆಚ್ಚು ಜನರು ಇಂದು ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಿಗಳಾಗಿದ್ದಾರೆ. ದೇಶದ ವಿಮಾ ವಲಯದ 26 ಖಾಸಗಿ ವಿಮಾ ಕಂಪನಿಗಳು ಒಟ್ಟಾಗಿ ದೇಶದ ಶೇ.79 ರಷ್ಟು ಜಿಲ್ಲೆಗಳಲ್ಲಿ ವಿಮಾ ಕಚೇರಿಗಳನ್ನು ಹೊಂದಿದ್ದರೆ, ಎಲ್‌ಐಸಿ ಮಾತ್ರವೇ ಶೇ.92 ಜಿಲ್ಲೆಗಳಲ್ಲಿ ಕಚೇರಿಗಳನ್ನು ಹೊಂದಿದೆ. ಖಾಸಗಿ ವಿಮಾ ಕಂಪನಿಗಳಿಗೆ ವ್ಯತಿರಿಕ್ತವಾಗಿ, LIC ಯ ಶೇ. 60ಕ್ಕಿಂತ ಹೆಚ್ಚು ಶಾಖೆಗಳು 1 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಸಣ್ಣ ಪಟ್ಟಣಗಳಲ್ಲಿವೆ.

ಭಾರತದ ಹೆಚ್ಚಿನ ಭಾಗಗಳಲ್ಲಿ, ಬಡವರಿಗೆ ಯಾವುದೇ ಸಾಮಾಜಿಕ ಭದ್ರತೆಯ ರಕ್ಷಣೆ ಇಲ್ಲ. ಕಡಿಮೆ ಪ್ರೀಮಿಯಂಗಳಲ್ಲಿ ಹಲವಾರು ಸಾಮಾಜಿಕ ಭದ್ರತಾ ವಿಮಾ ಕಾರ್ಯಕ್ರಮಗಳು, ಆಕರ್ಷಕ ಸ್ಥಿರ ಠೇವಣಿ ಯೋಜನೆಗಳು ಮತ್ತು ಸ್ವ–ಸಹಾಯ ಗುಂಪುಗಳಿಗೆ ವಿಶೇಷ ಉದ್ಯಮಗಳ ಮೂಲಕ ಎಲ್‌ಐಸಿ ಅವರಿಗೆ ಪೂರೈಸುತ್ತದೆ.

ಆದರೆ, ಇಂದಿನ ಪ್ರಭುತ್ವ ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಸ್ವಾತಂತ್ರ ಚಳುವಳಿಗಾರರ ಆಶಯಗಳಿಗೆ ವಿರುದ್ಧವಾಗಿ ವಿಮಾ ವಲಯವನ್ನು ಖಾಸಗೀಕರಣಗೊಳಿಸಲು ಮುಂದಾಗಿದೆ. ಆ ಮೂಲಕ ಪ್ರಭುತ್ವ ಜನರ ಉಳಿತಾಯದ ಮೇಲಿನ ಸರ್ಕಾರದ ನಿಯಂತ್ರಣವನ್ನು ತೆಗೆದು ಹಾಕಿ ಅದನ್ನು ಖಾಸಗಿಯವರಿಗೆ ಒಪ್ಪಿಸಲು ಮುಂದಾಗಿದೆ. ಇದನ್ನು ತಡೆಯಲು ನಾವೆಲ್ಲರೂ ಮುಂದಾಗಬೇಕಿದೆ. ❍

ವಿಷವುಣಿಸಿ ದಲಿತ ಯುವತಿಯ ಕೊಲೆ.......

ಪುಟ 3 ರಿಂದ

ಕೂಡಲೇ 6 ಜನ ಆರೋಪಿಗಳನ್ನು ಬಂಧಿಸಬೇಕು. ಈ ಪ್ರಕರಣದ ಬಗೆಗೆ ಸರಿಯಾದ ತನಿಖೆ ನಡೆಯಬೇಕು. ಹೀನಾಯ ರೀತಿಯ ಅಸ್ಪೃಶ್ಯತೆ ಆಚರಣೆ, ಹೆಣ್ಣಿನ ಮೇಲಿನ ದೌರ್ಜನ್ಯ ಹಾಗೂ ಕೊಲೆ ಈ ಎಲ್ಲ ಅಪರಾಧಗಳನ್ನು ಎಸಗಿರುವ ಎಲ್ಲ ಅಪರಾಧಿಗಳಿಗೆ ಕಠಿಣ ಶಿಕ್ಷೆ ನೀಡಬೇಕು ಎಂಬುದು ಮರಿಯಮ್ಮಳ ಕುಟುಂಬ ಸದಸ್ಯರು ಹಾಗೂ ಸಾಮಾಜಿಕ ಕಳಕಳಿಯುಳ್ಳ ಎಲ್ಲರ ಒತ್ತಾಯವಾಗಿದೆ.

ಕನಕಗಿರಿ ಕ್ಷೇತ್ರ ಮೀಸಲು ವಿಧಾನ ಸಭಾ ಕ್ಷೇತ್ರ ಆಗಿದೆ. ಆದರೆ ಈ ಮೀಸಲು ಕ್ಷೇತ್ರದ ವ್ಯಾಪ್ತಿಗೆ ಬರುವ ಪೊಲೀಸ್ ಠಾಣೆಗಳಲ್ಲಿ ದಲಿತ ಕುಟುಂಬಗಳ ಸಮಸ್ಯೆ–ನೋವುಗಳಿಗೆ ಪೋಲಿಸ್ ಇಲಾಖೆ ಸರಿಯಾದ ರೀತಿಯಲ್ಲಿ ಸ್ಪಂದನೆ ಮಾಡುತ್ತಿಲ್ಲ ಎಂಬುದು ಇಲ್ಲಿನ ಜನರ ತೀವ್ರವಾದ ಆಕ್ಷೇಪವಾಗಿದೆ. ಕೊಲೆ ಘಟನೆ ನಡೆದು 15 ದಿನಗಳಾದರೂ ಸಹ ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಲಿ, ಸಂಸದರಾಗಲಿ ಅಥವಾ ವಿಠಲಾಪುರ ಗ್ರಾಮವನ್ನೊಳಗೊಳ್ಳುವ ಗಂಗಾವತಿ ಕ್ಷೇತ್ರದ ಶಾಸಕರಾದ ಜನಾರ್ಧನ ರೆಡ್ಡಿಯವರಾಗಲಿ ಮರಿಯಮ್ಮಳ ಕುಟುಂಬ ಸದಸ್ಯರನ್ನು ಭೇಟಿ ಮಾಡಿ ಸಾಂತ್ವನ ಹೇಳದಿರುವುದು ದುರಾದೃಷ್ಟಕರವಾಗಿದೆ.

ಇಂತಹ ವಿಷಾದಮಯ ಪರಿಸ್ಥಿತಿಯಲ್ಲಿ ಕೊಪ್ಪಳ ಜಿಲ್ಲೆಯಲ್ಲಿರುವ ದಲಿತ ಸಮುದಾಯದ ಜನರು ಮತ್ತು ವಾಲ್ಮೀಕಿ ಸಮಯದಾಯದ ಜನರು ಸೇರಿದಂತೆ ಮಾನವೀಯತೆಯ ಪರವಾದ ಎಲ್ಲ ಜನರು ಎಚ್ಚೆತ್ತುಕೊಂಡು ಅಸ್ಪೃಶ್ಯತೆ ವಿರುದ್ಧ ಹಾಗೂ ಶೋಷಿತ ಸಮುದಾಯಗಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ ಸಂಘಟಿತರಾಗಬೇಕಿದೆ. ಪ್ರತಿರೋಧ ಒಡ್ಡಬೇಕಿದೆ.

ವರದಿ: ಗ್ಯಾನೇಶ್ ಕಡಗದ

ಏಕಪಕ್ಷೀಯ ಆರ್ಥಿಕ ನಿರ್ಬಂಧ......

ಪುಟ 13 ರಿಂದ

ಪಡೆಯುತ್ತದೆ.

ಮೊದಲನೆಯದು, ದೇಶವು ತನ್ನ ಕೆಲವು ಮೂಲಭೂತ ಸರಕುಗಳ ಸರಬರಾಜುಗಳನ್ನು ಮಿತ್ರ ದೇಶಗಳಿಂದ ಪಡೆಯಬಹುದಾದರೂ ಸಹ, ಒಂದಿಷ್ಟು ಕೊರತೆ ಸಾಮಾನ್ಯವಾಗಿ ದೇಶದೊಳಗೆ ಉಳಿದೇ ಬಿಡುತ್ತದೆ. ಈ ಅಂಶವೇ ಹಣದುಬ್ಬರವನ್ನು ತೀವ್ರಗೊಳಿಸುತ್ತದೆ. ಎರಡನೆಯದು, ನಿರ್ಬಂಧಗಳು ಉಂಟುಮಾಡುವ ಒಂದು ಅನಿವಾರ್ಯ ಪರಿಣಾಮವೆಂದರೆ, ಅದು ಉದ್ದೇಶಿತ ದೇಶದ ವಿನಿಮಯ ದರವನ್ನು ಅಪಮೌಲ್ಯಗೊಳಿಸುತ್ತದೆ.

ದೇಶದ ಕರೆನ್ಸಿಯ ಅಪಮೌಲ್ಯವು ಹಲವಾರು ಕಾರಣಗಳಿಂದಾಗಿ ಸಂಭವಿಸುತ್ತದೆ: ರಫ್ತುಗಳು ತೀವ್ರವಾಗಿ ಇಳಿಯುತ್ತವೆ. ಸಾಮಾನ್ಯವಾಗಿ ದೇಶಕ್ಕೆ ಅನಿವಾಸಿಗಳಿಂದ ಒಳಹರಿಯುವ ಹಣ ರವಾನೆ ಮತ್ತು ದೇಶಕ್ಕೆ ಒಳಹರಿಯುವ ವಿದೇಶಿ ಹೂಡಿಕೆಯ ಹಣ, ಇವು ಬತ್ತಿ ಹೋಗುತ್ತವೆ. ಮತ್ತು, ನಿರ್ಬಂಧಗಳನ್ನು ಹೇರುವ ದೇಶಗಳ ಬ್ಯಾಂಕುಗಳಲ್ಲಿ ಇರಿಸಲಾದ ಆ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹದ ಹಣವು ಉದ್ದೇಶಪೂರ್ವಕವಾಗಿ ಸಿಗದಂತೆ ಮಾಡಲಾಗುತ್ತದೆ.

ಮೂಲಭೂತ ಸರಕುಗಳ ಸರಬರಾಜುಗಳನ್ನು ಹಾಗೂ ಹೀಗೂ ಹೊಂದಿಸಿಕೊಂಡರೂ ಸಹ, ಸರಕು ಸಾಮಗ್ರಿಗಳ ಅಂತಿಮ ಬೆಲೆಗಳನ್ನು ಅವುಗಳ ಅಂತಾರಾಷ್ಟ್ರೀಯ ಬೆಲೆಗಳೊಂದಿಗೆ ಹೊಂದಿಸಿ ನಿಗದಿಪಡಿಸುವ ಕಾರಣದಿಂದಾಗಿ ಮತ್ತು ವಿನಿಮಯ ದರದ ಅಪಮೌಲ್ಯದ ಕಾರಣದಿಂದಾಗಿ, ಅವುಗಳ ದೇಶೀಯ ಬೆಲೆಗಳು ಹೆಚ್ಚಾಗುತ್ತವೆ. ಹಾಗಾಗಿ, ಜನರು ಅವುಗಳನ್ನು ಕೊಳ್ಳುವುದು ಸಾಧ್ಯವಾಗುವುದಿಲ್ಲ. ವಿಷಯವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ನಿರ್ಬಂಧಗಳಿಗೆ ಹೆದರದ ಮಿತ್ರ ದೇಶಗಳಿಂದ ಸಹಾಯವನ್ನು ಪಡೆಯಬಹುದಾದಾಗಲೂ ಸಹ, ನಿರ್ಬಂಧಗಳು ಉದ್ದೇಶಿತ ದೇಶಕ್ಕೆ ಅಪಾರ ಹಾನಿಯನ್ನುಂಟುಮಾಡುತ್ತವೆ.

ನಿರ್ಬಂಧಗಳು, ಯುದ್ಧದ ಒಂದು ಸೂಕ್ಷ್ಮ ರೂಪ ಮಾತ್ರವೇ ಅಲ್ಲ, ಮುಕ್ತ ಮಿಲಿಟರಿ ಸಂಘರ್ಷಕ್ಕಿಂತಲೂ ಹೆಚ್ಚು ಅಪಾಯಕಾರಿ ರೂಪವೂ ಹೌದು. ಈ ಅಂಶವನ್ನು, ಅವು ಸೌಮ್ಯವಾಗಿ ತೋರುವುದರಿಂದ ಮರೆಮಾಡಲಾಗಿದೆ. ಅಗತ್ಯ ಔಷಧಿಗಳ ಕೊರತೆಯಿಂದಾಗಿ ಎಲ್ಲ ರೀತಿಯ ಕಾಯಿಲೆಗಳಿಂದ ಬಳಲುತ್ತಿರುವ ಜನರ ಸಾವುಗಳು ಆಸ್ಪತ್ರೆಗಳಲ್ಲಿ ಸಂಭವಿಸುತ್ತವೆ ಅಥವಾ ಆಹಾರದ ಕೊರತೆಯಿಂದಾಗಿ ರೋಗಗಳಿಗೆ ಗುರಿಯಾಗುವ ಜನರು ಮನೆಯಲ್ಲೇ ಸಾವಿಗೀಡಾಗುತ್ತಾರೆ. ಈ ಕಾರಣದಿಂದಾಗಿ, ಜನರು ಎದುರಿಸುತ್ತಿರುವ ಕಷ್ಟ ಕೋಟಲೆಗಳು ನಾಗರಿಕರ ಮೇಲೆ ನಡೆಸುವ ಬಾಂಬ್ ದಾಳಿಯ ಪರಿಣಾಮಗಳಿಗಿಂತ ಯಾವ ರೀತಿಯಲ್ಲೂ ಕಡಿಮೆ ಭಯಾನಕವಲ್ಲ. ಮಾತ್ರವಲ್ಲ, ಈ ಸಾವುಗಳು ನಿರ್ಬಂಧಗಳೊಂದಿಗೆ ಹೊಂದಿರುವ ಸಂಬಂಧವು ಯಾವುದೇ ರೀತಿಯಲ್ಲಿ ನೇರವಾಗಿ ಕಾಣಿಸಿಕೊಳ್ಳುವುದಿಲ್ಲ. ಇದು ಜನರನ್ನು ಸುಲಭವಾಗಿ ಮೋಸಗೊಳಿಸುತ್ತದೆ.

ನಿರ್ಬಂಧಕ್ಕೊಳಗಾದ ಮೊದಲ ಅಭಿವೃದ್ಧ ದೇಶ

ಈ ಸಮಸ್ಯೆಗಳು ರಷ್ಯಾದ ಪ್ರಕರಣದಲ್ಲಿ ಕಾಣಿಸಿಕೊಳ್ಳಲಿಲ್ಲ. ಕಾರಣವೆಂದರೆ, ಸೋವಿಯತ್ ಒಕ್ಕೂಟದ ದಿನಗಳ ಬಳುವಳಿಯಾಗಿ ಅಭಿವೃದ್ಧಿ ಹೊಂದಿದ ರಷ್ಯಾ, ಒಂದು ವೈವಿಧ್ಯಮಯ ಅರ್ಥವ್ಯವಸ್ಥೆಯನ್ನು ಹೊಂದಿದೆ. ವಾಸ್ತವವಾಗಿ, ಅಭಿವೃದ್ಧಿ ಹೊಂದಿದ ಒಂದು ದೇಶದ ವಿರುದ್ಧ ಸಾಮ್ರಾಜ್ಯಶಾಹಿ ನಿರ್ಬಂಧಗಳನ್ನು ವಿಧಿಸಲಾದ ಮೊದಲ ಪ್ರಕರಣವು ರಷ್ಯಾ ಆಗಿದೆ. ಸಾಮಾನ್ಯವಾಗಿ ಗುರಿಯಾಗುವ ಮೂರನೇ ಜಗತ್ತಿನ ದೇಶಗಳಿಗಿಂತ ಉತ್ತಮವಾಗಿ ಇಂತಹ ನಿರ್ಬಂಧಗಳನ್ನು ರಷ್ಯಾ ತಡೆದುಕೊಂಡಿರುವುದು ಆಶ್ಚರ್ಯವಲ್ಲ. ಜೊತೆಗೆ, ಈಗ ಸಾಮ್ರಾಜ್ಯಶಾಹಿಯು ನಿರ್ಬಂಧಗಳನ್ನು ಹೇರುತ್ತಿರುವ ದೇಶಗಳ ಸಂಖ್ಯೆಯು ಬಹಳವೇ ಆಗಿರುವುದರಿಂದ, ನಿರ್ಬಂಧಗಳ ಕಾರ್ಯಕ್ಷಮತೆಯು ಕಡಿಮೆಯಾಗುತ್ತಿದೆ.

ಅವುಗಳ ವ್ಯಾಪಕತೆಯ ಕಾರಣದಿಂದ ಈ ದಿನಗಳಲ್ಲಿ ನಿರ್ಬಂಧಗಳು ಕಡಿಮೆ ಪರಿಣಾಮಕಾರಿಯಾಗಿವೆ ಎಂಬ ಅಂಶವು ಅಥವಾ ಬೇರೆ ದೇಶಗಳಿಗಿಂತ ರಷ್ಯಾದ ವಿರುದ್ಧ ಕಡಿಮೆ ಪರಿಣಾಮಕಾರಿಯಾಗಿವೆ ಎಂಬ ಅಂಶವು ಏಕಪಕ್ಷೀಯ ನಿರ್ಬಂಧಗಳ ಅಪರಾಧೀ ರೂಪವನ್ನು ಅಣು ಮಾತ್ರವೂ ಕಡಿಮೆ ಮಾಡುವುದಿಲ್ಲ. ಮೂರನೆಯ ಜಗತ್ತಿನ ಜನರ ವಿರುದ್ಧವಾಗಿ ಬಳಸುವ ಈ ನಿರ್ಬಂಧಗಳು, ಸಾಮ್ರಾಜ್ಯಶಾಹಿಯ ಕೈಯಲ್ಲಿರುವ ಒಂದು ಮಾರಕ ಅಸ್ತ್ರವಾಗಿವೆ. ಆದುದರಿಂದ ವಿಶ್ವಸಂಸ್ಥೆಯು ಈ ನಿರ್ಬಂಧಗಳನ್ನೇ ನಿಷೇಧಿಸಬೇಕು. ನಿಜ, ಅಂತಹ ಒಂದು ನಿಷೇಧವು ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ಅನುಮೋದನೆಯನ್ನು ಪಡೆಯದ ಹೊರತು, ಕಾರ್ಯಾಚರಣೆಯ ದೃಷ್ಟಿಯಲ್ಲಿ ವ್ಯತ್ಯಾಸವಾಗುವುದಿಲ್ಲ. ಸಾಮ್ರಾಜ್ಯಶಾಹಿ ದೇಶಗಳು ಭದ್ರತಾ ಮಂಡಳಿಯಲ್ಲಿ ಒಂದು ನಿರ್ಣಾಯಕ ಧ್ವನಿಯನ್ನು ಹೊಂದಿರುವುದರಿಂದ ಅನುಮೋದನೆ ಸಿಗುವುದಿಲ್ಲ. ಆದರೆ, ಏಕಪಕ್ಷೀಯ ನಿರ್ಬಂಧಗಳನ್ನು ನಿಷೇಧಿಸುವ ವಿಶ್ವ ಸಂಸ್ಥೆಯ ನಿರ್ಣಯವು ನೈತಿಕವಾಗಿ ಹೆಚ್ಚು ತೂಕ ಹೊಂದಿರುತ್ತದೆ.

ಆದ್ದರಿಂದ, ಝೆಲೆನ್ಸ್ಕಿ ಭಾರತಕ್ಕೆ ನೀಡಿರುವ ಸಲಹೆಯು, ರಷ್ಯಾದ ವಿರುದ್ಧ ನಡೆಯುತ್ತಿರುವ ಆರ್ಥಿಕ ಯುದ್ಧದಲ್ಲಿ ಭಾರತವು ಭಾಗಿಯಾಗುವಂತೆ ಮಾಡುತ್ತದೆ ಮಾತ್ರವಲ್ಲ, ಯುದ್ಧ–ಅಪರಾಧಗಳಲ್ಲಿ ಭಾರತವು ಭಾಗಿಯಾಗುವಂತೆ ಮಾಡುತ್ತದೆ. ❍

ಪಶ್ಚಿಮದ ಉದಯದ ಕಥನೆ....

ಪುಟ 11 ರಿಂದ

ಮಾನವರನ್ನು ಮಾರುಕಟ್ಟೆಯ ಸರಕುಗಳಂತೆ ಪರಿಗಣಿಸುವ ಈ ಕೆಟ್ಟ ಅಭ್ಯಾಸದ ಕಥನವೇ. ಇದು ಗುಲಾಮ ದುಡಿಮೆಯ ಮೂಲಕ ಉತ್ಪತ್ತಿಯಾಗುವ ಸರಕುಗಳಿಗಿಂತ ಕಡಿಮೆ ಅಮಾನವೀಯವೇನಲ್ಲ. ಇಂಗ್ಲೆಂಡಿನ ಹತ್ತಿ ಗಿರಣಿಗಳ ಬೆನ್ನೆಲುಬಾಗಿದ್ದ ಹತ್ತಿಯೂ ಸಹ ಅಮೆರಿಕದ ದಕ್ಷಿಣದ ಗುಲಾಮ–ತೋಟಗಳಿಂದ ಬಂದಿತು. ಇದನ್ನು ಅಮೆರಿಕನ್ನರು ಈಗಲೂ ಆಂಟೆಬೆಲ್ಲಮ್ ಸೌತ್ (1812–1861ರ ಕಾಲಮಾನದ ಗುಲಾಮಗಿರಿಯ ಆಚರಣೆ ಮತ್ತು ಸಾಮಾಜಿಕ ಸಂಬಂಧಗಳು) ಎಂದು ನೆನಪಿಸಿಕೊಳ್ಳುತ್ತಾರೆ.

ಪ್ಲಾಂಟೇಶನ್ ಅರ್ಥವ್ಯವಸ್ಥೆಯ ಕ್ರೌರ್ಯವು ಅಮೇರಿಕನ್ ಸಾಹಿತ್ಯದ ಮೂಲಕ ಮತ್ತು "ಆಧುನಿಕ" ಹತ್ತಿ ಬೆಳೆಗಾರಿಕೆಯ ಮೂಲಕ ನಮಗೆ ತಿಳಿದಿದೆ. ಕೆರಿಬಿಯನ್ ಪ್ರದೇಶಗಳಲ್ಲಿ ಮತ್ತು ಯುಎಸ್‌ನ ಲೂಯಿಸಿಯಾನದ ಸಕ್ಕರೆ ಪ್ಲಾಂಟೇಷನ್‌ಗಳಲ್ಲಿ ಗುಲಾಮ ಕಾರ್ಮಿಕರ ಸ್ಥಿತಿ ತುಂಬಾ ಕೆಟ್ಟದಾಗಿತ್ತು. ಗುಲಾಮ ವ್ಯಾಪಾರವನ್ನು ನಿಷೇಧಿಸುವ ಮೊದಲು, ಒಬ್ಬ ಗುಲಾಮನನ್ನು ಅಥವಾ ಗುಲಾಮಳನ್ನು ಸರಾಸರಿ ಏಳು ವರ್ಷಗಳ ಸೇವಾವಧಿಯ ನಂತರ ಬದಲಾಯಿಸಲಾಗುತ್ತಿತ್ತು. ಹೊಲಗಳಲ್ಲಿ ಮಕ್ಕಳು ತಮ್ಮ ಪೋಷಕರಿಗೆ ಸಹಾಯಕವಾಗಿ 4–5 ವರ್ಷ ಕೆಲಸ ಮಾಡುತ್ತಿದ್ದರು. ಗುಲಾಮ ಕೆಲಸದ ವೆಚ್ಚವನ್ನು ತೋಟದ ಮಾಲೀಕರ ಲೆಕ್ಕ ಪುಸ್ತಕದಲ್ಲಿ ದಾಖಲಿಸುವ ಕ್ರಮವು ವಾಸ್ತವಿಕವಾಗಿತ್ತು ಮತ್ತು ಸಂಪೂರ್ಣವಾಗಿ "ವೈಜ್ಞಾನಿಕ"ವಾಗಿತ್ತು. ಗುಲಾಮನನ್ನು ಇರಿಸಿಕೊಳ್ಳಲು ಎಷ್ಟು ವೆಚ್ಚ ತಗಲುತ್ತದೆ ಮತ್ತು ಬಂಡವಾಳದ ಮೇಲಿನ ಪ್ರತಿಫಲವು ಅವನನ್ನು "ಬದಲಿ" ಮಾಡಲು ಯಾವಾಗ ಸಾಕಾಗುತ್ತದೆ? ಒಬ್ಬ ಬಂಡವಾಳಶಾಹಿಯು ತನ್ನ ಬಂಡವಾಳ ಉಪಕರಣಗಳ ಮೇಲೆ ಸವಕಳಿಯನ್ನು ಹೇಗೆ ಲೆಕ್ಕ ಹಾಕುತ್ತಾನೆಯೋ ಅದೇ ರೀತಿಯಲ್ಲಿತ್ತು.

ಹದಿನಾರು, ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳಲ್ಲಿ ವ್ಯಾಪಾರದ ಜಾಗತೀಕರಣವು ಪಶ್ಚಿಮದಿಂದ ಚೀನಾ ಮತ್ತು ಭಾರತ ದೇಶಗಳಿಗೆ ಬೆಳ್ಳಿಯ ಹರಿವನ್ನು ಒಳಗೊಂಡಿತ್ತು. ಇದಕ್ಕೆ ಪ್ರತಿಯಾಗಿ ಈ ದೇಶಗಳಿಂದ ರೇಷ್ಮೆ, ಪಿಂಗಾಣಿ, ಮಸಾಲೆಗಳು ಮತ್ತು ಹತ್ತಿ ಜವಳಿಗಳನ್ನು ಯುರೋಪಿಗೆ ಸಾಗಿಸಲಾಯಿತು. ಪೂರ್ವದೊಂದಿಗಿನ ವ್ಯಾಪಾರದಲ್ಲಿ ಸ್ಪ್ಯಾನಿಷ್ ಬೆಳ್ಳಿಯು ಪ್ರಾಥಮಿಕ ಕರೆನ್ಸಿಯಾಗಿತ್ತಾದರೂ, ಡಚ್, ಫ್ರೆಂಚ್ ಮತ್ತು ಬ್ರಿಟಿಷರು ಜಾಗತಿಕ ಮಾರುಕಟ್ಟೆಗಳಿಗೆ ಇತರ ಸರಕುಗಳನ್ನು ಪೂರೈಸಿದರು. ಪೋರ್ಚುಗಲ್ ಮತ್ತು ಸ್ಪೇನ್‌ನೊಂದಿಗೆ ಗುಲಾಮರ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡಿದ್ದ ಈ ಮೂರೂ ಯುರೋಪಿಯನ್ ಶಕ್ತಿಗಳು ಕೆರಿಬಿಯನ್‌ಗೆ ಗುಲಾಮರ ಪ್ರಮುಖ ಪೂರೈಕೆದಾರರಾಗಿದ್ದರು. ಅಧಿಕವಾಗಿ, ಅವರು ಜಾಗತಿಕ ಮಾರುಕಟ್ಟೆಗೆ ಸಕ್ಕರೆಯ ಗಮನಾರ್ಹ ಉತ್ಪಾದಕರಾಗಿದ್ದರು–ವಿಶೇಷವಾಗಿ ಕೆರಿಬಿಯನ್‌ನಲ್ಲಿನ ಸಕ್ಕರೆ ತೋಟಗಳ ಮೂಲಕ. ನಂತರದಲ್ಲಿ ಡಚ್ಚರು, ಪ್ರಾಥಮಿಕವಾಗಿ ಭಾರತೀಯ ಮತ್ತು ಚೀನೀ ಕರಾರು–ಬಂಧಿ ಶ್ರಮಿಕರನ್ನು ಬಳಸಿಕೊಂಡು, ಡಚ್ ಈಸ್ಟ್ ಇಂಡೀಸ್‌ನಲ್ಲಿ ಸಕ್ಕರೆ ತೋಟಗಳನ್ನು ಸ್ಥಾಪಿಸಿದರು; ಬ್ರಿಟಿಷರು ವೆಸ್ಟ್ ಇಂಡೀಸ್ ಮತ್ತು ಮಾರಿಷಸ್‌ನಲ್ಲಿ ಕರಾರು–ಬಂಧಿ ಶ್ರಮಿಕರನ್ನು ಬಳಸಿಕೊಂಡ ರೀತಿಯಲ್ಲಿ.

ಎರಿಕ್ ವಿಲಿಯಮ್ಸ್ ತನ್ನ 'ಬಂಡವಾಳಶಾಹಿ ಮತ್ತು ಗುಲಾಮಗಿರಿ' ಎಂಬ ಕೃತಿಯಲ್ಲಿ ಬ್ರಿಟಿಷ್ ಅರ್ಥವ್ಯವಸ್ಥೆಗೆ ಗುಲಾಮಗಿರಿಯು ನೀಡಿದ "ಕೊಡುಗೆ"ಯ ಬಗ್ಗೆ ಒಂದು ಪ್ರವರ್ತಕ ಅಧ್ಯಯನವನ್ನು ಮಾಡಿದರು. ತರುವಾಯ, ಜೋಸೆಫ್ ಇನಿಕೋರಿ ತನ್ನ 'ಆಫ್ರಿಕನ್ಸ್ ಮತ್ತು ಇಂಗ್ಲೆಂಡ್‌ನಲ್ಲಿ ಕೈಗಾರಿಕಾ ಕ್ರಾಂತಿ' ಎಂಬ ಕೃತಿಯಲ್ಲಿ ಈ ಬಗ್ಗೆ ವಾದಗಳನ್ನು ಮತ್ತಷ್ಟು ಅಭಿವೃದ್ಧಿಪಡಿಸಿದರು. ನಾವು ಕೆಲವರು ಈ ಬಗ್ಗೆ ನಮ್ಮ ಸಂಶೋಧನೆಗಳನ್ನು ಸಂಕ್ಷಿಪ್ತಗೊಳಿಸಿದ್ದೇವೆ ಮತ್ತು ಸಕ್ಕರೆ ಮತ್ತು ಗುಲಾಮಗಿರಿಯ ವಿಷಯದ ಅಧ್ಯಯನದ ಬಗ್ಗೆ ಕಾರ್ಯಪ್ರವೃತ್ತರಾಗಿದ್ದೇವೆ. ಆಫ್ರಿಕಾದೊಂದಿಗಿನ ಬ್ರಿಟಿಷರ ವ್ಯಾಪಾರದಲ್ಲಿ ಜವಳಿ ಮತ್ತು ಗನ್‌ಪೌಡರ್ ಪೂರೈಕೆಯ ಅಂಶಗಳನ್ನು ನಾವು ಅದರಲ್ಲಿ ಸೇರಿಸಬೇಕಾಗಿದೆ. ಯಾವುದನ್ನು ತ್ರಿಕೋನ ವ್ಯಾಪಾರ ಎಂದು ಕರೆಯಲಾಗಿದೆಯೋ ಆ ತ್ರಿಕೋನದ ಯುರೋಪ್–ಆಫ್ರಿಕಾ ಬದಿಯಲ್ಲಿ ಆಫ್ರಿಕಾಕ್ಕೆ ಸರಬರಾಜು ಮಾಡಿದ ಎಲ್ಲವನ್ನೂ ಬ್ರಿಟಿಷರು ಉತ್ಪಾದಿಸಿದರು ಮತ್ತು ತಯಾರಿಸಿದರು ಎಂದು ಭಾವಿಸುತ್ತದೆ. ಅದನ್ನು ಅವರು ಮಾಡಲಿಲ್ಲ. ಆಫ್ರಿಕಾದಲ್ಲಿ ಗುಲಾಮರನ್ನು ಕೊಳ್ಳುವ ವ್ಯಾಪಾರದ ಸರಕುಗಳ ಮೌಲ್ಯದ ಶೇ. 30–50 ಭಾಗವು ಭಾರತದಿಂದ ಬಂದ ಹತ್ತಿ–ಜವಳಿಯನ್ನು ಒಳಗೊಂಡಿತ್ತು. ಸಕ್ಕರೆಯು ಪ್ರಮುಖ ಜಾಗತಿಕ ಸರಕಾಗಿದ್ದ ಈ ಅವಧಿಯಲ್ಲಿ ತಮ್ಮ ಕೈಗಾರಿಕಾ ಕ್ರಾಂತಿಯನ್ನು ಆಂಗ್ಲರು ಇನ್ನೂ ಮಾಡಿರಲಿಲ್ಲ. ಸಿಡಿಮದ್ದು ಇಂಗ್ಲಿಷ್ ಉತ್ಪನ್ನವಾಗಿ ಕಾಣಿಸಿಕೊಂಡಿರಬಹುದು. ಅದು ಅವರ ಉತ್ಪನ್ನ ಅಲ್ಲ. ಗನ್‌ಪೌಡರ್‌ನ ಪ್ರಮುಖ ಘಟಕ ಮತ್ತು ಅದರ ಅತ್ಯಂತ ದುಬಾರಿ ಅಂಶವೆಂದರೆ ಪೆಟ್ಲುಪ್ಪು(ಸಾಲ್ಟ್‌ಪೆಟರ್–ಪೊಟಾಸಿಯಂ ನೈಟ್ರೇಟ್ ಲವಣ). ಇದೂ ಸಹ ಬಂಗಾಳ–ಬಿಹಾರದಿಂದ ಬಂದಿತು.

ಪಶ್ಚಿಮವು ನಮ್ಮನ್ನು ನಂಬಿಸಿರುವ ಹಾಗೆ ಬಂಡವಾಳಶಾಹಿಯ ಇತಿಹಾಸವು ಜ್ಞಾನೋದಯದಿಂದ, ವೈಜ್ಞಾನಿಕ ಕ್ರಾಂತಿಯಿಂದ ಮತ್ತು ಕೈಗಾರಿಕಾ ಕ್ರಾಂತಿಯಿಂದ ಬಂದುದಲ್ಲ. ಮಾರ್ಕ್ಸ್ ಗಮನಿಸಿದಂತೆ, ಬಂಡವಾಳದ ಇತಿಹಾಸವು ಅದರ ಪ್ರತಿ ರಂಧ್ರದಿಂದ ತೊಟ್ಟಿಕ್ಕುವ ರಕ್ತದಿಂದ ಮತ್ತು ಬೆವರಿನಿಂದ ಬಂದಿದೆ. ಇದುವೇ ನಾವು ಮರೆತುಬಿಡಬೇಕೆಂದು ಅವರು ಬಯಸುವ ಇತಿಹಾಸ.

ಕನ್ನಡಕ್ಕೆ ಅನುವಾದ: ಕೆ.ಎಂ.ನಾಗರಾಜ್

ಇಂದಿನ ಸಿನಿಮಾಧ್ಯಮ: ಒಂದು ವಿಮರ್ಶೆ....

ಪುಟ 16 ರಿಂದ

ವರ್ಗವನ್ನು ಕೆಲಸಕ್ಕೆ ಬಾರದ ಅಪ್ರಯೋಜಕರು ಎಂದು ಬಿಂಬಿಸುವುದನ್ನು ವಿಶ್ಲೇಷಿಸಿ ಈ ನೆಲದ ಮೂಲನಿವಾಸಿಗಳಾದ ಆದಿವಾಸಿಗಳು, ಶೂದ್ರರು, ದಲಿತರು ಭೂಮಿಯಿಂದ ಬೆಳೆ ಮತ್ತು ಬಂಗಾರ ತೆಗೆಯುವ ಜ್ಞಾನ ಸಂಪನ್ನರು ಎಂದು ಹೇಳುತ್ತಲೇ, ಬೌದ್ಧ ಧರ್ಮವನ್ನು ನಾಶಪಡಿಸಿ ಮನುವಾದವನ್ನು ಏರಿಕೆ ಮಾಡಿದ ಕುರಿತು ಹೇಳುತ್ತದೆ. ಶ್ರಮಿಕವರ್ಗದ ಶ್ರಮ ಜಮೀನ್ದಾರನಿಗೆ ಬೇಕು, ಚಿನ್ನ ತೆಗೆಯಲು ಬ್ರಿಟಿಷ್ ಅಧಿಕಾರಿಗೂ ಬೇಕು. ಶ್ರಮಿಕವರ್ಗ ಪ್ರಕೃತಿ ನಿಯಮದ ಆಧಾರದಲ್ಲಿ ಬದುಕುವ, ಪ್ರಕೃತಿಯನ್ನು ಲಾಭ ದುರಾಸೆಯಿಂದ ದೋಚದೆ ರಕ್ಷಿಸುವ ವರ್ಗವಾಗಿದೆ. ಇದು ವೈಜ್ಞಾನಿಕ ವಿಧಾನವಾಗಿದೆ.

ಭಾರತೀಯ ಸಂವಿಧಾನ ಭಾರತದ ಜನತೆಯನ್ನು 'ನಾಗರಿಕರು' ಎಂದು ಹೇಳುತ್ತದೆ. 'ನಾಗರಿಕ' ಎಂದರೆ ಸಂವಿಧಾನ ಕೊಟ್ಟಿರುವ ಕರ್ತವ್ಯಗಳನ್ನು ನಿಭಾಯಿಸುವುದು ಮತ್ತು ಸಂವಿಧಾನ ಕೊಡುವ ಹಕ್ಕುಗಳನ್ನು ಪಡೆಯುವುದು. "ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಜಿಜ್ಞಾಸೆಯ ಮತ್ತು ಸುಧಾರಣೆಯ ಅನುಕಂಪ ತೋರಿಸುವುದು" 51ಎ(ಎಚ್) ಸಂವಿಧಾನದ ಕಲಂನಲ್ಲಿ ಹೇಳಲಾಗಿದೆ. ಇಂದು ನಮ್ಮ ಕೈಯಲ್ಲಿರುವ ಸ್ಮಾರ್ಟ್ ಫೋನ್ ಕ್ಷಣದಲ್ಲಿ ನಮಗೆ ವಿಶ್ವದ ಜ್ಞಾನವನ್ನು ನೀಡುತ್ತದೆ. ಭಾರತದ ಆಳುವವರ್ಗ ಮತ್ತು ಸಂಘಪರಿವಾರದ ಎಲ್ಲಾ ಕುತಂತ್ರಗಳನ್ನು ಶೂದ್ರ, ದಲಿತ ಎಡಪಂಥೀಯ, ಪ್ರಗತಿಪರರು, ಬುದ್ಧಿಜೀವಿಗಳು ಮೊದಲಾದ ಶ್ರಮಿಕವರ್ಗದ ಮಿತ್ರರು ಕ್ಷಣದಲ್ಲಿ ಬಯಲಿಗೆಳೆದು ಪ್ರತಿ ಸವಾಲನ್ನು ಒಡ್ಡುತ್ತಿದ್ದು, ಇಂದು ತಳಮಟ್ಟದಲ್ಲಿ, ಪ್ರತಿ ಮನೆಯಲ್ಲಿ, ಪ್ರತಿ ವ್ಯಕ್ತಿಯ ದೇಹ ಮತ್ತು ಮನಸ್ಸನ್ನು ಮನೋದೈಹಿಕವಾಗಿ ವಿಕಾಸಗೊಳಿಸಿ, ಸಾಂವಿಧಾನಿಕ ಬದ್ಧ ಹಕ್ಕುಗಳನ್ನು ಅವರು ಇರುವಲ್ಲಿಗೆ ತಲುಪಿಸುವ ತುರ್ತು ಕೆಲಸ ಮಾಡಬೇಕಾಗಿದೆ. ಅದಕ್ಕಾಗಿ ಶ್ರಮಿಕವರ್ಗ ಮತ್ತು ಅವರ ಮಿತ್ರರು, ಹಿತೈಷಿಗಳು ಸನ್ನದ್ಧರಾಗಿ, ಸಂವಿಧಾನ ಕೊಟ್ಟ ಕರ್ತವ್ಯಗಳನ್ನು ನಿಭಾಯಿಸುವ ಹಕ್ಕನ್ನು ಕೇಳುವಂತೆ ಪ್ರತಿ ನಾಗರೀಕರನ್ನು ತರಬೇತಿಗೊಳಿಸಬೇಕಾಗಿದೆ. ❍

NEW No. MAG(3)/NPP/205/2021-2022
JANASHAKTHI KANNADA VARA PATRIKE September 9-15, 2024 Price: Rs. 10/- Date of Publication: 6 September 2024 RNI No. KARKAN /2006/17926 Posted on 11-09-2024
Posted at BG PSO, BG - 560026 **Posted at Periodical Rate -** Rs. 2

ಇಂದಿನ ಸಿನಿಮಾಧ್ಯಮ: ಒಂದು ವಿಮರ್ಶೆ:

ಶ್ರಮಿಕ ವರ್ಗದ ಬದುಕು ಬವಣೆಗಳನ್ನು ತೋರಿಸುವ ಕೆಲವೇ ಸಿನಿಮಾಗಳು

ಆಳುವ ವರ್ಗ ತನ್ನ ಆಸ್ತಿ ಮತ್ತು ಅಧಿಕಾರವನ್ನು ಉಳಿಸಿಕೊಳ್ಳಲು ಶ್ರಮಿಕ ವರ್ಗವನ್ನು ನಿರಂತರವಾಗಿ ಶೋಷಣೆ ಮತ್ತು ದಮನಕ್ಕೆ ಒಳಪಡಿಸುತ್ತ ಬಂದಿದೆ. ಈ ಶೋಷಣೆ ಮತ್ತು ದಮನಕ್ಕೆ ಬೇಕಾದ ವಿಚಾರಧಾರೆಯನ್ನು ಪುರೋಹಿತಶಾಹಿ ಒದಗಿಸುತ್ತದೆ. ಆಳುವವರ್ಗ ಶ್ರಮಿಕವರ್ಗದ ದೇಹಕ್ಕೆ ಬಂಧನ ವಿಧಿಸಿದರೆ, ಪುರೋಹಿತಶಾಹಿ ವರ್ಗ ಶ್ರಮಿಕ ವರ್ಗದ ಮೆದುಳಿಗೆ ಬಂಧನ ವಿಧಿಸುತ್ತದೆ. ಇದಕ್ಕಾಗಿ ಸಿನಿಮಾರಂಗವನ್ನು ತನ್ನ ವಿಚಾರಗಳನ್ನು ಹರಡಲು ಬಳಕೆ ಮಾಡಿಕೊಳ್ಳುತ್ತಾರೆ. ಇದರ ನಡುವೆಯೂ ಭಾರತದಲ್ಲಿ ದಲಿತ ಸಮುದಾಯ ಮತ್ತು ಇತರೆ ಸಮುದಾಯದ ಶ್ರಮಿಕ ವರ್ಗಗಳು ಶತಮಾನಗಳಿಂದ ಎದುರಿಸುತ್ತಿರುವ ಕ್ರೂರ ದಮನವನ್ನು ತಿಳಿಸಲು ಸಮರ್ಥವಾಗಿರುವ ಸಿನಿಮಾಗಳು ಬರತೊಡಗಿವೆ. ಈ ಸಿನಿಮಾಗಳು ದಲಿತರ ಮೇಲಿನ ದಬ್ಬಾಳಿಕೆಯನ್ನು ರೋಮ್ಯಾಂಟಿಕ್ ಮಾಡುವ ಬದಲು, ದುಃಖ, ಶೋಷಣೆ ಮತ್ತು ಪ್ರತಿರೋಧದ ಕಥೆಗಳನ್ನು ಅನುಭವದ, ಭೌತವಾದಿ ದೃಷ್ಟಿಕೋನದಿಂದ ನಿರೂಪಿಸಲು ಸಮರ್ಥವಾಗಿವೆ. ಈ ಕುರಿತಂತೆ ಎಸ್.ಶಂಕರ್ ಅವರ ವಿಶ್ಲೇಷಣೆ.

ಭಾರತದಲ್ಲಿ ಪುರೋಹಿತಶಾಹಿಯ ವಿಚಾರಧಾರೆ 'ಮನುಸ್ಮೃತಿ'ಯು ವರ್ಣವ್ಯವಸ್ಥೆಯಾಗಿದೆ. ಈ ವಿಚಾರಧಾರೆಯಲ್ಲಿ ಆಳುವ ವರ್ಗಗಳಿಂದ ಶೂದ್ರ, ದಲಿತ ಮತ್ತು ಶ್ರಮಿಕ ವರ್ಗದ ಮೇಲೆ ಶೋಷಣೆ ಮತ್ತು ದಮನಗಳು ನಡೆಯುತ್ತವೆ. ಭಾರತಕ್ಕೆ ಬ್ರಿಟಿಷರು ಬರುವುದಕ್ಕೂ ಮೊದಲು ಇಲ್ಲಿ ಆಡಳಿತ ನಡೆಸುತ್ತಿದ್ದವರು ಮನುಸ್ಮೃತಿಯ ಬ್ರಾಹ್ಮಣರು, ಪ್ರಧಾನ ಶೋಷಕ ವರ್ಗವಾದ ಕ್ಷತ್ರಿಯರು ಅಥವಾ ದೊರೆಗಳು, ರಾಜ, ಮಹಾರಾಜ, ಸುಲ್ತಾನರು, ಜಮೀನ್ದಾರರು.

ಬ್ರಿಟಿಷರು ನಾಲ್ಕನೇ ಆಂಗ್ಲ–ಮೈಸೂರು ಯುದ್ಧವನ್ನು ಗೆದ್ದ ಮೇಲೆ ತಮ್ಮ ಸಾಮ್ರಾಜ್ಯ ವಿಸ್ತರಣೆಗೆ ನಡೆಸಿದ ನಿರಂತರ ಯುದ್ಧಗಳು, ಯುದ್ಧಗಳಿಗಾಗಿ ಭಾರತೀಯರ ಮೇಲೆ ಹೊರಿಸುತ್ತಿದ್ದ ತೆರಿಗೆಗಳು ಸೈನಿಕರ ಮತ್ತು ಶ್ರಮಿಕ ವರ್ಗದ ಬಂಡಾಯಕ್ಕೆ ಕಾರಣವಾಗಿ, 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾಯಿತು. ಬ್ರಿಟಿಷರು ಆ ಬಂಡಾಯವನ್ನು ಧಮನಮಾಡಿದರು.

ಬ್ರಿಟಿಷರು ಆಡಳಿತವನ್ನು ಸಂಘಟಿಸಲು ಜನಗಣತಿ ಆರಂಭಿಸಿದಾಗ ಬೌದ್ಧ, ಮುಸ್ಲಿಂ, ಕ್ರೈಸ್ತರಲ್ಲದ ವೃತ್ತಿ ಆಧಾರಿತ ಜಾತಿಯ ಜನರನ್ನು 'ಹಿಂದು' ಎಂಬ ಶಬ್ದದಿಂದ ಗುರುತಿಸಿದರು. ಭಾರತೀಯ ಸಮಾಜದ ಶ್ರಮಿಕವರ್ಗದ ಮೇಲೆ ತನ್ನ ಹಿಡಿತ ಕಡಿಮೆಯಾಗುತ್ತಾ ಬರುತ್ತಿದ್ದಂತೆ ಮನಸ್ಮೃತಿಯ ಬ್ರಾಹ್ಮಣರು ಜಾಗೃತರಾಗಿ 'ಹಿಂದೂ ಮಹಾಸಭಾ' ಕಟ್ಟಿದರು. ಈ ಹಿಂದೂ ಮಹಾಸಭಾ ಆರ್‌ಎಸ್‌ಎಸ್ ಅನ್ನು ಸ್ಥಾಪಿಸಿ ದೇಶದಾದ್ಯಂತ ವ್ಯವಸ್ಥಿತವಾಗಿ ಕಟ್ಟಿತು.

ಕಾರ್ಮಿಕ ಮತ್ತು ರೈತ ವರ್ಗ ಸಂಘಟನೆಗಳು ಜಾತಿಗಳ ಒಳಗೆ ಮುಚ್ಚಿರುವ ವರ್ಗ ಶೋಷಣೆಯನ್ನು ಮುಚ್ಚುಮರೆ ಇಲ್ಲದೆ ತೋರಿಸಿದವು. ವರ್ಗ ಸಂಘಟನೆಗಳ ಜೊತೆ ಜೊತೆಗೆ ಬಂದ ಕಮ್ಯುನಿಸ್ಟರು, ಸಮಾಜವಾದಿಗಳು, ಅಂಬೇಡ್ಕರ್, ದಲಿತ ಚಳುವಳಿಗಳಿಂದಾಗಿ ಭಾರತೀಯ ಸಮಾಜದಲ್ಲಿ ಶ್ರಮಿಕ ವರ್ಗ ಒಂದಾಗುತ್ತ, ಆಳುವ ವರ್ಗದ ಮೇಲೆ ತನ್ನ ಎಲ್ಲಾ ಹಕ್ಕುಗಳಿಗೆ ಹೋರಾಡುತ್ತಿದ್ದಂತೆ, ಆಳುವ ವರ್ಗವು ಶ್ರಮಿಕ ವರ್ಗವನ್ನು ದಾರಿ ತಪ್ಪಿಸುವ ತಂತ್ರವಾಗಿ ಆರ್‌ಎಸ್‌ಎಸ್ ಅನ್ನು ಒಳಗಿನಿಂದಲೇ ಬಲಪಡಿಸುತ್ತಾ ಬಂತು.

ಭಾರತದ ಪುರೋಹಿತಶಾಹಿ ಮನಸ್ಮೃತಿಯ ಬ್ರಾಹ್ಮಣರು ಶ್ರೇಷ್ಠತೆಯನ್ನು ಎತ್ತಿ ಹಿಡಿಯಲು ಜಾತಿ ವ್ಯವಸ್ಥೆಯನ್ನು ಬಲಪಡಿಸುವ ಹಿಂದೂ ಪದವನ್ನು ಬಳಸಿ, ಆರ್‌ಎಸ್‌ಎಸ್ 'ಮನಸ್ಮೃತಿಯ ವೈಶ್ಯರ ಆಡಳಿತದ(ಬಂಡವಾಳಶಾಹಿ) ಕಾಲಕ್ಕೆ ಹೊಂದಿಸಿತು. ಮುಸ್ಲಿಂ ಮತ್ತು ಕ್ರೈಸ್ತ ಅಲ್ಪಸಂಖ್ಯಾತರ ಮೇಲೆ ದ್ವೇಷವನ್ನು ಬೆಳೆಸಿತು. ರಾಮನವಮಿ, ಗಣೇಶನ ಉತ್ಸವ ಮೊದಲಾದ ರೂಪದಲ್ಲಿ ಜಾತಿ ಭಾವನೆಗಳನ್ನು ಹಿಂದೆ ಸರಿಸಿ, ಕೋಮು ಭಾವನೆಗಳನ್ನು ನಿರಂತರವಾಗಿ ಬಲಪಡಿಸಿತು. ಸ್ವಾತಂತ್ರ ಹೋರಾಟಗಳು, ಜಮೀನ್ದಾರಿ ವಿರುದ್ಧ, ಬಂಡವಾಳಶಾಹಿ ವಿರುದ್ಧ, ಅಸ್ಪೃಶ್ಯತೆ ವಿರುದ್ಧದ ಶ್ರಮಿಕ ವರ್ಗದ ಹೋರಾಟಗಳು ತೀವ್ರವಾಗುತ್ತಾ ಹೋದಂತೆ ಆಳುವವರ್ಗ, ಆರ್‌ಎಸ್‌ಎಸ್ ಮತ್ತು ಮುಸ್ಲಿಂ ಲೀಗ್ ಅನ್ನು ಬಲಪಡಿಸುತ್ತ ಹೋಗಿ ದೇಶ ವಿಭಜನೆಗೆ ಕಾರಣವಾಯಿತು.

ದೇಶ ಸ್ವತಂತ್ರವಾದ ನಂತರ ಆರ್‌ಎಸ್‌ಎಸ್ ಎಲ್ಲಾ ರಂಗದಲ್ಲಿ ಒಳ ನುಸುಳಿ ನಿಧಾನವಾಗಿ ಸಮಾಜವನ್ನು ಜಾತಿ, ಧರ್ಮಗಳ ಆಧಾರದಲ್ಲಿ ಒಡೆಯುವ ಭಾವನೆಗಳನ್ನು ತುಂಬತೊಡಗಿತು. ಈ ಕಾರ್ಯಕ್ಕೆ ಹೆಚ್ಚು ವ್ಯವಸ್ಥಿತವಾಗಿ ಬಳಸಿಕೊಂಡ ಕ್ಷೇತ್ರ ಸಿನಿಮಾರಂಗ. ಆರ್‌ಎಸ್‌ಎಸ್ ಸಿನಿಮಾ ರಂಗದಲ್ಲಿ ಒಳ ನುಸುಳಿ ಮನಸ್ಮೃತಿಯ ವಿಚಾರಧಾರೆಯನ್ನು ಜನರ ಮನಸ್ಸಿನಲ್ಲಿ ಹನಿ ಹನಿಯಾಗಿ ತುಂಬುತ್ತ ಬಂದು, ಭಾರತೀಯ ಚಿತ್ರರಂಗದಲ್ಲಿ ಆಳವಾಗಿ ಬೇರೂರಿತು.



ರಾಜೀವ್ ಗಾಂಧಿಯವರು 1986ರಲ್ಲಿ ಬಾಬರಿ ಮಸೀದಿಯ ಬಾಗಿಲು ತೆಗೆಸಿದ ಕೃತ್ಯವು 1989ರಲ್ಲಿ ರಾಮ ಮಂದಿರದ ಶಿಲನ್ಯಾಸಕ್ಕೆ ಅವಕಾಶ ಮಾಡಿಕೊಟ್ಟಿತು. ವಿ.ಪಿ.ಸಿಂಗ್ ಆಡಳಿತದಲ್ಲಿ ಜಾರಿಗೆ ಬಂದ ಮಂಡಲ್ ಆಯೋಗದ ವರದಿ ಶೂದ್ರ, ದಲಿತ ಜಾತಿಗಳಿಗೆ, ಇತರೆ ಹಿಂದುಳಿದ ಜಾತಿಗಳಿಗೆ ನೀಡಿದ ಮೀಸಲಾತಿ ಮತ್ತು ಆರೆಸ್ಸೆಸ್ ನ ರಾಜಕೀಯ ಸಂಘಟನೆಯಾದ ಬಿಜೆಪಿ ನಾಯಕ ಅಡ್ವಾನಿಯ ರಥಯಾತ್ರೆ, ಇವುಗಳಿಂದಾಗಿ ಅದು ರಾಜಕೀಯವಾಗಿ ಬೆಳೆಸಲು ಅವಕಾಶವಾಯಿತು. 1991ರ ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣ ನೀತಿಗಳಿಂದ ಆಳುವ ವರ್ಗ ಮತ್ತು ಆರೆಸ್ಸೆಸ್ ಮತ್ತಷ್ಟು ಬೆಸೆದುಕೊಂಡವು. ಆಳುವ ವರ್ಗಗಳ ಜೊತೆ ಸಂಘಪರಿವಾರ ಎಲ್ಲೆಡೆ ವಿಜೃಂಭಿಸತೊಡಗಿತು. ಪ್ರಭುತ್ವದ ಅಧಿಕಾರದೊಳಗೆ ಸ್ಥಾಪಿತಗೊಂಡಿತು.



ಇದು ಸಿನಿಮಾ ಮಾಧ್ಯಮ, ಟಿವಿ, ಮುದ್ರಣ ಮಾಧ್ಯಮ, ಸಾಮಾಜಿಕ ಮಾಧ್ಯಮಗಳಲ್ಲಿ ಗೋಚರಿಸತೊಡಗಿತು. ಮೊದಲನೆಯದು; ದೇವರು, ದೆವ್ವ, ಭೂತಗಳ ಗ್ರಾಫಿಕ್ ತಂತ್ರಜ್ಞಾನದ ಸಿನಿಮಾ, ಟಿವಿ ದಾರವಾಹಿಗಳಾಗಿ. ಎರಡನೆಯದು; ಬಂಡವಾಳಶಾಹಿ ಮೌಲ್ಯಗಳನ್ನು ಬಿತ್ತುವ "ಏನಾದರೂ ಮಾಡಿ ದುಡ್ಡು ಮಾಡು", "ಮೋಜು ಮಸ್ತಿ ಮಾಡು" ಎಂಬುದಾಗಿದೆ. ಇದಕ್ಕೆ ಬೇಕಾದಂತೆ ನೂರಾರು ಕೋಟಿ ಒಡೆಯರ, ಜಮೀನ್ದಾರರ, ಮೇಲ್ಮಧ್ಯಮ ವರ್ಗದ ಜೀವನವನ್ನು ಆಧರಿಸಿದ ಸಿನಿಮಾಗಳು, ದಾರವಾಹಿಗಳಲ್ಲಿ, ಸಾಂಸ್ಕೃತಿಕ ಆಚರಣೆಯ ದೃಶ್ಯಗಳಲ್ಲಿ ಕೇಸರಿ ಬಾವುಟ, ಮೊದಲಾದ ಬ್ರಾಹ್ಮಣ್ಯದ ಶ್ರೇಷ್ಠತೆಯನ್ನು ಎತ್ತಿ ತೋರಿಸುವ, ಮದ್ಯಪಾನ, ದೂಮಪಾನ ಮಾಡುವ ದೃಶ್ಯಗಳನ್ನು ತುಂಬಲಾಯಿತು. ಬಹುತೇಕ ನೂರರಲ್ಲಿ 95 ಚಲನಚಿತ್ರ, ಟಿವಿ ಧಾರವಾಹಿಗಳಲ್ಲಿ ಹಿಂಸೆಯನ್ನು ಪ್ರಚೋದಿಸುವ ದೃಶ್ಯಗಳನ್ನು ತೋರಿಸಲಾಯಿತು. ಸಾಮಾಜಿಕ ಮಾಧ್ಯಮದಲ್ಲಿ ಕ್ಷಣ ಕ್ಷಣವೂ ಸುಳ್ಳು ಸುದ್ದಿಗಳನ್ನು ಹಬ್ಬಿಸಲು ಅದು ಬಳಸಿಕೊಂಡಿತು.

ದೇವರು, ದೆವ್ವ, ಭೂತ, ಮೋಜು ಮಸ್ತಿ, ಮದ್ಯಪಾನ, ಧೂಮಪಾನದ ದೃಶ್ಯಗಳು ಆಳುವ ವರ್ಗ ನಮ್ಮ ಎಲ್ಲ ಕಷ್ಟಗಳಿಗೂ ಕಾರಣವಲ್ಲ ಎಂದು ದಿಕ್ಕು ತಪ್ಪಿಸುತ್ತವೆ. ದೇವರ ದರ್ಶನ, ದೇವಾಲಯಗಳ ಯಾತ್ರೆ, ಪೂಜೆ ಪುರಸ್ಕಾರ, ಹೋಮ ಹವನಗಳು ಶ್ರಮಿಕ ವರ್ಗದ ಹಣವನ್ನು ಪುರೋಹಿತಶಾಹಿಗಳ ಕೈ ಸೇರುವಂತೆ ಮಾಡಿದರೆ, ಮೋಜು–ಮಸ್ತಿ, ದೂಮಪಾನ, ಮದ್ಯಪಾನಗಳು ಉದಾರೀಕರಣದಿಂದ ಸರ್ಕಾರಗಳು ಶ್ರೀಮಂತರಿಗೆ ತೆರಿಗೆ ಕಡಿಮೆ ಮಾಡಿ, ಈ ಕೊರತೆಯನ್ನು ಶ್ರಮಿಕ ವರ್ಗದಿಂದ ತುಂಬುವ ಸಾಧನವಾಗಿಸಿತು. ಇದರ ಇನ್ನೊಂದು ಪರಿಣಾಮ ಶ್ರಮಿಕ ವರ್ಗದಲ್ಲಿ ಸಂಪತ್ತು ಶೇಖರಣೆಯಾಗದಂತೆ ನೋಡಿಕೊಂಡು, ಅವರನ್ನು ಸದಾಕಾಲ ದಟ್ಟ ದಾರಿದ್ರ್ಯತೆಯಲ್ಲಿ ಇಡುವುದಾಗಿದೆ. ಇನ್ನು ಹಿಂಸೆಯ ದೃಶ್ಯಗಳಂತು ಆಳುವ ವರ್ಗದ ಮೇಲಿರುವ ಕೋಪವನ್ನು ಅಲ್ಪಸಂಖ್ಯಾತರ ಕಡೆಗೆ ತಿರುಗಿಸುವುದಾಗಿದೆ. ಸುಳ್ಳು ಸುದ್ದಿಗಳಂತೂ ಮನುವಾದಿಗಳ ಹುಟ್ಟುಗುಣವಾಗಿದೆ. ಸುಳ್ಳುಗಳಿಲ್ಲದೆ 'ಮನಸ್ಮೃತಿ'ಯ ಪುರೋಹಿಶಾಹಿಗಳು ಅಥವಾ ಆರ್‌ಎಸ್‌ಎಸ್ ಇಲ್ಲ.

ಕಾರಣ ಹೀಗಿದ್ದಾಗ್ಯೂ ಆಳುವ ವರ್ಗಕ್ಕೆ ಎದುರಾಗಿ ಶ್ರಮಿಕ ವರ್ಗದ ಬದುಕು ಭವಣೆಗಳನ್ನು ತೋರಿಸುವ 'ಜೈ ಭೀಮ್' 'ಮಾಮನ್ನನ್' (ಮಹಾರಾಜ), 'ಕಾಟೇರ', 'ತಂಗಳಾನ್', 'ವಾಳೈ' ಮೊದಲಾದ ಚಿತ್ರಗಳು ಶ್ರಮಿಕ ವರ್ಗದ ಬದುಕಿನ ಪ್ರಶ್ನೆಗಳನ್ನು ಬೇರೆ ಬೇರೆ ಆಯಾಮಗಳಲ್ಲಿ ಮುನ್ನಡೆಗೆ ತಂದಿವೆ. ಈ ಚಿತ್ರಗಳು ಜನತೆಯ ಪ್ರೀತಿ ಸಂಪಾದಿಸಿ ಉತ್ತಮ ಗಳಿಕೆಯನ್ನು ಸಂಪಾದಿಸಿವೆ. ಸಿನಿಮಾರಂಗ ಬಹುಪಾಲು ಕಾರ್ಪೊರೇಟೀಕರಣ ಮತ್ತು ಕೋಮುವಾದೀಕರಣಕ್ಕೆ ಒಳಗಾಗಿರುವ ಮತ್ತು ಸಿನಿಮಾ ನಿರ್ಮಾಣಕ್ಕೆ ಕೋಟ್ಯಂತರ ರೂ.ಗಳ ಹೂಡಿಕೆ ಮಾಡಿ ಹಿಂಪಡೆಯುವುದು ದೊಡ್ಡ ಸವಾಲಾಗಿರುವ ಇಂದಿನ ಕಠಿಣ ಸಂದರ್ಭದಲ್ಲಿ ಈ ಚಿತ್ರಗಳಲ್ಲಿ ಹಣ ತೊಡಗಿಸಿದ ನಿರ್ಮಾಪಕರು ನಿರ್ದೇಶಕರು, ನಟರುಗಳು ಹಾಗೂ ಸಂಪೂರ್ಣ ಚಿತ್ರತಂಡಕ್ಕೆ ಧನ್ಯವಾದ ಮತ್ತು ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ.

'ಜೈ ಭೀಮ್' ಸಂವಿಧಾನಬದ್ಧ ಹಕ್ಕಿಗೆ ಹೋರಾಡಿದರೆ 'ಮಾಮನ್ನನ್' ಒಬ್ಬ ದಲಿತ ಜಮೀನ್ದಾರನ ಎಲ್ಲಾ ಕುತಂತ್ರಗಳನ್ನು ಸೋಲಿಸಿ ಶಾಸಕನಾಗಿ ಗೆಲ್ಲುವುದಾಗಿದೆ. 'ಪೋಟೋ' ಅವೈಜ್ಞಾನಿಕ ಲಾಕ್ ಡೌನ್ ನಿಂದ ಶ್ರಮಿಕವರ್ಗ ಅನುಭವಿಸಿದ ಅಮಾನವೀಯ ನೋವನ್ನು ಹಾಗೂ ನಷ್ಟದ ದಾಖಲೆಯನ್ನು ನೀಡುತ್ತದೆ. 'ಕಾಟೇರ' ಜಮೀನ್ದಾರಿ ಮತ್ತು ಬ್ರಾಹ್ಮಣ ಶ್ರೇಷ್ಠತೆಯ ಶೋಷಣೆಯ ವಿರುದ್ಧವಾಗಿದ್ದರೆ, 'ಭೀಮ' ಮಿಣ ಮಿಣ ಮಿನುಗುವ ಬೆಂಗಳೂರಿನ ಒಳಗಿರುವ 300 ಸ್ಲಂಗಳು ನಿರ್ದೇಶಕ ವಿಜಯಕುಮಾರ್ ಹೇಳುವಂತೆ ಬಡವರ ಕಾಲೋನಿಯ ಜನರ ಬದುಕಿನ ಮಾದಕದ್ರವ್ಯದ ವ್ಯಸನದ ಕುರಿತಾಗಿದೆ. ಕಪ್ಪು ಸಿನಿಮಾ ನಾಯಕಿ, ಕಪ್ಪು ಮಹಿಳಾ ದಕ್ಷ ಪೊಲೀಸ್ ಅಧಿಕಾರಿಯು ಮಾದಕ ದ್ರವ್ಯ ಮಾಫಿಯಾ ವಿರುದ್ಧ ನಾಯಕನ ಜೊತೆಗೆ ಕೈಜೋಡಿಸಿ ಹೋರಾಡುವುದು, ಮಾಫಿಯಾಗೆ ಸಂಪೂರ್ಣ ಬೆಂಬಲ ನೀಡುವ ಶಾಸಕ ಮತ್ತು ಅವನ ಮಗ, ಆತನ ಚೇಲಾಗಳು ಇವೆಲ್ಲವೂ ನಿಜಜೀವನಕ್ಕೆ ಹತ್ತಿರವಾದಂತೆ 'ಭೀಮ' ಸಿನಿಮಾ ಕಣ್ಣ ಮುಂದೆ ನಡೆದಂತೆ ಭಾಶವಾಗುತ್ತದೆ.

ವಾಳೈ ಸಿನಿಮಾದಲ್ಲಿ ಪರಿಶಿಷ್ಟ ಜಾತಿಯ ಜನರ ಮತ್ತು ಕೂಲಿ ಕಾರ್ಮಿಕರ ಶೋಷಣೆಯನ್ನು ಮತ್ತು ಇವುಗಳ ವಿರುದ್ದದ ಕೂಲಿ ಕಾರ್ಮಿಕರ ಹೋರಾಟ ಇವುಗಳನ್ನು ಕೇಂದ್ರೀಕರಿಸಿ ಚಿತ್ರಕಥೆ ರಚಿಸಿದ್ದಾರೆ ನಿರ್ದೇಶಕರು.

'ತಂಗಳಾನ್' ಸಿನಿಮಾ ಒಂದು ಶ್ರಮಿಕ ವರ್ಗದ 250 ವರ್ಷಗಳ ಹಿಂದಿನ ಬದುಕಿನ ಚಿತ್ರಣವನ್ನು ನೀಡುತ್ತದೆ. ಶ್ರಮಿಕ ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**